ಸಂಪುಟ 22 ಸಂಚಿಕೆ 20-21
ಮೇ 21, 2000 ಬೆಲೆ ರೂ. 3.00

ದುಡಿವ ಜನರ ಪ್ರಾಣಮಿತ್ರ


ಪೆಕ್ಯಾರಂಗ

ನಿರುದ್ಯೋಗ ಎಂಬ ಪೆಡಂಭೂತ



ಮೇ 11 ರ ಮುಷ್ಕರ

ಬಿಜೆಪಿ ಸರ್ಕಾರಕ್ಕೆ ಎಚ್ಚರಿಕೆಯ ನೋಟೀಸು




ದೇವದಾಸಿಯರ ಸಂಕಟಗಳು

ಪಿಯುಸಿ ಅಧ್ಯಾಪಕರ ಮುಷ್ಕರ

ಹೊಣೆಗೇಡಿ ಸರ್ಕಾರ

ದೇಶದ ಅಭಿವೃದ್ಧಿ ಪಥಕ್ಕೆ ಮರೆಯಲಾಗದ ಕಾಣಿಕೆ ನೀಡಿದ

ಕಾಂ. ಬಿನೋಯ್ ಚೌಧುರಿ ಇನ್ನಿಲ್ಲ



ಪ.ಬಂಗಾಳ ರಾಜ್ಯ ಇಂದು ತನ್ನ ಪಂಚಾಯತ್‌ರಾಜ್ಯ ವ್ಯವಸ್ಥೆ ಮೂಲಕ ನಿಜವಾದ ಪ್ರಜಾಪ್ರಭುತ್ವವನ್ನು ಅರಳಿಸುವ ವಿಶ್ವದಲ್ಲಿಯೇ ಹೆಸರಾಗಿದೆ. ವಿಶ್ವಸಂಸ್ಥೆಯು ಅನೇಕ ಅಂಗ ಸಂಸ್ಥೆಗಳು, ಮಾನವ ಅಭಿವೃದ್ಧಿ ವರದಿಗಳು, ಕೊನೆಗೆ ಇಡೀ ವಿಶ್ವದಲ್ಲಿ ಪ್ರಜಾಪ್ರಭುತ್ವದ ಕತ್ತು ಹಿಸುಕುತ್ತಿರುವ ವಿಶ್ವಬ್ಯಾಂಕ್ ಸಂಸ್ಥೆಗಳೂ ಕೂಡ ಇದನ್ನು ಹಾಡಿಹೊಗಳಿವೆ. ಪ್ರಪಂಚದ ಸಮಾಜವಾದಿ ದೇಶಗಳು ಕೂಡ - ಚೀನಾ ಕೂಡ ಇಲ್ಲಿಯ ಪಂಚಾಯತಿ ವ್ಯವಸ್ಥೆಯ ಆಳವಾದ ಅಧ್ಯಯನ ಮಾಡಿದೆ.

ಹಾಗೆಯೇ ಪ.ಬಂಗಾಲ ಇಂದು ತನ್ನ 24 ವರ್ಷಗಳ ಕಾಲದ ದೀರ್ಘ ಆಳ್ವಿಕೆಯ ಮೂಲಕ ಪ್ರಪಂಚಕ್ಕೆ ಹೆಸರಾಗಿದೆ. ಕೃಷಿ ಉತ್ಪಾದನೆಯಲ್ಲಿ - ಅದರಲ್ಲಿಯೂ ಮುಖ್ಯವಾಗಿ ಆಹಾರ ಉತ್ಪಾದನೆಯಲ್ಲಿ ಪಂಜಾಬ್ ಹರ್ಯಾಣಗಳನ್ನು ಮೀರಿಸಿದೆ.

ಈ ಎಲ್ಲಾ ಬೆಳವಣಿಗೆಯ ಅಡಿಪಾಯ ಪ.ಬಂಗಾಳದ ಭೂಸುಧಾರಣೆ. ಇಂದು ಪಂಚಾಯತ್ ರಾಜಗಾಗಿ ಹೆಸರಾದಂತೆ 80 ದಶಕಗಳಲ್ಲಿ ಪ.ಬಂಗಾಲ 'ಅಪೇರೇಷನ್ ಬರ್ಗಾ'ಕ್ಕೆ ಹೆಸರಾಗಿತ್ತು. ಭಾರತದಲ್ಲಿ ಕೇವಲ ಮೂರು ರಾಜ್ಯಗಳಲ್ಲಿ ಮಾತ್ರ ಕಾಣಸಿಗುವ ದೃಶ್ಯ ಇದು - ಗೇಣಿದಾರನೊಬ್ಬ ತನ್ನನ್ನು ಎಂದು ಓಡಿಸುತ್ತಾರೆ ಎಂಬ ಚಿಂತೆಯಿಲ್ಲದೆ ನೆಮ್ಮದಿಯಿಂದ ನಿದ್ದೆ ಮಾಡಬಹುದಾದ, ಅವರ ಮಕ್ಕಳೂ ಕೂಡ ಗೇಣಿ ಹಕ್ಕನ್ನು ಪಡೆಯುವಂತೆ ಖಾತರಿ ಮಾಡಿದ್ದು ಈ ಆಪರೇಷನ್ ಬರ್ಗಾ.

ಪಶ್ಚಿಮ ಬಂಗಾಳದ ರೈತ ಸಂಘದ ಅಪ್ರತಿಮ ನಾಯಕ ಬಿನೋಯ್ ಕೃಷ್ಣ ಚೌಧುರಿಯವರ ದುಡಿಮೆಯ ಅನುಭವದ ಅದು. 2 ದಶಕಗಳ ಕಾಲ ಪ.ಬಂಗಾಲದ ಭೂಸುಧಾರಣೆ ಗ್ರಾಮೀಣ ಅಭಿವೃದ್ಧಿ, ಪಂಚಾಯತ್ ರಾಜ್ಯ ಹಾಗೂ ಯೋಜನೆಯ ಮಂತ್ರಿಗಳಾಗಿ ಪ.ಬಂಗಾಲಕ್ಕೆ ಹೆಸರು ತಂದ ಈ ಮೇಲಿನ ಎಲ್ಲ ಕಾರ್ಯಕ್ರಮದ ನೇತೃತ್ವ ವಹಿಸಿದವರು ಬಿನೋಯ್ ಚೌಧುರಿಯವರು ಎಂದರೆ ಅವರ ಕೊಡುಗೆಯ ಬಗ್ಗೆ ಅರಿವಾದೀತು. ಹೆಮ್ಮೆ ಗೌರವ ಮೂಡೀತು. ಇಂತಹ ಸಾಧನೆಗಳ ಅಪ್ರತಿಮ ಸಂಗಾತಿ ಕಾಂ. ಬಿನೋಯ್ ಕೃಷ್ಣ ಚೌಧುರಿಯವರು ಇನ್ನಿಲ್ಲ.

ದಿನಾಂಕ 6.5.2000 ರಂದು ರಾತ್ರಿ 10 ಗಂಟೆಯ ವೇಳೆಗೆ ಅವರು ಕೊನೆಯ ಉಸಿರೆಳೆದರು. ದೀರ್ಘಕಾಲ ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯರಾಗಿದ್ದು ಪಕ್ಷದ ಜೀವನದಲ್ಲಿ, ಹಲವು ಸೈದ್ಧಾಂತಿಕ ಚರ್ಚೆಯಲ್ಲಿ ನಿರ್ಣಾಯಕ ಪಾತ್ರವಹಿಸಿದ್ದರು. ಅಖಿಲ ಭಾರತ ಕಿಸಾನ್ ಸಭಾದ ಅಧ್ಯಕ್ಷರಾಗಿಯೂ ಕೆಲಸ ಮಾಡಿದ್ದಾರೆ.

ತಮ್ಮ ಈ ಕೆಲಸದ ಮೂಲಕ ಇಡೀ ದೇಶದ ಅಭಿವೃದ್ಧಿಯ ಪರ್ಯಾಯ ಮಾರ್ಗವನ್ನು ರೂಪಿಸುವುದಕ್ಕೆ ಮಹತ್ವದ ಕಾಣಿಕೆ ನೀಡಿದ್ದಾರೆ. ಈ ಹಿರಿಯ ಸಂಗಾತಿಗೆ 'ಐಕ್ಯರಂಗ' ತನ್ನ ನುಡಿನಮನಗಳನ್ನು ಸಲ್ಲಿಸುತ್ತದೆ.

- ಸಂಪಾದಕ

ತಟ್ಟನೆ ಕಣ್ಣೀರು ತುಳುಕಿತು

ಇಡೀ ಪಶ್ಚಿಮ ಬಂಗಾಳದಲ್ಲಿಯೇ ತಮ್ಮ ಸರಳ ಜೀವನಕ್ಕೆ ಹೆಸರಾದವರು ಕಾಂ. ಬಿನೋಯ್‌ದಾ. ತಮ್ಮ ಜೀವನದ ಕಡೆಯ ಗಳಿಗೆಯಲ್ಲಿಯೂ ತಮ್ಮ ಆದರ್ಶವನ್ನು ಮೆರೆದಿದ್ದಾರೆ. ಬಿನೋಯ್‌ದಾ, 15 ವರ್ಷಗಳ ಹಿಂದೆ ದೆಹಲಿಯಲ್ಲಿ ಅಂದಿನ ಅಖಿಲ ಭಾರತದ ಕಿಸಾನ್ ಸಭಾದ ಕಾರ್ಯದರ್ಶಿ ಶಾಂತಿಮೊಯ್ ಘೋಷ್‌ರವರು ನನಗೆ ಪರಿಚಯ ಮಾಡಿಕೊಟ್ಟಂದಿನಿಂದಲೂ ನನಗೆ ವೈಯಕ್ತಿಕವಾಗಿ ತಂದೆಯ ಸಮಾನವಾಗಿದ್ದವರು. ಅನೇಕ ವಿಷಯಗಳ ಬಗ್ಗೆ ಅವರೊಡನೆ ಚರ್ಚೆ ಮಾಡುತ್ತಿದ್ದೆ.

ಒಂದು ಸಾವಿರ ರೂಪಾಯಿ ಕೈಯಲ್ಲಿಲ್ಲದ ಮಂತ್ರಿ

ಒಂದು ದಿನ ಇದ್ದಕ್ಕಿದ್ದಂತೆ ನಮ್ಮ ಪಕ್ಷದ ಅಂದಿನ ಸುಲ್ತಾನ್ ಪೇಟೆ ರಾಜ್ಯ ಸಮಿತಿ ಕಛೇರಿಯಲ್ಲಿ ಕುಳಿತಿದ್ದಾಗ ಫೋನ್ ರಿಂಗಣಗುಟ್ಟಿತು. ಫೋನ್ ಕಲ್ಕತ್ತಾದಿಂದ ಎಂದಾಗ ನನಗೆ, ಆಶ್ಚರ್ಯವಾಯಿತು. ಆ ಕಡೆಯ ತುದಿಯಲ್ಲಿದ್ದವರು ಕಾಂ. ಬಿನೊಯ್‌ದಾ. ಫೋನಿನ ಮೇಲೆ ಅವರೊಂದು ವಿನಂತಿ ಮಾಡಿದರು. ನಮ್ಮ ಸಂಭಾಷಣೆ ಹೀಗಿತ್ತು.

ಕಾಂ. ಬಿನೋಯ್‌ದಾ: ನಮ್ಮ ಮಗನಿಗೆ ಬಾಟಾ ಕಂಪನಿಯಲ್ಲಿ ಬೆಂಗಳೂರಿಗೆ ನೇಮಕವಾಗಿದೆ. ಅವನಿಗೆ ಬೆಂಗಳೂರಿನಲ್ಲಿ ಒಂದು ಮನೆ ಬೇಕು. ಹೆಂಡತಿ ಮತ್ತು ಒಂದು ಮಗುವಿನೊಂದಿಗೆ ಇರುವುದಕ್ಕೆ ಅನುಕೂಲವಾಗುವಂತೆ ಒಂದು ಮಲಗುವ ಕೊಠಡಿ ಇರುವಂತಹ ಮನೆ ಬೇಕು. ಹುಡುಕಿಕೊಡಿ.

ನಾಗರಾಜ್: ಆಗಲಿ ಕಾಮ್ರೇಡ್ ಸಂತೋಷದಿಂದ. ಬೆಂಗಳೂರಿನಲ್ಲಿ ಮನೆಯೊಂದಕ್ಕೆ ಒಂದೂವರೆ ಸಾವಿರ ರೂ ಬಾಡಿಗೆಯಾಗುತ್ತದೆ ಹಾಗೂ 15-20,000 ಅಡ್ವಾನ್ಸ್ ಕೊಡಬೇಕಾಗುತ್ತದೆ.

ಬಿನೋಯ್‌ದಾ: ಅಲ್ಲಪ್ಪಾ ನಾನೊಬ್ಬ ಪಕ್ಷದ ಪೂರ್ಣಕಾಲದ ಕಾರ್ಯಕರ್ತ. ಮಂತ್ರಿಯಾಗಿದ್ದರೂ ಕೂಡ ನನ್ನ ವೇತನ ತಿಂಗಳಿಗೆ ನಾನೂರು ರೂ. ನೀನೂ ಒಬ್ಬ ಪೂರ್ಣಕಾಲದ ಕಾರ್ಯಕರ್ತನಾಗಿ ನನ್ನ ಕಷ್ಟ ನಿನಗೆ ಅರ್ಥವಾಗಬಹುದು.

ನಾಗರಾಜ್: ಹಾಗಾದರೆ ನೀವು ಎಷ್ಟು ಅಡ್ವಾನ್ಸ್ ಕೊಡಬಹುದು?

ಬಿನೊಯ್ ದಾ: ನೋಡಪ್ಪಾ ಈಗ ನನ್ನ ಬಳಿ ಒಂದು ಸಾವಿರ ರೂಪಾಯಿ ಇದೆ. ಅಷ್ಟನ್ನು ಮಾತ್ರ ತರಲು ಸಾಧ್ಯ. ಇನ್ನು ಮೂರು ದಿನಗಳಲ್ಲಿ ಬೆಂಗಳೂರಿಗೆ ರೈಲಿನಲ್ಲಿ ಬರುತ್ತೇನೆ. ಒಂದು ಮನೆಯನ್ನು ನೋಡಿರು.

ಒಂದು ಸಾವಿರ ರೂ! ಈಗಾಗಲೇ ಪ.ಬಂಗಾಲದಲ್ಲಿ ಅತ್ಯಂತ ಪ್ರಬಲ ಮಂತ್ರಿಯಾಗಿ 10 ವರ್ಷ ಆಗ್ಗೆ ಕಳೆದಿರುವ ಕಾಂ. ಬಿನೋಯ್ ಬಳಿ ಇರುವುದು ಕೇವಲ ಒಂದು ಸಾವಿರ! ಜ್ಯೋತಿಬಸು ವಿದೇಶಕ್ಕೆ ಹೋದಾಗಲೆಲ್ಲ ಮುಖ್ಯಮಂತ್ರಿಯ ಸ್ಥಾನವನ್ನು ನಿರ್ವಹಿಸುವ ಬಿನೋಯ್‌ರವರ ಬಳಿ ಮನೆ ಅಡ್ವಾನ್ ನೀಡಲು ಹಣವಿಲ್ಲ. ಇದನ್ನು ಯೋಚಿಸುತ್ತಾ ನನ್ನ ಕಣ್ಣಲ್ಲಿ ತಟ್ಟನೆ ನೀರು ತುಳುಕಿತು. ಪಕ್ಷದ ಕಮ್ಯುನಿಸ್ಟ್ ಆದರ್ಶಗಳ ಬಗ್ಗೆ ಹೆಮ್ಮೆ ಗೌರವ, ಅತ್ಯಂತ ಆತ್ಮೀಯತೆಯ ಉಂಟಾಯಿತು.

ಇದನ್ನು ನಂಬಲು ಸಾಧ್ಯವೇ! ಇಂದಿನ ಭಾರತದ ಸಮಾಜದ ಸ್ಥಿತಿಯಲ್ಲಿ ಯಾರಾದರೂ ಇದನ್ನು ನಂಬುವರೇ?

ಕೊನೆಗೂ ಬೆಂಗಳೂರಿಗೆ ಬಿನೊಯ್‌ರವರು ರೈಲಿನಲ್ಲಿಯೇ ಬಂದರು. ಸ್ವಂತ ಖರ್ಚಿನಲ್ಲಿ ಟಿಕೇಟು ತೆಗೆಸಿ ಕೊನೆಗೂ ಕೇವಲ ಒಂದು ಸಾವಿರ ರೂ ಮಾತ್ರ ತಂದರು. ಆಗ ಒಂದು ಸಾವಿರ ರೂಪಾಯಿಗೆ ಪ.ಬಂಗಾಳದ ದೀರ್ಘಕಾಲದ ಮಂತ್ರಿಯ ಮಗನಿಗೆ ಯಾವ ಮನೆಯ ಬಾಗಿಲೂ ತೆರೆಯಲಿಲ್ಲ. ಮನೆ ಮಾಲೀಕರು ಈ ಕಥೆ ಕೇಳಿ ಗಹಗಹಿಸಿ ನಕ್ಕಿದ್ದು, ವ್ಯಂಗ್ಯವಾಡಿದ್ದಷ್ಟೇ ಫಲ.

ಕೊನೆಗೆ ಪಕ್ಷದ ಸಂಗಾತಿಗಳು ತಮ್ಮ ಮನೆಯೊಳಗೇ ಹಲವು ಕಾಲ ಈ ದಂಪತಿಗಳನ್ನು ಒಂದು ಕೊಠಡಿ ನೀಡಿ ಇರಿಸಿಕೊಳ್ಳಬೇಕಾಯಿತು. ○

ಶರಣರ ಜೀವನವನ್ನು ಮರಣದಲ್ಲಿ ನೋಡಿ

ಪಕ್ಷದ ಈ ಮಹಾನಾಯಕನ ಅಂತಿಮ ಯಾತ್ರೆ ಈ ರೀತಿ ಆಯಿತು.

○ ಅವರು ನಿಧನರಾದ ಆಸ್ಪತ್ರೆಯಿಂದ ಪಕ್ಷದ ರಾಜ್ಯ ಸಮಿತಿಯ ಕಛೇರಿ ಮುಜಾಫರ್ ಅಹಮದ್ ಭವನಕ್ಕೆ. ಅಲ್ಲಿ ಅರ್ಧದಿನ

○ ಮುಜಾಫರ್ ಅಹಮದ್ ಭವನದಿಂದ ವಿಧಾನ ಸಭಾ ಭವನಕ್ಕೆ ಅಲ್ಲಿಂದ ರೈಟರ್ಸ್ ಬಿಲ್ಡಿಂಗ್(ರಾಜ್ಯ ಸರ್ಕಾರದ ಕೇಂದ್ರ ಕಛೇರಿ)ಗೆ.

○ ನಂತರ ರೈಟರ್ಸ್ ಬಿಲ್ಡಿಂಗ್‌ನಿಂದ ಎನ್.ಆರ್.ಎಸ್. ಮೆಡಿಕಲ್ ಕಾಲೇಜು ಆಸ್ಪತ್ರೆಗೆ.


ಅಲ್ಲಿಗೆ ಈ ಆತ್ಮೀಯ ಸಂಗಾತಿಯ ಅಂತಿಮ ಪಯಣಕ್ಕೆ ಕೊನೆ. ಇದನ್ನು ಓದಿದವರಿಗೆ ಆಶ್ಚರ್ಯವಾಗಬಹುದು. ಆದರೆ ಆಸ್ಪತ್ರೆಗೇ ಕೊನೆ. ಅರೆ! ಮುಂದೆ!! ಅಷ್ಟೆ!

ಈ ಮಹಾಜೀವದ ಕಳೇಬರ!! ಆಸ್ಪತ್ರೆಗೆ ಕೊಡುಗೆ

ಶರಣರ ಜೀವನವನ್ನು ಮರಣದಲ್ಲಿಯೂ ನೋಡಬಹುದು.

ಬೆಲೆ ಏರಿಕೆ! ಬೆಲೆ ಏರಿಕೆ!! ಇಂದು ಎಲ್ಲೆಡೆಯೂ ಈ ಕೂಗು ಎದ್ದಿದೆ. ಬೆಲೆ ಏರಿಕೆ ಮತ್ತು ಪಡಿತರ ವ್ಯವಸ್ಥೆಗೆ ಪ್ರಸಿದ್ಧವಾದ ಕೇರಳ, ಪ.ಬಂಗಾಳದಲ್ಲಿ ದೊಡ್ಡ ಆಹಾರ ಚಳುವಳಿಗಳಿಂದ ಈ ವ್ಯವಸ್ಥೆ ರೂಪುಗೊಂಡ ಬಗೆಯನ್ನು ಜ್ಯೋತಿಬಸು ಇಲ್ಲಿ ವಿವರಿಸುತ್ತಾರೆ.

ಮತ್ತೆ ಬೆಲೆ ಏರಿಕೆ - ಬರಗಾಲದ ಬೇಗೆ



ಈ ನಡುವೆ, ಜೀವನಾವಶ್ಯಕ ಸಾಮಗ್ರಿಗಳ ಬೆಲೆಗಳು ಮತ್ತೆ ಏರತೊಡಗಿದ್ದವು. 1957 ಮೇ ನಲ್ಲಿ ಅಂದಿನ ಕೇಂದ್ರ ಹಣಕಾಸು ಸಚಿವ ಕೃಷ್ಣಮಾಚಾರಿ ಆ ವರ್ಷದ ಬಜೆಟ್ ಮಂಡಿಸುವ ಸಂದರ್ಭದಲ್ಲಿ ಚಹಾ, ಕಾಫಿ, ಸಕ್ಕರೆ, ಕಾಗದ, ಬೆಂಕಿ ಪೆಟ್ಟಿಗೆ, ಸಿಮೆಂಟ್, ಸೀಮೆಎಣ್ಣೆ ಮತ್ತು ಪೆಟ್ರೋಲ್ ಮೇಲೆ ಭಾರೀ ತೆರಿಗೆಗಳನ್ನು ವಿಧಿಸಿದರು. ಸ್ವಾತಂತ್ರ್ಯಾನಂತರ ಇದು ಸಾಮಾನ್ಯ ಪ್ರವೃತ್ತಿಯಾಗಿತ್ತು, ವ್ಯಾಪಾರೋದ್ಯಮಿಗಳಿಗೆ ಸಬ್ಸಿಡಿಗಳು ಮತ್ತು ಜನಸಾಮಾನ್ಯರಿಗೆ ತೆರಿಗೆಯ ಹೊರೆ!

ಕೇಂದ್ರ ಸರಕಾರದ ಜನವಿರೋಧಿ ತೆರಿಗೆ ನೀತಿಯ ವಿರುದ್ಧ ನಾವು ಸಭೆಗಳನ್ನು ನಡೆಸಲು ಆರಂಭಿಸಿದೆವು. ಈ ಬಜೆಟ್‌ನಿಂದ ದೇಶ 'ಆಘಾತಗೊಂಡಿದೆ' ಎಂದು ಹಣದುಬ್ಬರ ಮತ್ತು ಬರಗಾಲದ ವಿರುದ್ಧ ಹೋರಾಡಲು ರಚಿಸಲಾದ ಸಮಿತಿಯ ಮುಖಂಡರು ಹೇಳಿದರು.

ಸ್ವಾತಂತ್ರ್ಯಾನಂತರ ಇದು ಸಾಮಾನ್ಯ ಪ್ರವೃತ್ತಿಯಾಗಿತ್ತು, ವ್ಯಾಪಾರೋದ್ಯಮಿಗಳಿಗೆ ಸಬ್ಸಿಡಿಗಳು ಮತ್ತು ಜನಸಾಮಾನ್ಯರಿಗೆ ತೆರಿಗೆಯ ಹೊರೆ!

ಮೇ 30 ರಂದು ಸಾರ್ವತ್ರಿಕ ಮುಷ್ಕರ ನಡೆಸಲು ಸಮಿತಿ ಕರೆ ನೀಡಿತು. ರಾಜ್ಯದಲ್ಲಿ ಬಂದ್ ಯಶಸ್ವಿಯಾಗಿ ನಡೆಯಿತು. ಬೆಲೆಯೇರಿಕೆ ಮತ್ತು

ಆಹಾರ ಬಿಕ್ಕಟ್ಟಿನ ವಿರುದ್ಧ ಜೂನ್‌ನಲ್ಲಿ ಅಸೆಂಬ್ಲಿ ವರೆಗೆ ಬೃಹತ್ ರ್‍ಯಾಲಿ ನಡೆಸಲಾಯಿತು. ರಾಜ್ಯಾದ್ಯಂತ ನ್ಯಾಯಬೆಲೆ ಅಂಗಡಿಗಳನ್ನು ತೆರೆಯುವಂತೆ ನಾವು ಒತ್ತಾಯಿಸಿದೆವು. ವ್ಯಾಪಕ ಪರಿಹಾರ ಕ್ರಮಗಳು, ಸಂತ್ರಸ್ತ ಪ್ರದೇಶಗಳಲ್ಲಿ ಸಾಲಮನ್ನಾ, ದೊಡ್ಡ ಪ್ರಮಾಣದಲ್ಲಿ ಕೃಷಿ ಸಾಲ ನೀಡಿಕೆ, ಒಕ್ಕಲೆಬ್ಬಿಸುವುದರ ವಿರುದ್ಧ ಕಾನೂನು ರಚನೆ, ಅಕ್ರಮ ದಾಸ್ತಾನು ವಿರೋಧಿ ಕಾನೂನಿನ ತತ್‌ಕ್ಷಣದ ಅನುಷ್ಠಾನ ಮತ್ತು ಈಗಾಗಲೇ ಭರವಸೆ ನೀಡಿರುವ ಪ್ರಕಾರ

ನೀಡಬೇಕು- ಇವೇ ಮೊದಲಾದ ಬೇಡಿಕೆಗಳನ್ನು ಮಂಡಿಸಿದೆವು.

ಆಹಾರ ಬಿಕ್ಕಟ್ಟು ಗಂಭೀರವಾಗಿದೆಯೆಂದು ನಾಡಿಯಾ, 24-ಪರಗಣ, ಮಿಡ್ನಾಪುರ ಮತ್ತು ಹೌರಾಗಳಿಂದ ಸುದ್ದಿ ಬರತೊಡಗಿತು. ಬರದಿಂದ ಒಂಭತ್ತು ಜನರು ಸತ್ತ ಸುದ್ದಿ ಆಗಸ್ಟ್‌ನಲ್ಲಷ್ಟೇ ಬಂತು. ಕಲ್ಕತ್ತದ ರಸ್ತೆಗಳು ಮತ್ತೆ ಹಸಿವಿನಿಂದ ಕಂಗೆಟ್ಟ ಜನರಿಂದ ತುಂಬತೊಡಗಿದವು. ಅವರೆಲ್ಲ ತಮ್ಮ ಹಳ್ಳಿಗಳನ್ನು ಬಿಟ್ಟು ಬಂದವರಾಗಿದ್ದರು. ದುರ್ಗಾಪೂಜೆಯ ಮುಂಚೆಯೇ ಅಸೆಂಬ್ಲಿ ಅಧಿವೇಶನ ಕರೆಯಬೇಕೆಂದು ನಮ್ಮ ಮನವಿಯನ್ನು ಸರಕಾರ ತಿರಸ್ಕರಿಸಿತು.

ಕಮ್ಯುನಿಸ್ಟ್ ಪಕ್ಷದ ಪ್ರಾಂತೀಯ ಸಮಿತಿಯ ವಿಸ್ತೃತ ಸಭೆಯಲ್ಲಿ ನಾವು ಆಹಾರ ಬಿಕ್ಕಟ್ಟನ್ನು ಚರ್ಚಿಸಿದೆವು. ಬರಗಾಲದ ಬಿಕ್ಕಟ್ಟನ್ನು ಪರಿಶೀಲಿಸಲು

ಸಮಾಲೋಚಿಸಿದೆವು. ಸೆಪ್ಟೆಂಬರ್ ಮಧ್ಯಭಾಗದಲ್ಲಿ ಶಾಂತಿಯುತ ಪ್ರಜಾಸತ್ತಾತ್ಮಕ ಚಳುವಳಿಯನ್ನು ಆರಂಭಿಸಲು ನಿರ್ಧರಿಸಲಾಯಿತು.

ಕಾನೂನುಭಂಗ ಕಾರ್ಯಕ್ರಮಗಳು ಆರಂಭವಾದವು. ಮೊದಲ ದಿನವಾದ ಸೆಪ್ಟೆಂಬರ್ 16 ರಂದು ಹರೇಕೃಷ್ಣ ಕೋನಾರ್ ಮತ್ತು ಬಿನೋಯ್ ಚೌಧರಿ ಸಹಿತ 185 ಸ್ವಯಂಸೇವಕರು ಬಂಧಿತರಾದರು. ಎರಡನೇ ದಿನ ಇನ್ನೂ 450

ಎಸ್ಮಾ ಜಾರಿ: ಉಪನ್ಯಾಸಕರ ಬಂಧನ ಹೊಣೆಗೇಡಿ ಸರ್ಕಾರದ ದಮನ

ಪಿ.ಯು.ಸಿ. ಉಪನ್ಯಾಸಕರ ಮುಷ್ಕರ

ಕೆ.ಎನ್. ಉಮೇಶ್

ರಾಜ್ಯಾದ್ಯಂತ 12,000ಕ್ಕೂ ಹೆಚ್ಚು ಪದವಿ ಪೂರ್ವ ಶಿಕ್ಷಣ ಉಪನ್ಯಾಸಕರು ಏಪ್ರಿಲ್ 19 ರಿಂದ ದ್ವಿತೀಯ ಪಿ.ಯು.ಸಿ. ಉತ್ತರ ಪತ್ರಿಕೆಗಳ ಮೌಲ್ಯಮಾಪನ ಬಹಿಷ್ಕರಿಸಿ ಮುಷ್ಕರ ನಿರತರಾಗಿದ್ದಾರೆ. ರಾಜ್ಯದ ಪಿ.ಯು.ಸಿ. ಅಧಿಕಾರಿಗಳ, ಪ್ರಾಂಶುಪಾಲರ, ಉಪನ್ಯಾಸಕರ ಹಾಗು ಭೋದಕೇತರ ಸಿಬಂದಿಗಳ ಸಂಘಟನೆಗಳ ಒಕ್ಕೂಟವು ವೇತನ ಪರಿಷ್ಕರಣೆ, ಖಾಲಿಯಿರುವ ಉಪನ್ಯಾಸಕರ - ಸಿಬ್ಬಂದಿಗಳ ಸ್ಥಾನಗಳಿಗೆ ನೇಮಕಾತಿ, ಅರೆಕಾಲಿಕ ಉಪನ್ಯಾಸಕರ ಖಾಯಂಗೊಳಿಸುವಿಕೆ, ಪಿ.ಯು.ಸಿ. ಪದವಿ ತರಗತಿಗಳ ಬೇರ್ಪಡಿಸುವಿಕೆ ಇತ್ಯಾದಿ ಒಟ್ಟು 12 ಬೇಡಿಕೆಗಳ ಆಧಾರದಲ್ಲಿ ಮುಷ್ಕರಕ್ಕೆ ಮೌಲ್ಯಮಾಪನ ಬಹಿಷ್ಕಾರಕ್ಕೆ ಕರೆ ನೀಡಿದೆ. ಸಂಘಟನೆಯ ಕರೆಗೆ ಪ್ರಚಂಡವಾಗಿ ಸ್ಪಂದಿಸಿರುವ ಉಪನ್ಯಾಸಕರು, ಸರ್ಕಾರದ ಯಾವುದೇ ಬೆದರಿಕೆಗೂ ಜಗ್ಗದೆ ಮುಷ್ಕರನಿರತರಾಗಿದ್ದಾರೆ.

ಕಳೆದ 14 ವರ್ಷಗಳಿಂದ ತಮ್ಮ ಬೇಡಿಕೆಗಳಿಗೆ ಸರ್ಕಾರ ಸಕಾರಾತ್ಮಕ ಪ್ರತಿಕ್ರಿಯೆ ತೋರಿಲ್ಲ, ಪದವಿ ಶಿಕ್ಷಕರು ಹಾಗೂ ತಮಗೆ ಒಂದೇ ವಿದ್ಯಾರ್ಹತೆಯನ್ನು ಬಯಸುವ ಹಾಗು ಸಮಾನ ಕೆಲಸ ಬಯಸುವ ಸರ್ಕಾರ ಏಕೆ ವೇತನ ನೀಡುವಲ್ಲಿ ತಾರತಮ್ಯ ಮಾಡುತ್ತಿದೆ ಎಂಬುದು ಉಪನ್ಯಾಸಕರ ವಾದ. ಸುಮಾರು 25 ದಿನ ದಾಟಿರುವ ಮುಷ್ಕರವನ್ನು ಮಾತುಕತೆ ಮೂಲಕ ಬೇಡಿಕೆಗಳನ್ನು ಸಹಾನುಭೂತಿಯಿಂದ ಪರಿಶೀಲಿಸಿ, ಬೆಲೆ ಏರಿಕೆಗೆ ತಕ್ಕಂತೆ ವೇತನ ಪರಿಷ್ಕರಣೆಯ ಪ್ರಸ್ತಾಪಮಾಡಲು ಮನಸ್ಸಿಲ್ಲದ ರಾಜ್ಯ ಸರ್ಕಾರ, ಉಪನ್ಯಾಸಕರ ವೇತನ ಪರಿಷ್ಕರಣೆ ಬೇಡಿಕೆಯನ್ನು -ಯುಜಿಸಿ ವೇತನ ಕೇಳುತ್ತಿದ್ದಾರೆ. 3 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಹಾಗೂ ಅವರ ಪೋಷಕರನ್ನು ಆತಂಕಕ್ಕೀಡು ಮಾಡಿದ್ದಾರೆ ಎಂದು ಹೇಳುತ್ತಾ ಪದವಿ ಉಪನ್ಯಾಸಕರನ್ನು ಪಿಯುಸಿ ಉಪನ್ಯಾಸಕರ ವಿರುದ್ಧ ಹಾಗೂ ವಿದ್ಯಾರ್ಥಿ-ಪೋಷಕರನ್ನು ಉಪನ್ಯಾಸಕರ ವಿರುದ್ಧ ಎತ್ತಿ ಕಟ್ಟುವ ಪ್ರಯತ್ನ ನಡೆಸಿದ್ದಾರೆ. ಮುಷ್ಕರ 24 ದಿನಗಳನ್ನು ದಾಟುತ್ತಿದ್ದಂತೆ "ಅಗತ್ಯ ಸೇವಾ ನಿರ್ವಹಣಾ ಕಾಯ್ದೆ" (ESMA) ಜಾರಿಗೆ, ಸಚಿವ ಸಂಪುಟ ನಿರ್ಣಯ ಕೈಗೊಂಡಿದ್ದು, ಪೊಲೀಸ್ ಇಲಾಖೆಯೊಂದಿಗೆ ಚರ್ಚಿಸಿ ಮೌಲ್ಯಮಾಪನಕ್ಕೆ ಹಾಜರಾಗದ ಉಪನ್ಯಾಸಕರನ್ನು ಬಂಧಿಸಲು ಸನ್ನದ್ದರಾಗಿರಲು ಸೂಚಿಸಿದೆ.

ಬೇಡಿಕೆಗಳಿಗೆ ಒತ್ತಾಯಿಸಿ ಮುಷ್ಕರ ಮಾಡುತ್ತೇವೆಂದು ಹೇಳಿದಾಗಲೆಲ್ಲ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ, ಪಿ.ಯು.ಸಿ. ಹಂತ ವಿದ್ಯಾರ್ಥಿಗಳ ಜೀನವಕ್ಕೆ ಮಹತ್ತರ ತಿರುವು ನೀಡುವಂತಹ ಮಹತ್ತರ ಹಂತ, ಈ ಹಂತದಲ್ಲಿ ವಿದ್ಯಾರ್ಥಿಗಳ ಜೀವನದೊಂದಿಗೆ ಚೆಲ್ಲಾಟವಾಡುವುದು ತರವಲ್ಲ, ಅದರಲ್ಲೂ "ಗುರು ದೇವೋಭವ" ಹೇಳುವಂತೆ, ದೇವರ ಸಮನಾದ ಉಪನ್ಯಾಸಕರು ಮುಷ್ಕರ ಮಾಡುವುದು ತರವಲ್ಲ ಎಂಬ ವಾದಗಳಿಗೆ ಮಣಿದು, ಬೇಡಿಕೆಗಳ ಪಟ್ಟಿಯನ್ನಷ್ಟೇ ಸರ್ಕಾರಗಳಿಗೆ ಸಲ್ಲಿಸಿ ಎಚ್ಚರಿಕೆ ನೀಡುವ ಪರಿಪಾಠ ನಡೆದಿತ್ತು.

98 ರಲ್ಲೊಮ್ಮೆ ಇದೇ ರೀತಿ ಮುಷ್ಕರಕ್ಕೆ ಮುಂದಾದಾಗ, ಅಂದಿನ ಜೆ.ಹೆಚ್. ಪಟೇಲ್‌ರ ನೇತೃತ್ವದ ಸರ್ಕಾರ ಹೆಚ್ಚುವರಿ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ, ಉಪನ್ಯಾಸಕರ ಪ್ರತಿನಿಧಿಗಳನ್ನೊಳಗೊಂಡಿದ್ದ ಸಮಿತಿಯೊಂದನ್ನು ರಚಿಸಿತ್ತು. ಸಮಿತಿಗೆ ಪಿ.ಯು. ಉಪನ್ಯಾಸಕರ ವೇತನ ಇತ್ಯಾದಿ ಬೇಡಿಕೆಗಳ ಕುರಿತು ಅಧ್ಯಯನ ನಡೆಸಿ, ವರದಿ ಸಲ್ಲಿಸಲು ಸೂಚಿಸಲಾಗಿತ್ತು. ಇದುವರೆಗೆ 5 ಭಾರಿ ಸಭೆ ಸೇರಿರುವ ಸಮಿತಿ, ಇನ್ನೇನು ವರದಿ ನೀಡುವುದರಲ್ಲಿತ್ತು. ಇಲ್ಲಿಗೆ ಸುಮಾರು ಎರಡು ತಿಂಗಳ ಹಿಂದೆ ಇದೇ ಶಿಕ್ಷಣ ಸಚಿವರಾದ ವಿಶ್ವನಾಥ್‌ರವರು ಉಪನ್ಯಾಸಕರ ಸಂಘಟನೆಯ ಸಭೆಯೊಂದನ್ನುದ್ದೇಶಿಸಿ, ಸಮಿತಿಯ ವರದಿಯ ಆಧಾರದಲ್ಲಿ ವೇತನ ಪರಿಷ್ಕರಿಸುತ್ತೇವೆ ಎಂಬ ಆಶ್ವಾಸನೆಯನ್ನು ನೀಡಿದ್ದರು, ಎಂಬುದು ಉಪನ್ಯಾಸಕರ ವಾದ. ಆದರೆ ಮುಷ್ಕರವನ್ನು ಪ್ರಾರಂಭಿಸಿದ ನಂತರ, ಮೊದಲ ಬಾರಿಗೆ ಉಪನ್ಯಾಸಕರ ಪ್ರತಿನಿಧಿಗಳೊಂದಿಗೆ ಮಾತುಕತೆ ನಡೆಸಿದ ಮುಖ್ಯಮಂತ್ರಿ ಎಸ್.ಎಂ. ಕೃಷ್ಣರವರ, ಯು.ಜಿ.ಸಿ. ವೇತನ ಒಂದನ್ನು ಬಿಟ್ಟು ಬೇರೆಲ್ಲಾ ಬೇಡಿಕೆಗಳನ್ನು ಈಡೇರಿಸುತ್ತೇವೆ, ಪಿ.ಯು.ಸಿ. ಹಾಗೂ ಪದವಿಗಳನ್ನು ಬೇರ್ಪಡಿಸುತ್ತೇವೆ, ಎಂದು ಹೇಳುತ್ತಾ, ಅವರ ಬೇಡಿಕೆಗಳ ಕುರಿತು ಅಧ್ಯಯನ ನಡೆಸಲು 98ರಲ್ಲಿ ರಚಿಸಿದ್ದ ಹೆಚ್ಚುವರಿ ಕಾರ್ಯದರ್ಶಿಗಳ ನೇತೃತ್ವದ ಸಮಿತಿಯನ್ನು ಏಕಾಏಕಿಯಾಗಿ ರದ್ದುಗೊಳಿಸಿದೆ.

ಎಸ್ಮಾ ಜಾರಿ - ಉಪನ್ಯಾಸಕರ ಬಂಧನಕ್ಕೆ ತಯಾರಿ

ಅಗತ್ಯ ಸೇವೆಗಳ ನಿರ್ವಹಣಾ ಕಾಯ್ದೆ (ಇಎಸ್.ಎಂ.ಎ)ಯನ್ನು ಜಾರಿಮಾಡಲು ಸರ್ಕಾರ ಮುಂದಾಗಿದೆ. "ವಿದ್ಯಾರ್ಥಿಗಳ ಮನಸ್ಥಿತಿಯನ್ನು ಅರ್ಥಮಾಡಿಕೊಳ್ಳದೆ, ಭವಿಷ್ಯದೊಂದಿಗೆ ಚೆಲ್ಲಾಟವಾಡಬೇಡಿ, ಮೌಲ್ಯಮಾಪನ ಪ್ರಾರಂಭಿಸಿ ಎಂದು ಪರಿಪರಿಯಾಗಿ ಕಾಡಿ-ಬೇಡಿದರು ಉಪನ್ಯಾಸಕರ ಮನಕರಗದಿದ್ದ ಕಾರಣ ಎಸ್ಮಾ ಜಾರಿ ಮಾಡಬೇಕಾದ ಅನಿವಾರ್ಯ ಪರಿಸ್ಥಿತಿ ಉಂಟಾಗಿದೆ" ಎಂದು ಮುಖ್ಯಮಂತ್ರಿಗಳು ವಿವರಣೆ ನೀಡಿದ್ದಾರೆ. ಉಪನ್ಯಾಸಕರನ್ನು ಬಂಧಿಸಲು ತಯಾರಿ ನಡೆಸಲು ಪೊಲೀಸ್ ಇಲಾಖೆಗೆ ಆದೇಶಿಸಲಾಗಿದೆ ಎಂದು ಶಿಕ್ಷಣ ಮಂತ್ರಿಗಳು ಪತ್ರಿಕೆಗಳಿಗೆ ತಿಳಿಸಿದ್ದಾರೆ.

ಎಸ್ಮಾ ಎಂಬ ಕಾಯ್ದೆಯೇ ಹಾಳಿ "ಬಂಡವಾಳಗಾರರ - ಭೂಮಾಲಿಕರ ವ್ಯವಸ್ಥೆಯ ರಕ್ಷಣೆಗೆ, ಕುಂದು ಬಂದಾಗಲೆಲ್ಲಾ ಪ್ರಜಾಸತ್ತಾತ್ಮಕ ತಳಹದಿಯಲ್ಲಿ ನಡೆಯುವ ಪ್ರತಿಯೊಂದು ನ್ಯಾಯಯುತ ಬೇಡಿಕೆಗಳ ಆಧಾರದ ಚಳುವಳಿಯ ಹೋರಾಟಗಳನ್ನು ಮುರಿಯಲು ಬಳಸುವ ಅಸ್ತ್ರ. ಇಂತಹ ಅಸ್ತ್ರವನ್ನು ಉಪನ್ಯಾಸಕರ ಮೇಲೆ ಬಳಸುವುದೆಷ್ಟು ಸರಿ ಎಂಬುದನ್ನು ಪ್ರತಿಯೊಬ್ಬ ಪ್ರಜಾಸತ್ತಾತ್ಮಕ ಆಶಯಗಳನ್ನು ಹೊಂದಿರುವ ವ್ಯಕ್ತಿಗಳು ಗಂಭಿರವಾಗಿ ಚಿಂತಿಸಬೇಕಿದೆ.

ಎಸ್ಮಾ ಕಾಯ್ದೆ ಉಲ್ಲಂಘಿಸುವ ಪ್ರತಿಯೊಬ್ಬರಿಗೂ 6 ತಿಂಗಳ ಸಜೆ ಹಾಗು ಕಾಯ್ದೆ ಉಲ್ಲಂಘನೆಗೆ ಪ್ರಚೋದನೆ ನೀಡುವ ಪ್ರತಿಯೊಬ್ಬರಿಗೂ 1 ವರ್ಷ ಸಜೆಯನ್ನು ಕಾಯ್ದೆ ವಿಧಿಸುತ್ತದೆ. ಅಂದರೆ ಮೌಲ್ಯಮಾಪನಕ್ಕೆ ಹಾಜರಾಗದ ಉಪನ್ಯಾಸಕರಿಗೆ 6 ತಿಂಗಳ ಸಜೆಯಾದರೆ, ಉಪನ್ಯಾಸಕರ ಸಂಘಟನೆಗಳ ಮುಖಂಡರಿಗೆ, ಒಂದು ವರ್ಷದ ಸಜೆಯಾಗುತ್ತದೆ. ಅಷ್ಟೆ ಅಲ್ಲಾ ಈ ಲೇಖನವು ಎಸ್ಮಾ ಕಾಯ್ದೆಯ ಉಲಂಘನೆಗೆ ಉತ್ತೇಜನ ನೀಡಿದೆ ಎಂದು ಲೇಖಕರನ್ನು, ಸಂಪಾದಕರನ್ನು ಹಾಗು ಪ್ರಕಾಶಕರನ್ನು ಸಹಾ ಬಂದಿಸಿ, ಒಂದು ವರ್ಷ ಸಜೆ ವಿಧಿಸಬಹುದು. ಅಂತಹ ಕರಾಳ ಕಾಯ್ದೆ ಇದು. ಈ ಕಾಯ್ದೆಯ ಜಾರಿ ಕುರಿತು ಉಪನ್ಯಾಸಕರ ಮುಖಂಡರಾದ ಪರಶುರಾಮ ಗೌಡರು "ಗನ್ ಪಾಯಿಂಟ್‌ನಲ್ಲಿ ಪೆನ್ ಕೆಲಸ ಮಾಡದು" ಎಂಬ ಮಾತು ಸರಿಯೆನ್ನಿಸದೆ?

ಪದವಿಗಳಿಂದ ಪಿ.ಯು.ಸಿ. ಬೇರ್ಪಡಿಸುವಿಕೆ

ಪದವಿ ಕಾಲೇಜುಗಳಲ್ಲಿ ಪಾಠ ಮಾಡಿ ಪಿ.ಯು.ಸಿ.ಗಳಿಗೂ ಪಾಠ ಮಾಡುತ್ತಿರುವ ಸುಮಾರು 8000 ಉಪನ್ಯಾಸಕರಿಗೆ ಯು.ಜಿ.ಸಿ. ವೇತನ ಸಿಗುತ್ತಿದೆ. ಅಂತೆಯೇ ಅನೇಕ ಖಾಸಗಿ ವಿದ್ಯಾಸಂಸ್ಥೆಗಳು ಪಿ.ಯು.ಸಿ. ಕಾಲೇಜುಗಳಿಗೆ ಅನುದಾನ ಪಡೆದುಕೊಂಡಿದ್ದು, ಪಕ್ಕದಲ್ಲೆ ಪ್ರಾರಂಭಿಸಿರುವ ಅನುದಾನರಹಿತ ಪದವಿ ಕಾಲೇಜುಗಳಿಗೂ ಪಾಠಗಳನ್ನು ಪಿ.ಯು.ಸಿ. ಉಪನ್ಯಾಸಕರ ಮೂಲಕವೇ ಮಾಡಿಸಿಕೊಳ್ಳುತ್ತಿವೆ. ಪದವಿ ಕಾಲೇಜುಗಳಿಗೆ ನೇಮಕ ಮಾಡಿಕೊಂಡಿರುವುದು ಕೇವಲ ಅರೆಕಾಲಿಕ ಉಪನ್ಯಾಸಕರನ್ನು ಮಾತ್ರ. ಈ ರೀತಿ ಸಾವಿರಾರು ಜನರ - ಲಕ್ಷಾಂತರ ರೂಪಾಯಿಗಳ ದುಡಿಮೆಗಳನ್ನು ಕದಿಯುತ್ತಿರುವ ಖಾಸಗಿ ವಿದ್ಯಾಸಂಸ್ಥೆಗಳಿಗೆ ಕಡಿವಾಣ ಹಾಕುವ ಅಗತ್ಯವಿಲ್ಲವೇ? ಆ ರೀತಿ ಬೇರ್ಪಡಿಸಿ 8000 ಉಪನ್ಯಾಸಕರನ್ನು ಪದವಿ ಕಾಲೇಜುಗಳಿಗೆ ಮಾತ್ರವೆಂದು ಸೀಮಿತಗೊಳಿಸಿ ವರ್ಗಾಯಿಸಿದಲ್ಲಿ ಸಾವಿರಾರು ಉದ್ಯೋಗಗಳು ಪದವಿ-ಪೂರ್ವ ಹಂತದಲ್ಲಿ ಸೃಷ್ಟಿಯಾಗುತ್ತವೆ. ಇದನ್ನು ಮಾಡಲು ಸರ್ಕಾರ ಮುಂದಾಗುತ್ತೇವೆ ಎಂಬ ಆಶ್ವಾಸನೆಯನ್ನು ನೀಡಿದ್ದಾರೆ, ಆದರೆ ಈ ಬೇರ್ಪಡಿಸುವಿಕೆಯಿಂದ, ಎಲ್ಲಿ ಪದವಿ ಹಂತದ 8000 ಉಪನ್ಯಾಸಕರು ಪ.ಪೂ. ಉಪನ್ಯಾಸಕರಾಗಿಬಿಡುತ್ತಾರೊ, ಅವರ ಸದಸ್ಯತ್ವ ಎಲ್ಲಿ ಪದವಿ ಉಪನ್ಯಾಸಕರ ಸಂಘಟನೆಗೆ ಇಲ್ಲವಾಗುತ್ತದೊ ಎಂಬ ಆತಂಕದಿಂದ ಬೇರ್ಪಡಿಸುವಿಕೆಯನ್ನು ಪದವಿ ಕಾಲೇಜು ಶಿಕ್ಷಕರ ಕೆಲವು ಮುಖಂಡರು ವಿರೋಧಿಸುತ್ತಿದ್ದಾರೆ. ಬೇರ್ಪಡಿಸುವಿಕೆಗೆ ಖಾಸಗಿ ಶಿಕ್ಷಣ ಸಂಸ್ಥೆಗಳ ಲಾಬಿ ಕೂಡ ಅಷ್ಟೇ ದೊಡ್ಡ ರೀತಿಯಲ್ಲಿ ವಿರೋಧಿಸುತ್ತಿವೆ.

ಸಮಾನ ಕೆಲಸಕ್ಕೆ ಸಮಾನ ವೇತನ....

ವೇತನ ಪರಿಷ್ಕರಣೆ ಕೇಳುತ್ತಿರುವ ಪದವಿ ಪೂರ್ವ ಉಪನ್ಯಾಸಕರು 'ಸಮಾನ ಕೆಲಸಕ್ಕೆ ಸಮಾನ ವೇತನ'ಕೊಡಿ ಎಂದು ಕೇಳುತ್ತಿದ್ದಾರೆ. ಇದಕ್ಕೆ ರಾಜ್ಯ ಸರ್ಕಾರ ಪದವಿ ಪೂರ್ವ ಉಪನ್ಯಾಸಕರಿಗೆ ಪದವಿ ಉಪನ್ಯಾಸಕರಿಗೆ ನೀಡುವ ಸಂಬಳ ನೀಡಲು ಹೇಗೆ ಸಾಧ್ಯ? ಪದವಿಯವರಿಗೆ ನೀಡುತ್ತಿರುವುದು ಯು.ಜಿ.ಸಿ. ವೇತನ, ಸಮಾನ ಕೆಲಸಕ್ಕೆ ಸಮಾನ ವೇತನದ ಅರ್ಥ ಪಿ.ಯು.ಸಿ. ಉಪನ್ಯಾಸಕರಿಗೂ ಯು.ಜಿ.ಸಿ. ವೇತನ ನೀಡುವುದೆಂದು ಎಲ್ಲಿದೆ ಎಂದು ಸರ್ಕಾರ ಹುಯಿಲೆಬ್ಬಿಸಿದೆ. ಹಾಗಾಗಿ ಪದವಿ ಪೂರ್ವ ಹಂತದ ಉಪನ್ಯಾಸಕರಿಗೆ ಹೇಗೆ ಪದವಿ ಹಂತದ ವೇತನ ನೀಡಲು ಸಾಧ್ಯ? ವಾರಕ್ಕೆ ಎಂಟು ಗಂಟೆ ಪಾಠ ಮಾಡುತ್ತಾರೆ, ತಿಂಗಳಿಗೆ 32 ಗಂಟೆ, ಇದಕ್ಕೆ ಕೊಡುತ್ತಿರುವ ರೂ. 8000 ಸಂಬಳ ಸಾಲದೆ. ಬೆಳಗ್ಗೆ 7ಕ್ಕೆ ಬರುತ್ತಾರೆ. 11ಕ್ಕೆ ಮನೆಗೆ ಹೋಗುತ್ತಾರೆ. ಇವರಿಗೇಕೆ ಯು.ಜಿ.ಸಿ. ವೇತನ ಪದವಿ ಉಪನ್ಯಾಸಕರು ವಾರಕ್ಕೆ 16 ಗಂಟೆಪಾಠ ಮಾಡುತ್ತಾರೆ ಹಾಗಾಗಿ ಸಮಾನ ವೇತನದ ಪ್ರಶ್ನೆ ಎಲ್ಲಿ ಬರುತ್ತದೆ? ಎಂಬುದು ಕೆಲವು ಬುದ್ದಿ ಜೀವಿಗಳು, ಪದವಿ ಉಪನ್ಯಾಸಕರ ಹಾಗು ಸರ್ಕಾರದ ವಾದವಾಗಿದೆ.

ಆದರೆ ಮುಷ್ಕರ ನಿರತ ಪಿ.ಯು.ಸಿ ಉಪನ್ಯಾಸಕರ ಬೇಡಿಕೆಯಂತೆ ಪದವಿ ಕಾಲೇಜುಗಳಿಂದ ಪಿ.ಯು.ಸಿ.ಗಳನ್ನು ಬೇರ್ಪಡಿಸಿದಲ್ಲಿ, ಪದವಿಗೆ ಪಾಠಮಾಡುತ್ತಾ ಯು.ಜಿ.ಸಿ. ವೇತನ ಪಡೆಯುತ್ತಾ ಪಿ.ಯು.ಸಿ.ಗಳಿಗೂ ಪಾಠಮಾಡುತ್ತಿರುವ ಸುಮಾರು 8000 ಉಪನ್ಯಾಸಕರು ಪಿ.ಯು.ಸಿ.ಗಳಿಗೆ ವರ್ಗಾವಣೆಗೊಂಡಲ್ಲಿ ಅವರಿಗೆ ಈಗಾಗಲೇ ನೀಡುತ್ತಿರುವ ವೇತನವನ್ನು ಹಾಲಿ ಕಾನೂನುಗಳ ಪ್ರಕಾರ ಕಡಿಮೆ ಮಾಡಲು ಸಾಧ್ಯವಿಲ್ಲ. ಈ ತಾಂತ್ರಿಕ ಕಾರಣದಿಂದ 'ಸಮಾನ ಕೆಲಸಕ್ಕೆ ಸಮಾನ ವೇತನ" ಎಂಬ ಘೋಷಣೆಯಡಿಯಲ್ಲಿ ಪಿ.ಯು.ಸಿ. ಉಪನ್ಯಾಸಕರಿಗೂ ಯು.ಜಿ.ಸಿ. ವೇತನ ನೀಡಬೇಕಾಗುತ್ತದೆ ಎಂಬ ಕಾನೂನಾತ್ಮಕ ತಾಂತ್ರಿಕ ಅಂಶವನ್ನು ಪಿ.ಯುಸಿ. ಪದವಿ ಬೇರ್ಪಡಿಸುವಿಕೆ ಬೇಡಿಕೆಯಲ್ಲಿ ಪಿ.ಯು. ಉಪನ್ಯಾಸಕರು ಒಳಗೊಂಡಂತಿದೆ.

ಆದರೆ ಸರ್ಕಾರ ಯು.ಜಿ.ಸಿ. ವೇತನದ ಹೆಸರಿನಲ್ಲಿ ಹುಯಿಲೆಬ್ಬಿಸುತ್ತಿರುವಾಗ "ಪಿ.ಯು.ಸಿ. ಉಪನ್ಯಾಸಕರ ಸಂಘದ" ಅನೇಕ ಮುಖಂಡರು ಈಗಾಗಲೇ ಅನೇಕ ಬಾರಿ ಸ್ಪಷ್ಟಪಡಿಸಿರುವ ಅಂಶವೆಂದರೆ "ಅವರು ಕೇಳುತ್ತಿರುವುದು ಯು.ಜಿ.ಸಿ. ವೇತನವಲ್ಲಾ ವೇತನ ಪರಿಷ್ಕರಣೆ ಅಷ್ಟೆ" ಎಂಬುದು. ಆದರೆ ಪತ್ರಿಕೆಗಳು, ಮಾಧ್ಯಮಗಳು ಅಥವಾ ಇತರೆ ಅನೇಕರು ಈ ಅಂಶವನ್ನು ಪರಿಗಣಿಸದೆ, ಯು.ಜಿ.ಸಿ. ವೇತನ ಕೇಳುತ್ತಿದ್ದಾರೆ ಎಂದು ವಿರೋಧಿಸುತ್ತಿದ್ದಾರೆ.

ಮುಷ್ಕರ ಅಮಾನವೀಯವೇ?

ಮುಷ್ಕರ ಎಂದರೆ ತಾವು ಮಾಡುವ ಕೆಲಸವನ್ನು ಅಥವ ತಮ್ಮ ದುಡಿಮೆಯನ್ನು ತಮ್ಮ ಬೇಡಿಕೆಗಳಿಗಾಗಿ ನಾವು ಮಾಡುವುದಿಲ್ಲ ಎಂದು ನಿರಾಕರಿಸುವುದಾಗಿದೆ. ಅಂತೆಯೇ ಉಪನ್ಯಾಸಕರು ಮುಷ್ಕರ ಮಾಡಬೇಕೆಂದಾದಲ್ಲಿ ಅನುಸರಿಸಲು ಇರುವ ಅವಕಾಶಗಳೆಂದರೆ, ಪಾಠಮಾಡಲು ನಿರಾಕರಿಸುವುದು ಅಥವ ಪರೀಕ್ಷಾ ಕಾರ್ಯಗಳನ್ನು ಬಹಿಷ್ಕರಿಸುವುದೇ ಆಗಿದೆ. ಇದನ್ನು ಬಿಟ್ಟರೆ ಮುಷ್ಕರ ಮಾಡುವುದಾದರೂ ಹೇಗೆ? ಮುಷ್ಕರ ಮಾಡುತ್ತೇವೆಂದು ಪಾಠ ಮಾಡಲು ನಿರಾಕರಿಸಿದಲ್ಲಿ ವಿದ್ಯಾರ್ಥಿಗಳ ಭವಿಷ್ಯದೊಂದಿಗೆ ಚೆಲ್ಲಾಟವಾಡುತ್ತಾರೆ, ಪಾಠ ಮಡದಿದ್ದಲ್ಲಿ, ಸಮಯ ವ್ಯಯವಾದಲ್ಲಿ ವಿದ್ಯಾರ್ಥಿಗಳು ಕಲಿಯುವುದು ಹೇಗೆ? ವಿದ್ಯಾರ್ಥಿಗಳಿಗೇಕೆ ಅನ್ಯಾಯ ಮಾಡುತ್ತೀರಿ ಎಂಬ ವಾದಗಳನ್ನು ಸೃಷ್ಟಿಸುತ್ತಾರೆ? ಸರಿ ಆಯಿತು. ಪಾಠ ಮಾಡುತ್ತೇವೆ ಮುಂದೆ ಪರೀಕ್ಷಾ ಕಾರ್ಯಮಾಡುವುದಿಲ್ಲಾ, ಮೌಲ್ಯಮಾಪನ ಬಹಿಷ್ಕರಿಸುತ್ತೇವೆ ಎಂದು ಮುಷ್ಕರಕ್ಕೆ ಮುಂದಾದಲ್ಲಿ ಈಗ ಹೇಳುತ್ತಿರುವಂತೆ ವಾದಗಳನ್ನು ಸೃಷ್ಠಿಸುತ್ತಾರೆ. ಅಂದರೆ ಉಪನ್ಯಾಸಕರು - ಶಿಕ್ಷಕರು ಮುಷ್ಕರ ಮಾಡುವಂತೆಯೇ ಇಲ್ಲ. ಹೋಗಲಿ ಸರ್ಕಾರಗಳೆ ಏನಾದರೂ ಮುಂದಾಗಿ ಅವರ ಬೇಡಿಕೆಗಳನ್ನು ಈಡೇರಿಸುತ್ತಾರಾ ಎಂದರೆ ಅದನ್ನೂ ಇವರು ಮಾಡುವುದಿಲ್ಲ, ಎಂದಲ್ಲಿ ಈ ಉಪನ್ಯಾಸಕರು, ಶಿಕ್ಷಕರು ತಮ್ಮ ಬೇಡಿಕೆ ಈಡೇರಿಕೆಗೆ ಬೇರಾವ ದಾರಿ ಹಿಡಿಯಬೇಕು?

ಮುಷ್ಕರ ಸರಿಯಲ್ಲ, ಅಮಾನವೀಯ ಎನ್ನುವುದು ಕೇವಲ ಉಪನ್ಯಾಸಕರ ಮುಷ್ಕರಕ್ಕೆ ಮಾತ್ರವಲ್ಲ.. ಬೇರಾವುದೆ ವಿಭಾಗ, ಕಾರ್ಮಿಕರಾಗಲಿ, ನೌಕರರಾಗಲಿ, ರೈತರಾಗಲಿ, ಕೂಲಿಕಾರರಾಗಲಿ, ವಿದ್ಯಾರ್ಥಿಗಳಾಗಲಿ... ಇತರೆ ಯಾರೇ ಮುಷ್ಕರ ಮಾಡಲು ಮುಂದಾದಲ್ಲಿ ಇದೇ ರೀತಿ ಅಬಿಪ್ರಾಯಗಳನ್ನು ಆಳುವ ಸರ್ಕಾರಗಳು ಸದಾ ಹರಿಬಿಡುತ್ತವೆ. ಹಾಗಾಗಿ ಈ ಸಂದರ್ಭದಲ್ಲೂ ಈ ರೀತಿಯ ಅಭಿಪ್ರಾಯಗಳು ಪ್ರಾಬಲ್ಯ ಪಡೆಯುತ್ತಿವೆ. ಮುಷ್ಕರವನ್ನು ಒಂದಲ್ಲೊಂದು ಕಾರಣವೊಡ್ಡಿ ಸರಿಯಿಲ್ಲ ಎನ್ನುವ ಅಬಿಪ್ರಾಯದ ಹಿಂದೆ ಬಂಡವಾಳ ಶಾಹಿ - ಭೂಮಾಲಿಕರ ಹಿಡಿತದಲ್ಲಿರುವ ಈ ವ್ಯವಸ್ಥೆಯ ರಕ್ಷಣೆಯ ಕೈಂಕರ್ಯ ಅಡಗಿದೆ.

ವಿರೋಧ ಪಕ್ಷಗಳು

ಹೊಣೆಗೇಡಿತನದಲ್ಲಿ ಆಳುವ ಪಕ್ಷಕ್ಕಿಂತ ನಾವೇನು ಕಡಿಮೆ ಎನ್ನುವ ರಾಜ್ಯದ ಶಾಸನ ಸಭೆಯ ಪ್ರಮುಖ ವಿರೋಧ ಪಕ್ಷವಾದ ಬಿ.ಜೆ.ಪಿ. ಜನತಾದಳ (ಸಂಯುಕ್ತ) ಕೂಡ ಉಪನ್ಯಾಸಕರ ವಿರುದ್ಧ ಕೆಂಡಕಾರಿ, ಮೌಲ್ಯಮಾಪನ ಬಹಿಷ್ಕಾರದ ವಿರುದ್ಧ ಬಿಗಿ ನಿಲುವುಗಳನ್ನು ತಳೆಯಲು ಸರ್ಕಾರಕ್ಕೆ ಸರ್ವಾನುಮತದ ಬೆಂಬಲ ನೀಡಿದ್ದಾರೆ. (ಇಂದು ಬಿಜೆಪಿ ಎಸ್ಮಾ ಕಾನೂನು ಜಾರಿಯನ್ನು ವಿರೋಧಿಸಿದೆ.)

ಬಂಧನಕ್ಕೂ ಸಿದ್ಧರಾಗಿರುವ ಪಿ.ಯು.ಸಿ. ಉಪನ್ಯಾಸಕರು

ಪಿ.ಯು.ಸಿ. ಉಪನ್ಯಾಸಕರ ಮುಷ್ಕರ ಐತಿಹಾಸಿಕವಾಗಿ 25ನೇ ದಿನಕ್ಕೆ ಕಾಲಿಡುತ್ತಿರುವಾಗಲೆ, ರಾಜ್ಯ ಸರ್ಕಾರ 'ಎಸ್ಮಾ' ಜಾರಿಗೊಳಿಸಿ ಉಪನ್ಯಾಸಕರ ಬಂಧನಕ್ಕೆ ತಯಾರಿ ನಡೆಸಿದೆ. ರಾಜ್ಯ ಸರ್ಕಾರ ಉಪನ್ಯಾಸಕರ ಮೇಲೆ 'ಎಸ್ಮಾ' ಜಾರಿಗೊಳಿಸಿರುವುದನ್ನು "ಬ್ರಿಟಿಷರ ಕಾಲದ ಕರಾಳತೆಯನ್ನು ಸರ್ಕಾರ ಪ್ರದರ್ಶಿಸುತ್ತಿದೆ" ಎಂದು ಬಣ್ಣಿಸಿರುವ ಉಪನ್ಯಾಸಕರು, "ಗನ್ ಪಾಯಿಂಟ್‌ನಲ್ಲಿ ಪೆನ್ ಕೆಲಸ ಮಾಡದು" ಸರ್ಕಾರ ನಮ್ಮನ್ನು ಬಂಧಿಸಿ - ಶಿಕ್ಷೆಗೊಳಪಡಿಸುವುದಾದಲ್ಲಿ ಅದಕ್ಕೂ ಸಿದ್ಧ ಎಂಬ ದಿಟ್ಟತನದ ಮಾತುಗಳನ್ನು ಉಪನ್ಯಾಸಕರು ನುಡಿದಿದ್ದಾರೆ.

ದುಡಿಯುವವರ್ಗದ ಒಂದು ಭಾಗದ ಈ ಹೋರಾಟಕ್ಕೆ ದುಡಿಯುವವರ್ಗದ ಸಂಘಟನೆಗಳು ಪ್ರಜಾಸತ್ತಾತ್ಮಕ ಶಕ್ತಿಗಳು ಬೆಂಬಲಿಸಬೇಕಾಗಿದೆ. ರಾಜ್ಯದ ಹಾಗೂ ರಾಷ್ಟ್ರದ ಪ್ರಮುಖ ವಿದ್ಯಾರ್ಥಿ ಸಂಘಟನೆಗಳಾದ ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್.ಎಫ್.ಐ), ಅಖಿಲಭಾರತ ವಿದ್ಯಾರ್ಥಿ ಫೆಡರೇಶನ್ (ಎಐಎಸ್.ಎಫ್) ಹಾಗು ಅಖಿಲ ಭಾರತ ಪ್ರಜಾಸತ್ತಾತ್ಮಕ ವಿದ್ಯಾರ್ಥಿ ಸಂಘಟನೆ (ಎಐಡಿಎಸ್‌ಓ) ಕರ್ನಾಟಕ ರಾಜ್ಯ ಸಮಿತಿಗಳು ಉಪನ್ಯಾಸಕರ ಹೋರಾಟಕ್ಕೆ ಬೆಂಬಲನೀಡಿ, ರಾಜ್ಯ ಸರ್ಕಾರದ ಹೊಣೆಗೇಡಿತನವನ್ನು ಹಾಗು ಸರ್ವಾಧಿಕಾರಿ ಪ್ರವೃತ್ತಿಯನ್ನು ಖಂಡಿಸಿವೆ.

ಮಹಾಲಕ್ಷ್ಮಿ ನಿಜಕ್ಕೂ ಸುಂದರಿಯೇ! ಅವಳಿಗಾಗ 16 ವರ್ಷ ವಯಸ್ಸು, ಊರಿನ ಪುಂಡು ಪೋಕರಿಗಳು ತುದುಕಿ ಕೊಂಡು ತಿರುಗಿ ನೋಡುವಷ್ಟು ಸುಂದರಿಯೇ ಆಗಿದ್ದಳು!

ಅವಳನ್ನು ದೇವದಾಸಿಯನ್ನಾಗಿಸಲು ಅವರ ತಂದೆ ತಾಯಿಗಳು ಮುಂದಾದಾಗ ನಾ ಮುಂದು-ತಾಮುಂದೆಂದು ಸ್ಪರ್ಧೆಗಿಳಿದು ಸಾಗಿ ಬಂದ ದೇವರುಗಳದೆಷ್ಟು?! ಈಗ ಅವಳಿಗೆ ಕೇವಲ 24 ವರ್ಷ ವಯಸ್ಸು ಅವಳನ್ನು ಅವಳ ತಂದೆ ತಾಯಿಗಳು; ಸೋದರರು, ಬಂಧುಗಳೂ ಸೇರಿ ಕೇರಿಯವರು, ಊರದೇವತೆಗಳೂ ಲಕ್ಷ್ಯವಹಿಸುತ್ತಿಲ್ಲ! ತಿರಸ್ಕರಿಸಲ್ಪಟ್ಟಿದ್ದಾಳೆ! ಅದ್ಯಾವ ವಿಟನ ಕಾಣಿಕೆಯೋ ಮುಖ ಮಾತ್ರವಲ್ಲಾ ದೇಹವಲ್ಲಾ ಕರ್‍ರನೇ ಕಪ್ಪು ವರ್ಣಕ್ಕೆ ತಿರುಗಿ ಅಂದಗೆಟ್ಟು ನೋಡುಗರಲ್ಲಿ ಅಸಹ್ಯ ಹುಟ್ಟಿಸುವಂತಾಗಿದೆ.

ಹಿಂದೊಮ್ಮೆ ಅವಳ ಸೌಂದರ್ಯ ನೋಡಿದವರ ಎದೆಯಲ್ಲಿ ಮರುಕದ ನೋವೊಂದು ಚುಚ್ಚದೇ ಇರದು! ಹೇಗಾದರೂ ಮಾಡಿ 'ನನ್ನನ್ನು ಯಾರಾದರೂ ಆಸ್ಪತ್ರೆಗೆ ಸೇರಿಸಿ ನೆರವಾಗಿ' ಎಂದು ಆರ್ತಿಸುವಾಗ ಅವಳ ಕಥೆ ಕೇಳಿದವರ ಕಣ್ಣಲ್ಲಿ ಅವರಿಗರಿವಿಲ್ಲದೇ ನೀರು ಪ್ರತ್ಯಕ್ಷ!

ಇವರ ಹೆಸರು ಹುಲಿಗೆಮ್ಮ 2.3 ಮಕ್ಕಳಿದ್ದಾರೆ! ವಯಸ್ಸು ಅದೀಗ 30 ವರ್ಷಗಳಿರಬಹುದು! ಅವಳ ಕೈಯಲ್ಲಿ ಅದೇನೋ ನೋಟೀಸ್ ಇದೆ ನೋಡಿ, ಬಂದುದು ಎಸ್.ಸಿ.ಎಸ್.ಟಿ ಡಿಪಾರ್ಟ್‌ಮೆಂಟ್‌ನಿಂದ, ಅವಳು ಹತ್ತು ವರ್ಷಗಳಷ್ಟು ಹಿಂದೆಯೇ ಭೂಮಿಗಾಗಿ ಪಡೆದ ಸಾಲಕ್ಕೆ ಜಪ್ತಿಯ ನೋಟೀಸು. ಅವಳಿಗೇ ಆಶ್ಚರ್ಯ. ಅವಳಿಗೆ ಭೂಮಿಯೇ ಇಲ್ಲ! ಆದರೆ ಭೂಮಿಯ ಮೇಲಿನ ಸಾಲಕ್ಕೆ ಕೊಡಿಸಿದ್ದಕ್ಕೆ ಜಪ್ತಿಯನೋಟೀಸು!

ಆ ಗ್ರಾಮದ ಮುಂದಾಳುಗಳು ಭರ್ಜರಿ ಭೂಮಾಲಿಕರೇ. 10 ವರ್ಷಗಳ ಹಿಂದೊಮ್ಮೆ ಅವರ ಜಮೀನು ಹೆಚ್ಚುವರಿಯೆಂದು, ಭೂಸುಧಾರಣಾ ಕಾನೂನಿನಂತೆ ಸರ್ಕಾರಕ್ಕೆ ನೂರಾರು ಎಕರೆ ಬಿಟ್ಟು ಕೊಡಬೇಕೆಂದು, ಕಂದಾಯ ಇಲಾಖೆಯಿಂದ ಅವರಲ್ಲೊಬ್ಬ ಭೂಮಾಲಕನಿಗೆ ತಾಕೀತು ಬಂತು!

ಕೊನೆಗೊಮ್ಮೆ ಜಾತಿ ಪ್ರಮಾಣಪತ್ರ ಹಾಗೂ ದೇವದಾಸಿ ಪ್ರಮಾಣ ಪತ್ರ ಕೈಗೆ ನೀಡಿ.... ಪರಾರಿಯಾದ. ಉಂಡೂಹೋದ ಕೊಂಡೂ ಹೋದ! ದೇವದಾಸಿಯರ ಜೀವನದಲ್ಲಿ ಇದು ಸರ್ವೇ ಸಾಮಾನ್ಯವಾಗಿದೆ.

....ಹೀಗೆ ಬನ್ನಿ ಇವರೇ ದುರುಗಮ್ಮ ನೋಡಲು ಸುಂದರವಾಗಿಯೇ ಇದ್ದಾರೆ, ಸಾಧಾರಣ 35 ವಯಸ್ಸು. ದೇವದಾಸಿಯಾಗಿದ್ದರೂ ಕಳೆದ 8-10 ವರ್ಷಗಳಿಂದ ಉಪ ಜೀವನಕ್ಕೆ ಕೂಲಿ ನಾಲಿಯೇ ಆಧಾರ! ದೇವದಾಸಿ- ಜೀತ ಪದ್ಧತಿ ಇವರಿಗೆ ಬೇಸರ ತರಿಸಿವೆ! ಅಲ್ಲಿಂದ ಮೇಲೆ ಬರಲು ಪ್ರಯತ್ನ ಸಾಗಿಸಿದ್ದಾಳೆ! ಮಗಳಿಗೆ ಮದುವೆ ಮಾಡಲು, ಮಗನನ್ನು ಶಾಲೆಗೆ ಕಳುಹಿಸಲು ತಂದೆಗಿದ್ದ 1-2 ಎಕರೆ ಜಮೀನಿನ ಬಕಾಸುರ ಹೊಟ್ಟೆಗೆ ಸುರಿಯಲು ಈಜೆ ಧಣಿಗಳ ಸಾಲಕ್ಕೆ ಕೈಚಾಚಿದ್ದಾಳೆ! ಬಡ್ಡಿ ತಿಂಗಳಿಗೆ 100 ರೂ ಅಸಲಿಗೆ ಕೇವಲ 20 ರೂಪಾಯಿಗಳು ಮಾತ್ರವೇ? ಜೊತೆಗೆ ಆಗಾಗ್ಗೆ ಧಣಿಗಳ ತೆವಲಿಗೆ ಬಲಿಯಾಗಬೇಕು! ಏನೇ ಇದ್ದರೂ ಧಣಿಗಳ ಹೊಲದಲ್ಲಿ ಕೂಲಿನಾಲಿಗೆ ಕಡ್ಡಾಯ ಹೋಗಬೇಕು! ಸಣ್ಣ ಪುಟ್ಟ ಬಿಟ್ಟಿ ಗೇಯಬೇಕು! ಈ ಸಾಲದಿಂದ ಮುಕ್ತಿ ಹೇಗೆ?! ಮಗಳನ್ನು ಮತ್ತದೇ ದೇವದಾಸಿ ಪದ್ಧತಿಗೆ ದೂಡಲೇ...? ಇಷ್ಟವಿಲ್ಲ! ಮಗನನ್ನು ಶಾಲೆ ಬಿಡಿಸಿ ಜೀತಕ್ಕೆ ಹಚ್ಚಲೇ...? ಅದೊಂದೇ ದಾರಿ!!

ನೋಡಿ ಇವರು ಈರಮ್ಮ ವಯಸ್ಸು ಸಾಧಾರಣ 40 ಇರಬಹದು. ಇವರು ತಮ್ಮ ದಾರಿದ್ರ್ಯದಿಂದ ಕೆಟ್ಟ ಪರಿಸ್ಥಿತಿ ಯಿಂದ ರೋಸಿ ಹೋಗಿದ್ದಾರೆ! ಇಡೀ ಕುಟುಂಬ ಮೇಲೇಳಲು ಶತಪ್ರಯತ್ನ ಮಾಡುತ್ತಿದೆ! ಎರಡೂವರೆ ಎಕರೆ ಜಮೀನಿದೆ, ಕುಸಿದ ಬೆಲೆಗಳು ಇವಳನ್ನು ಸಹಕಾರಿ ಸಂಘದ ಅಥವಾ ಬ್ಯಾಂಕಿನ ಸಾಲದ ವಲಯದಾಚೆ ಎತ್ತಿ ಬಿಸಾಡಿವೆ! ಈಗವಳು ಫಲಬಿಡದ ತ್ರಿವಿಕ್ರಮನಂತೆ ಸಾಲಕ್ಕಾಗಿ ಬೆಂಬತ್ತಿ ಸಾಹುಕಾರನೊಬ್ಬನ ಹತ್ತಿರ ಕೈಯೊಡ್ಡಿದ್ದಾಳೆ! ಪಡೆದ ಸಾಲ 5 ಸಾವಿರ, ಬಡ್ಡಿಯ ದರ ದುರುಗಮ್ಮನಿಗೆ ಹೋಲಿಸಿದರೆ ಸ್ವಲ್ಪವಾಸಿ! ಕೇವಲ ತಿಂಗಳಿಗೆ ನೂರಕ್ಕೆ 5 ರೂ ಮಾತ್ರವೇ! ಸಾಲವೆಂದರೆ ಹಣ ನೀಡಿದ್ದಲ್ಲ! ವ್ಯವಸಾಯಕ್ಕೆ ಬೀಜ-ಗೊಬ್ಬರ ಕ್ರಿಮಿನಾಶಕ ಕೊಟ್ಟಿದ್ದು!



ದೇವದಾಸಿತನಕ್ಕೆ ತಳ್ಳಲ್ಪಡುತ್ತಿರುವ ಬಾಲಿಕೆ

ಹೋಗಿರುತ್ತಾರೆ, ಹೋಗುತ್ತಿದ್ದಾರೆ?

ದೇವದಾಸಿ ಪದ್ಧತಿಯ ಚರಿತ್ರೆಯ ಬೇರುಗಳು ಪಾಳೆಯಗಾರಿ ಸಮಾಜದಾಚೆಗಿನ ಮಾತ್ರ ಪ್ರಧಾನ ಸಮಾಜದೆಡೆ ಚಾಚಿ ನಿಂತಿವೆ. ಅದೇನೇ ಇದ್ದರೂ ಸುಮಾರು 2 ದಶಕಗಳ ಹಿಂದೆಯೇ ಈ ಪದ್ಧತಿಯನ್ನು ಸರ್ಕಾರ ನಿಷೇಧಿಸಿದ್ದರೂ ಇದು ಒಂದು ದೊಡ್ಡ ಸಾಮಾಜಿಕ ಅನಿಷ್ಟವಾಗಿ ದಿನ ದಿನಕ್ಕೆ ಪೆಡಂಭೂತವಾಗಿ ಅಟ್ಟಹಾಸವಾಗಿ ಬೆಳೆಯುತ್ತಾ ಮುಗ್ಧ ಹಸುಳೆಗಳನ್ನು ಬಲಿಪಡೆಯುತ್ತಲೇ ಇದೆ.

ಬಳ್ಳಾರಿ ಜಿಲ್ಲೆಯೊಂದರಲ್ಲೇ 10 ಸಾವಿರಕ್ಕಿಂತ ಹೆಚ್ಚಿನ ದೇವದಾಸಿಯರಿದ್ದಾರೆಂದರೇ ಇಡೀ ಉತ್ತರ ಕರ್ನಾಟಕದಲ್ಲಿ ಬಹುಶಃ ಇವರ ಸಂಖ್ಯೆ 50 ಸಾವಿರ ದಾಟಿದ್ದರೆ ಯಾರೂ

ದಿಂದ ಕೂಲಿ ಕೆಲಸ ಪಡೆಯುವ ದಿನಗಳು 100 ದಾಟುವುದಿಲ್ಲ! ಈಚೆಗೆ ಹೊಸ ಹೊಸ ಯಂತ್ರಗಳ ಹಾಗೂ ತಂತ್ರಜ್ಞಾನ ಬಳಕೆಯ ಕಾರಣದಿಂದಾಗಿ ಅದೂ ಕಡಿಮೆಯಾಗುತ್ತಿದೆ ನೀರಾವರಿಯ ಕೊರತೆಯಿಂದಲೂ ಈ ದಿನಗಳು ಕಡಿಮೆಯಾಗಿ ಉಳಿದಿವೆ. ಬರಬಿದ್ದರೆ ಊರು ಬಿಡುವುದೊಂದೆ ದಾರಿ?

ಈ ಪ್ರದೇಶದ ಸರಾಸರಿ ಕೂಲಿ ದಿನಕ್ಕೆ 25 ರೂಗಳನ್ನು ದಾಟದು. ಗಂಡ ಹೆಂಡತಿ ಒಟ್ಟಿಗೆ ದುಡಿದರೂ ವಾರ್ಷಿಕ ಆದಾಯ 5 ಸಾವಿರ ಮಾತ್ರವೆ. ಇತ್ತೀಚೆಗೆ ಸರ್ಕಾರ ನೀಡುವ ಕೂಲಿ ಕೆಲಸವೂ ಯಂತ್ರಗಳ ಪಾಲಾಗಿದೆ. ಆದಾಗಲೂ ಇತರೆ ಕೆಲಸದಿಂದ ಅಬ್ಬಬ್ಬವೆಂದರೆ ಮತ್ತೊಂದು ಸಾವಿರದಷ್ಟು ಸಿಗಬಹುದಷ್ಟೇ.

ಹೀಗೆ ವರ್ಷವಿಡೀ ಬರುವ ಆದಾಯವು ಕೇವಲ 2 ಹೊತ್ತಿನ ಊಟಕ್ಕೆ ಸಾಲದಾಗುತ್ತಿದೆ! ಕಾಯಿಲೆ ಕಸಾಲೆ ಬಂದರೆ, ಹಬ್ಬಹರಿದಿನ ಬಂದರೆ, ಮದುವೆ ಮುಂತಾದ ವಿಶೇಷ ಕಾರ್ಯಕ್ರಮ ಬಂದರೆ, ಒಳ್ಳೆಯ ಉಡುಪು ಸೂರಿನ ಪ್ರಶ್ನೆಗಳಿಗೆ ಯಾವುದೇ ಆರ್ಥಿಕ ಆಧಾರವಿಲ್ಲವಾಗಿದೆ.

ಹೀಗಾಗಿ ಶಾಲೆಗೆ ಹೋಗಿ ಆಡಿ ಕಲಿಯುವ ಎಳೆಯ ಮಕ್ಕಳು ತಮ್ಮ ಚಿಕ್ಕ ಮಕ್ಕಳನ್ನು ನೋಡಿಕೊಳ್ಳಲೋ, ಹೆಚ್ಚಿನ ಸಂದರ್ಭದಲ್ಲಿ ತಾಯಿಯ ಜೊತೆ ಕೃಷಿಯಲ್ಲಿನ ಕೂಲಿಗೆಲಸಕ್ಕೋ, ಇಲ್ಲವೇ ಸಾಹುಕಾರರ ಮನೆಯಲ್ಲಿನ ದನಕಾಯಲಿಕ್ಕೋ.... ಹೀಗೆ ಬಾಲ ಕಾರ್ಮಿಕರಾಗಿ ಇಲ್ಲವೇ ಸ್ವಲ್ಪ ದೊಡ್ಡವರಾದರೆ ವಾರ್ಷಿಕ ಸಂಬಳಕ್ಕೆ ಗಂಡು ಹೋದರೆ ಹೆಣ್ಣು ಮಗು ಈ ಅನಿಷ್ಟ ದೇವದಾಸಿ ಪದ್ಧತಿಗೆ

ದೇವದಾಸಿಯರ ಸಂಕಟಗಳು

ಎಚ್ಚೆತ್ತ ಭೂಮಾಲಕ ಹಾಗೇ ಬಿಟ್ಟು ಕೊಡುವುದ್ದೇಗೆ? ಸರಿ, ಕೇರಿಗೆ ನುಗ್ಗಿದ, ದೇವದಾಸಿಯರಿಗೆ ಭೂಮಿ ಕೊಡಿಸುವುದಾಗಿ ಹೇಳಿ ಬಳ್ಳಾರಿಗೆ ಕರೆದುಕೊಂಡು ಹೋಗಿ ಹೆಬ್ಬೆಟ್ಟು ಒತ್ತಿಸಿಕೊಂಡು ಬಂದು ಬಿಟ್ಟ! ಆಗ್ಗ ಎಕರೆಗೆ ಕೇವಲ 1 ಸಾವಿರ ರೂಪಾಯಿಯಿಂದ 2 ಸಾವಿರ ರೂಪಾಯಿ ಬೆಲೆ ಬಾಳುವ ಜಮೀನಿಗೆ ಹತ್ತು ಸಾವಿರ ರೂಪಾಯಿನಷ್ಟು ಬೆಲೆ ಪಡೆದು ಇಲಾಖೆಯ ಅಧಿಕಾರಿಗಳ ಬಾಯಿಗಿಷ್ಟು ನೋಟಿನ ರುಚಿಕೊಟ್ಟು ಏಕಕಾಲದಲ್ಲಿ ಒಂದೆಡೆ ಭೂಸುಧಾರಣೆ ಕಾನೂನಿಗೂ, ಮತ್ತೊಂದೆಡೆ ದೇವದಾಸಿಯರಿಗೂ, ಮೂರನೆಯದಾಗಿ ಇಲಾಖೆ ನಡೆಸುವ ಸರ್ಕಾರಕ್ಕೂ ಪಂಗನಾಮ ಹಾಕಿ ತಿಂದು ತೇಗಿ ತೆಪ್ಪಗೆ ಕುಳಿತ ಕರ್ಮಕಾಂಡ ಇದೀಗ ಬಹಿರಂಗ! ಸಂಘದ ಸಹಾಯದಿಂದ ಹುಡುಕಿದಾಗ ಬಂಜರಾಗಿರುವ ಭೂಮಿಯನ್ನು ಗ್ರಾಮಲೆಕ್ಕಿಗ ತೋರಿಸಿದ!

ನೋಡಿ ಇವರು ಲಿಂಗಮ್ಮ, ಸಾಧಾರಣ ವಯಸ್ಸು 30 ದಾಟಿಲ್ಲ! 15 ವರ್ಷಗಳಷ್ಟು ಹಿಂದೆಯೇ ದೇವರು ಕಟ್ಟಿಕೊಂಡವಳು! ಈಗ ಕೆಲವು ವರ್ಷಗಳ ಕೆಳಗೊಬ್ಬ

ಬಡ್ಡಿ ತಿಂಗಳಿಗೆ 100 ರೂ ಅಸಲಿಗೆ ಕೇವಲ 20 ರೂಪಾಯಿಗಳು ಮಾತ್ರವೇ? ಜೊತೆಗೆ ಆಗಾಗ್ಗೆ ಧಣಿಗಳ ತೆವಲಿಗೆ ಬಲಿಯಾಗಬೇಕು! ಏನೇ ಇದ್ದರೂ ಧಣಿಗಳ ಹೊಲದಲ್ಲಿ ಕೂಲಿನಾಲಿಗೆ ಕಡ್ಡಾಯ ಹೋಗಬೇಕು!

ದಲಿತ ಮುಖಂಡನೆಂದು ಹೇಳಿಕೊಂಡು 5-6 ದಿನಗಳ ಕಾಲ ಇವರ ಕೇರಿಯಲ್ಲಿದ್ದ; ಸಕತ್ತಾಗಿ ಉಂಡ ಹಾಗೂಹೀಗೂ ಕೂಲಿನಾಲಿ ಗೇಯ್ದು ನಡುವಿನ ಬಾಳೆ ಕಾಯಿಯಲ್ಲಿ ಸೇರಿಸಿಕೊಂಡಿದ್ದ ತಲಾ ಒಂದೊಂದು ಸಾವಿರ ರೂಪಾಯಿಗಳನ್ನು ಅಲ್ಲಿದ್ದ ದೇವದಾಸಿಯರಿಂದ ಪಡೆದುಕೊಂಡ. ಸರ್ಕಾರದಿಂದ ಸಾಲ ಭೂಮಿ

ಮಾರುಕಟ್ಟೆಯ ದರಕ್ಕಿಂತ ಪ್ರತಿ ಚೀಲಕ್ಕೆ 20 ರೂ. ಮಾತ್ರವೇ ಜಾಸ್ತಿ ಬೆಲೆ. ಪ್ರತಿ ತಿಂಗಳೂ 5ನೇ ತಾರೀಖಿನೊಳಗೆ ಕಡ್ಡಾಯವಾಗಿ ಬಡ್ಡಿ ಕಟ್ಟಬೇಕು! ಗೊಬ್ಬರ ಕ್ರಿಮಿನಾಶಕ ಬೀಜ ಯಾವಾಗ ತೆಗೆದುಕೊಂಡರೂ ಒಟ್ಟು ಸಾಲಕ್ಕೆ ಕನಿಷ್ಠ 10 ತಿಂಗಳ ಬಡ್ಡಿ ನೀಡಬೇಕು. ಏನು ಮಾಡುವುದು ತಾಯಿ-ಮಗ ಜೊತೆಸೇರಿ ಕೂಲಿ ನಾಲಿ ಗೇಯ್ದು ಪ್ರತಿ ತಿಂಗಳು ಬಡ್ಡಿ ಕಟ್ಟಲಾಗದೇ ಬಡ್ಡಿಗಾಗಿಯೇ ಮಗನನ್ನು ವಾರ್ಷಿಕ ಸಂಬಳಕ್ಕೆ ಬಿಟ್ಟಿದ್ದಾಳೆ. 3-4 ವರ್ಷಗಳಿಂದ ಮಗನನ್ನು ಸಂಬಳದ ಬಂಧನದಿಂದ ಬಿಡಿಸಲು ಸಾಧ್ಯವಾಗಿಲ್ಲ ನಾನೇನು ಮಾಡಲಿ ಹೇಗೆ ಬದುಕಲಿ/ ಎನ್ನುತ್ತಾಳೆ.

ಮತ್ತಲ್ಲಿ ಕೂತವಳೇ ನಾಗಮ್ಮ! ಇತ್ತೀಚೆಗಷ್ಟೇ ದೇವದಾಸಿ. 2-3 ವರ್ಷಕಳೆದಿಲ್ಲ. ವಯಸ್ಸು 18 ದಾಟಿಲ್ಲ. ಇವರ ಮನೆಯಲ್ಲೊಂದು ವಿಶೇಷ! ಇವಳ ತಾಯಿ ದೇವದಾಸಿ, ಮತ್ತವಳ ಅಜ್ಜಿ, ಮುತ್ತಜ್ಜಿಯುವರು ದೇವದಾಸಿಯರೇ ಆದರೂ ಇವಳೀಗ ವಸತಿ ಹೀನಳು. ಮನ್ನೆ ಮನೆಯೆಂಬ ಗುಡಿಸಲೊಳಗೆ ಎಲ್ಲರೂ ನಿದ್ರೆಯಲ್ಲಿ ತಲ್ಲೀನರಾಗಿರುವಾಗ ಅದಾರೋ ಅತೃಪ್ತ ವಿಟನು ಹುಡುಗಿ ತನಗೆ ಸಿಗಲಿಲ್ಲ ಎಂಬ ಕಾರಣಕ್ಕೆ ರಾತ್ರಿ 11 ಗಂಟೆಯ ಸುಮಾರಿಗೆ ಗುಡಿಸಲಿಗೆ ಬೆಂಕಿ ಇಟ್ಟನು! ಸಾವಿರಾರು ರೂಪಾಯಿಗಳ ಆಹಾರ ದಾಸ್ತಾನು ಇದ್ದ ಬದ್ದ ಬಟ್ಟೆಬರೆ ನಗದು ಹಣ ದೊಂದಿಗೆ 60 ವರ್ಷದ ಮಲ್ಲಮ್ಮನೆಂಬ ವೃದ್ಧೆ ದೇವದಾಸಿಯೂ ಸೇರಿ ಗುಡಿಸಲೊಂದಿಗೆ ಅಗ್ನಿಗಾಹುತಿಯಾದೊಂದು ದುರಂತದ ಕಥೆ ಇವಳ ಹೃದಯದಲ್ಲಿದೆ.

ಹೀಗೆ ಅಸಂಖ್ಯಾತ ನೋವುಂಡ, ನೋವುಗಳಿಂದ ಮಡುಗಟ್ಟಿದ ದೇವದಾಸಿ, ವೇಸಿ, ಬಸವಿ... ಎಂದು ಹಲವು ಹೆಸರುಗಳಲ್ಲಿ ಕರೆಯಲ್ಪಡುವ ಮಹಿಳೆಯರ ಜೀವನ ವಿಧಾನವೆಲ್ಲಾ ಒಂದೇ ಆಗಿದೆ! ಬಹಳಷ್ಟು ಮಹಿಳೆಯರು ಅವರಿಗಿನ್ನೂ ಪ್ರಪಂಚ ಜ್ಞಾನ ಬಾರದೇ ಇರುವಾಗ ದೇಹವಿನ್ನು ಚಿಗಿತು ಬಲಿಯದೇ ಇರುವಾಗಲೇ ಹುಲಿಗೆಮ್ಮನೋ ಯಲ್ಲಮ್ಮನೋ ರೇಣುಕೆಯೋ ಮತ್ತಾವುದೋ ದೇವರ ಹೆಸರಿನಲ್ಲಿ

ಆಶ್ಚರ್ಯ ಪಡಬೇಕಿಲ್ಲ!

ಮುಖ್ಯವಾಗಿ ಮಾದಾರ, ಚಲುವಾದಿ, ಮ್ಯಾಸಬೇಡರು, ದಾಸರು, ಕಟ್ಟೇರು ಮುಂತಾದ ಹಿಂದುಳಿದ ಜಾತಿಗಳಲ್ಲಿಯೂ ಈ ಪದ್ಧತಿ ಕಂಡು ಬರುತ್ತಿದೆ. ಇತ್ತೀಚೆಗೆ ಹಿಂದುಳಿದ ಜಾತಿಗಳಲ್ಲಿ ಶೇ 98 ರಷ್ಟು ಹಾಗೂ ಬೇಡ ಜನ ಸಮುದಾಯದಲ್ಲಿ ಶೇ (90) ರಷ್ಟು ಕಡಿಮೆಯಾಗಿದೆಯಾದರೂ ಹರಿಜನ ಚಲುವಾದಿಗಳಲ್ಲಿ ಉಳಿದಿದೆ.

ಈ ಪದ್ಧತಿ ಮುಂದುವರೆಯಲು ಮುಖ್ಯವಾದ 2 ಕಾರಣಗಳು ಕಂಡುಬರುತ್ತಿವೆ! ಒಂದು ದೇವದಾಸಿಯರ ತಂದೆ ತಾಯಿಗಳ ಅಥವಾ ಕುಟುಂಬದ ಕೆಟ್ಟ ಆರ್ಥಿಕ ಪರಿಸ್ಥಿತಿ! ಮತ್ತೊಂದು ಸಂಪ್ರದಾಯ, ಸಾಮಾಜಿಕ ಒತ್ತಡ!

ಈಚಿನ ದಿನಗಳಲ್ಲಿ ದೇವದಾಸಿ ಪದ್ಧತಿ ಸರಿಯಲ್ಲವೆಂದು ಬಹಳಷ್ಟು ಜನರು ನಂಬುತ್ತಾರೆ! ಶಿಕ್ಷಣದ ಹಾಗೂ ಚಳುವಳಿಗಳ ಪ್ರಗತಿ ಕಾರಣವಾಗಿ ಕೆಳ ಜಾತಿಗಳಲ್ಲಿ ಪ್ರತಿಭಟನೆ ಕಂಡು ಬಂದರೂ: ಹದಗೆಟ್ಟ ಆರ್ಥಿಕ ಪರಿಸ್ಥಿತಿಯೇ ಒಂದೆಡೆ ಬದಲಾವಣೆಯನ್ನು ತಿರಸ್ಕರಿಸಿದರೆ ಹಳೆಯ ತಲೆ ಮಾರು ತಮ್ಮದೇ ಕಾರಣಕ್ಕೆ ಪ್ರೋತ್ಸಾಹ ನೀಡುತ್ತಿದೆ.

ಹರಿಜನರು ಹಾಗೂ ಚಲುವಾದಿ ಜನ ಸಮುದಾಯಗಳಲ್ಲಿ ಅನಕ್ಷರತೆ. ಜೀತ, ಸಂಬಳಕ್ಕೆ ದುಡಿಯುವ ಪದ್ಧತಿ, ಬಾಲ ಕಾರ್ಮಿಕ ಪದ್ಧತಿ, ದೇವದಾಸಿ ಪದ್ಧತಿ ಸಾಮಾಜಿಕ ಅಸಮಾನತೆ ಇವುಗಳು ಒಟ್ಟೊಟ್ಟಿಗೆ ಜೊತೆ ಜೊತೆಯಲ್ಲಿಯೇ ಸಾಗುತ್ತಿರುವುದನ್ನು ನಾವು ಕಾಣುತ್ತೇವೆ. ಇವೆಲ್ಲವುಗಳ ಹಿಂದೆ ಮುಖ್ಯವಾದ ಕಾರಣ ಒಂದೇ ಹದಗೆಟ್ಟ ಆರ್ಥಿಕ ಪರಿಸ್ಥಿತಿ ಅಡಗಿಕುಳಿತಿದೆ!

ಇಡೀ ಉತ್ತರ ಕರ್ನಾಟಕವೂ ಹೆಚ್ಚು ಕಡಿಮೆ ಆರ್ಥಿಕವಾಗಿ ಹಿಂದುಳಿದ ಪ್ರದೇಶವಾಗಿದೆ. ಮಳೆಯಾಧಾರಿತ ಪ್ರದೇಶವೇ ಪ್ರಧಾನವಾಗಿದೆ. ಅರೆಪಾಳೆಯಗಾರಿ ಭೂ ಸಂಬಂಧಗಳು ಜೀವಂತವಾಗಿರುವ ಪ್ರದೇಶವಾಗಿದೆ.

ಯು.ಬಸವರಾಜು

ದೂಡಲ್ಪಡುವುದು ಸಾಮಾನ್ಯ.

ಇಡೀ ಕುಟುಂಬದ ವಾರ್ಷಿಕ ಆದಾಯ ಜಾಸ್ತಿಯಾಗದೇ ಈ ಸಂಕೋಲೆಗಳಿಂದ ಅವರನ್ನು ಬಿಡಿಸಲು ಸಾಧ್ಯವಿಲ್ಲದ ಪರಿಸ್ಥಿತಿ, ಮೇಲಿನೆಲ್ಲಾ ರೀತಿಯಿಂದಲೂ ದುಡಿದು ಮೇಲೆ ಬರಲು, ಅಧಃ ಪತನದಿಂದ ತಪ್ಪಿಸಿಕೊಳ್ಳಲು ಆ ಇಡೀ ಕುಟುಂಬ ಶತಾಯಾ ಗತಾಯಾ ಪ್ರಯತ್ನಿಸಿದರೂ ಫಲಿತಾಂಶ ಮಾತ್ರ ಸೊನ್ನೆಯೇ ಆಗಿದೆ. ಶತಮಾನಗಳ ಶೋಷಣೆ ಕೇಂದ್ರ ರಾಜ್ಯ ಸರ್ಕಾರಗಳು ದೇವದಾಸಿಗಳ ಪರಿಸ್ಥಿತಿಯಲ್ಲಿ ಬದಲಾವಣೆ ತರುವುದಾಗಿ ನಿರಂತರ ಕಾರ್ಯಕ್ರಮ ರೂಪಿಸಿದಾಗಲೂ ರೂಪಿಸುವುದಾಗಿ ಹೇಳುತ್ತಿರುವಾಗಲೂ ಮುಂದುವರೆದಿರುವುದನ್ನು ನಾವು ಕಾಣುತ್ತೇವೆ.

ಸರ್ಕಾರದ ಯಾವುದೇ ದೇವದಾಸಿಗಳ ಪದ್ಧತಿ ನಿರ್ಮೂಲನ ಸ್ಕೀಮ್‌ಗಳು ಸಮಸ್ಯೆಯ ಅಂಚನ್ನು ಅಲುಗಾಡಿಸುತ್ತಿಲ್ಲ. ಆಳುವವನ ಕಣ್ಣೀರು ಒರೆಸುವ ರೀತಿಯಲ್ಲಷ್ಟೇ ಅವುಗಳಿರುವುದರಿಂದ ದುಃಖದಾಯಕ ಪರಿಸ್ಥಿತಿಯು ಹಾಗೆಯೇ ಉಳಿದಿದೆ.

'ಕೇವಲ ಅಜ್ಞಾನ- ಅನಕ್ಷರತೆ ಸಂಪ್ರದಾಯ ಅವರ ಹಣೆ ಬರಹ ಹಿಂದಿನ ಜನ್ಮದ ಕರ್ಮವೆಂದೂ ಅದೊಂದು ಲಾಭ ದಾಯಕ ದಂಧೆಯೆಂದು ದೇವದಾಸಿಯ ಪದ್ಧತಿಯ ಉಳಿಕೆಯ ಹಿಂದಿನ ವಿಚಾರವನ್ನು ತಪ್ಪಾಗಿ ಅರ್ಥೈಸಲಾಗುತ್ತಿದೆ.

ಕಾರ್ಮಿಕ ವರ್ಗ ಇತರ ಜನ ಸಮೂಹಗಳ ಸಹಕಾರದೊಂದಿಗೆ ರಾಜಕೀಯ ಹೋರಾಟದ ಸೂತ್ರವನ್ನು ಕೈಗೆತ್ತಿಕೊಂಡಾಗ ರಾಜ್ಯದ, ರಾಷ್ಟ್ರದ ರಾಜಕೀಯ ದಿಕ್ಕನ್ನೇ ಬದಲಿಸುವ ಶಕ್ತಿ ಹೊಂದಿದೆ. ಇದೇ ಮೇ 11 ರ ಮುಷ್ಕರದ ಮಹತ್ವ ಮತ್ತು ತಿರುಳು.

ಮೇ 10 ರಂದು ಸಾರ್ವತ್ರಿಕ ಮುಷ್ಕರದ ಹಿಂದಿನ ದಿನ ತಮಿಳುನಾಡಿನಲ್ಲಿ ಅಣ್ಣಾ ಡಿಎಂಕೆ ಕರೆಯ ಮೇರೆಗೆ ಬೆಲೆ ಏರಿಕೆ, ಸಬ್ಸಿಡಿ ಕಡಿತದ ವಿರುದ್ಧ ರಾಜ್ಯದಾದ್ಯಂತ ಸೈಕಲ್ ಜಾಥಾಗಳನ್ನು ನಡೆಸಿ ಅಲ್ಲಲ್ಲಿ ಬಹಿರಂಗ ಸಭೆಗಳನ್ನು ನಡೆಸಿದರು. ಸ್ವತಃ ಜಯಲಲಿತಾ ಅವರೇ ಹಲವಾರು ಬಹಿರಂಗ ಸಭೆಗಳಲ್ಲಿ ಕೇಂದ್ರ ಮತ್ತು ರಾಜ್ಯ ಸರಕಾರಗಳ ಜನವಿರೋಧಿ ನೀತಿಯ ವಿರುದ್ಧ ಕಿಡಿಕಾರಿದರು.

ಹೊಸ ಆರ್ಥಿಕ ನೀತಿಯನ್ನು ಮೊತ್ತಮೊದಲು ದೇಶದಲ್ಲಿ ಜಾರಿಗೆ ತಂದ ಕಾಂಗ್ರೆಸ್ ಪಕ್ಷವು ಆಂಧ್ರ ಪ್ರದೇಶದಲ್ಲಿ ಅದೇ ನೀತಿಯನ್ನು ತೀವ್ರವಾಗಿ ಮುಂದುವರಿಸುತ್ತಿರುವ ಚಂದ್ರಬಾಬು ನಾಯ್ಡು ಮತ್ತು ಕೇಂದ್ರ ವಾಜಪೇಯಿ ಸರಕಾರದ ವಿರುದ್ಧ ಬಂದ್ ಕರೆಯಲ್ಲಿ ಪೂರ್ಣ ಉತ್ಸಾಹದಲ್ಲಿ ಭಾಗವಹಿಸಿತು.

ಶೋಷಣೆಗಳಿಗೆ ಒಳಗಾದ, ದುಡಿಯುವ ಜನರ ಸಂಘಟಿತ ಹೋರಾಟ ದೇಶದ ರಾಜಕೀಯ ದಿಕ್ಕನ್ನೇ ಬದಲಾಯಿಸುವ ಶಕ್ತಿ ಹೊಂದಿದೆ.

ಎಡ ಪಕ್ಷಗಳು ಮಾತ್ರವಲ್ಲದೆ 13 ವಿವಿಧ ರಾಜಕೀಯ ಪಕ್ಷಗಳಿಗೆ ಸೇರಿದ ಹಲವಾರು ಸಂಸತ್ ಸದಸ್ಯರು ಮೇ 11 ರ ಮುಷ್ಕರಕ್ಕೆ ಬೆಂಬಲಿಸಿ ಹೇಳಿಕೆ ನೀಡಿದುದು ಮಾತ್ರವಲ್ಲ ಸಂಸತ್ ಭವನದ ಎದುರು ಧರಣಿ ನಡೆಸಿ ದೇಶದ ಜನರ ಹೋರಾಟಕ್ಕೆ ದನಿಗೂಡಿಸಿದರು.

ಮೇ 11 ದೇಶಾದ್ಯಂತ ಯಶಸ್ವೀ ಮುಷ್ಕರ

ಬಿಜೆಪಿ ಸರ್ಕಾರಕ್ಕೆ ದುಡಿಯುವ ವರ್ಗದ ಎಚ್ಚರಿಕೆಯ ನೋಟೀಸು

ಬಿಜೆಪಿ ನೇತೃತ್ವದ ವಾಜಪೇಯಿ ಸರಕಾರ ಅಧಿಕಾರಕ್ಕೆ ಬಂದ ಹೊಸತರಲ್ಲಿ ದೇಶವಿರೋಧಿ ವಿಮಾ ಮಸೂದೆಯನ್ನು ಸಂಸತ್ತಿನಲ್ಲಿ ಮಂಡಿಸಿದಾಗ, ಯಾವುದೇ ವಿವೇಚನೆ ಇಲ್ಲದೆ ಬೆಂಬಲಿಸಿದ ಕಾಂಗ್ರೆಸ್ ಪಕ್ಷ ವಾಜಪೇಯಿ ಸರಕಾರದ ಸಬ್ಸಿಡಿ ಕಡಿತದ ವಿರುದ್ಧ ವಿಧಿ ಇಲ್ಲದೆ ವಿರೋಧಿಸಬೇಕಾಯಿತು.

ಇಂತಹ ಮಹತ್ವದ ಮೇ 11 ರ ಮುಷ್ಕರ ದೇಶದಾದ್ಯಂತ ಯಶಸ್ವಿಯಾದ ವರದಿಗಳು ಬಂದಿವೆ. ಇದು ಬಿಜೆಪಿ ನೇತೃತ್ವದ ಸರಕಾರಕ್ಕೆ ಎಚ್ಚರಿಕೆಯ ನೋಟೀಸು ಆಗಿದೆ.

ದೇಶವ್ಯಾಪಿ ಮುಷ್ಕರ ಬಹುತೇಕ ಯಶಸ್ಸು

ಕೈಗಾರಿಕಾ ಜಿಲ್ಲೆಗಳು, ಕರ್ನಾಟಕದ ಗುಲ್ಬರ್ಗಾ, ಶಹಾಪುರ, ಗಂಗಾವತಿ, ಹೊಸಪೇಟೆ ಮೊದಲಾದ ಪ್ರದೇಶಗಳ ಬಂದ್ ಆಚರಿಸಲಾಯಿತು.

ಬಡತನದ ಬೇಗುದಿಲ್ಲಿ ಬೇಯುತ್ತಿರುವ ಕಾರ್ಮಿಕರು ಶೋಷಿತರು ನಾವೆಲ್ಲ ಒಂದೇ ಎಂಬ ಐಕ್ಯತೆಯನ್ನು ಸಾರುತ್ತಾ, ಆಳುವ ವರ್ಗದ ಕೋಮುವಾದದ ವಿರುದ್ಧ ಸಮರವನ್ನು ಮುಂದುವರಿಸುವ ಪಣತೊಟ್ಟರು.

ಸಾಮಾನ್ಯವಾಗಿ ಬ್ಯಾಂಕ್ ಮತ್ತು ವಿಮಾ ನೌಕರರು ಇತರ ಕಾರ್ಮಿಕ ವರ್ಗದೊಂದಿಗೆ ಬೆರೆಯುವುದಿಲ್ಲ ಎಂಬ ಅಪವಾದವಿತ್ತು. ಆದರೆ ಮೇ 11 ರ ಮುಷ್ಕರದಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡ ವಿಮಾ ನೌಕರರು ಹಾಗೂ ಬಹುತೇಕ ಬ್ಯಾಂಕ್ ನೌಕರರು ಕೇಂದ್ರ ಸರಕಾರದ ನೀತಿಯಿಂದ ಹಣಕಾಸು ಕ್ಷೇತ್ರದ ಮೇಲೆ ಆಗುತ್ತಿರುವ ದುಷ್ಪರಿಣಾಮಗಳ ವಿರುದ್ಧ ಉಗ್ರ ಪ್ರತಿಭಟನೆ ತೋರಿದರು.

ಮೇ 11 ರ ಸಾರ್ವತ್ರಿಕ ಮುಷ್ಕರ

ಅರೇಳು ರಾಜ್ಯಗಳಲ್ಲಿ ಜನಜೀವನ ಅಸ್ತವ್ಯಸ್ತ, ಬಂದ್" ಇತ್ಯಾದಿ ತಲೆಬರಹದಲ್ಲಿ ಪ್ರಮುಖ ಪತ್ರಿಕೆಗಳು ಮುಷ್ಕರದ ಬಗ್ಗೆ ವರದಿ ಮಾಡಿವೆ. ಅಸ್ಸಾಮ್, ಬಿಹಾರ್, ಪಶ್ಚಿಮ ಬಂಗಾಳ, ತ್ರಿಪುರ ಕೇರಳ, ಆಂಧ್ರ ಪ್ರದೇಶಗಳಲ್ಲಿ ಸಂಪೂರ್ಣ ಬಂದ್ ಆಚರಿಸಿದ್ದಾರೆ. ತಮಿಳುನಾಡು, ಒರಿಸ್ಸಾ ರಾಜ್ಯಗಳ

ಬಹುರಾಷ್ಟ್ರೀಯ ಕಂಪನಿ ಹಾಗೂ ಭಾರತದ ದೊಡ್ಡ ಖಾಸಗಿ ಔಷಧಿ ಕಂಪನಿಗಳಿಗೆ ಸೇರಿದ 50000 ಕ್ಕೂ ಹೆಚ್ಚು ಮಾರಾಟ ಪ್ರತಿನಿಧಿಗಳು (Medule & Sales refresentatives) ಮುಷ್ಕರದಲ್ಲಿ ಭಾಗವಹಿಸಿದರು. ಅಖಿಲ ಭಾರತ ರಾಜ್ಯ ಸರಕಾರಿ ನೌಕರರ ಒಕ್ಕೂಟದ ಆಶ್ರಯದಲ್ಲಿ ಮಹಾರಾಷ್ಟ್ರ, ಕೇರಳ, ತಮಿಳುನಾಡು, ಅಸ್ಸಾಂ, ಬಿಹಾರ, ಉತ್ತರ ಪ್ರದೇಶ, ಮದ್ಯಪ್ರದೇಶ ಮೊದಲಾದ ರಾಜ್ಯಗಳ ಸರಕಾರಿ ನೌಕರರು ಸಂಪೂರ್ಣ ಮುಷ್ಕರ ನಡೆಸಿದರು.

ರಾಜ್ಯಗಳಿಂದ: ಅಸ್ಸಾಂನಲ್ಲಿ ರೈಲಿನ ಚಕ್ರಗಳು ಓಡಲಿಲ್ಲ. ತೈಲ ಶುದ್ಧೀಕರಣ ಕೇಂದ್ರ, ಟೆಲಿಕಾಂ ಕ್ಷೇತ್ರಗಳಲ್ಲಿ ನೌಕರರು ಕೆಲಸದಿಂದ ದೂರ ಉಳಿದರು. ರಾಜಧಾನಿ ಗೌಹಾಟಿಯಲ್ಲಿ ಬಸ್ಸುಗಳಲ್ಲದೆ ಇತರ ವಾಹನಗಳೂ ಸ್ಥಗಿತಗೊಂಡವು.

ಬಿಹಾರ ರಾಜ್ಯದ ಜಮಶೆದ್ ಪುರದಲ್ಲಿ ಸಣ್ಣ ಕೈಗಾರಿಕೋದ್ಯಮಿಗಳ ಸಂಘ ಹಾಗೂ ಸ್ಥಳೀಯ ಛೇಂಬರ್ಸ್ ಆಫ್ ಕಾಮರ್ಸ್ ನೀಡಿದ ಕರೆಯ ಮೇರೆಗೆ ಆಸುಪಾಸಿನ 1800ಕ್ಕೂ ಹೆಚ್ಚು ಕೈಗಾರಿಕೆಗಳು ಮುಚ್ಚಿದ್ದವು. ಪ್ರತಿಷ್ಟಿತ ಬೊಕಾರೊ ಸ್ಟೀಲ್, ರಾಂಚಿಯ ಹೆವಿ ಇಂಜನಿಯರಿಂಗ್ ಕಾರ್ಪೊರೇಶನ್ (HEC) ಕಲ್ಲಿದ್ದಲು ಗಣಿ ಕಾರ್ಮಿಕರು ಶೇ 60 ರಿಂದ ಶೇ 100ರ ವರೆಗೆ ಮುಷ್ಕರದಲ್ಲಿ ಭಾಗವಹಿಸಿದರು.

ತಮಿಳುನಾಡಿನಲ್ಲಿ ಕೈಗಾರಿಕಾ ಕೇಂದ್ರಗಳಾದ ತಿರುಪ್ಪುರ್ ಅವಿನಾಶಿ, ಶಿವಕಾಶಿ, ಚಿನ್ನಲ್ ಪಟ್ಟಿ ಮೊದಲಾದ ಕಡೆಗಳಲ್ಲಿ ಸಂಪೂರ್ಣ ಬಂದ್ ಆಚರಿಸಲಾಗಿದ್ದು ಎಲ್ಲಾ ಕ್ಷೇತ್ರಗಳಲ್ಲಿ ಮುಷ್ಕರ ನಡೆದಿದೆ. ಅಲ್ಲಿನ ವಿಧಾನ ಸಭೆಯಲ್ಲಿ ಮುಷ್ಕರ ಪ್ರತಿಧ್ವನಿತಗೊಂಡಿದ್ದು ವಿರೋಧ ಪಕ್ಷದ ಎಲ್ಲಾ ಶಾಸಕರು ಕಲಾಪಗಳಿಗೆ ಬಹಿಷ್ಕಾರ ಹಾಕಿದರು.

ಮಹಾರಾಷ್ಟ್ರ, ಮಧ್ಯಪ್ರದೇಶ, ಒರಿಸ್ಸಾ ಮೊದಲಾದ ಕಡೆಗಳಲ್ಲೂ ಮುಷ್ಕರ ಯಶಸ್ವಿಯಾದ ವರದಿಗಳು ಬಂದಿವೆ.

ಕರ್ನಾಟಕದಲ್ಲಿ ಮುಷ್ಕರ

ಜೀವ ವಿಮೆ, ಸಾಮಾನ್ಯ ವಿಮೆ, ಬ್ಯಾಂಕ್, ಗ್ರಾಮೀಣ ಬ್ಯಾಂಕುಗಳ ನೌಕರರು, ಮೆಡಿಕಲ್ ರೆಪ್ರಸೆಂಟೇಟಿವ್ಸ್ ಖಾಸಗೀ ಕಾರ್ಖಾನೆಗಳ ಕಾರ್ಮಿಕರು ಮುಷ್ಕರದ ಕರೆಗೆ ಓಗೊಟ್ಟರು. ಪ್ಲಾಂಟೇಷನ್ ಕಾರ್ಮಿಕರು, ಅಂಗನವಾಡಿ ನೌಕರರು, ಬೀಡಿ, ಹೆಂಚು ಅಗರ ಬತ್ತಿ ಮೊದಲಾದ ಉದ್ದಿಮೆಗಳ ನೌಕರರು ಕೆಲಸವನ್ನು ಬಹಿಷ್ಕರಿಸಿ ಬೀದಿಗಿಳಿದರು. ರೈತರು ಕೃಷಿಕೂಲಿಕಾರರು ವಿದ್ಯಾರ್ಥಿಗಳು, ಯುವಜನ ಮಡಳಿಯರು ಕೆಲವೆಡೆ ಪ್ರತಿಭಟನೆಗಳನ್ನು ನಡೆಸಿದರೆ ಗುಲ್ಬರ್ಗಾ, ಬಾಗೇಪಲ್ಲಿ, ಶಹಾಪುರ, ಗಂಗಾವತಿ, ಹೊಸಪೇಟೆ ಮೊದಲಾದ ಕಡೆಗಳಲ್ಲಿ ಅಂಗಡಿ ಮುಗ್ಗಟ್ಟುಗಳನ್ನು ಮುಚ್ಚಿಸಿ ಬಂದ್ ಆಚರಿಸಲಾಯಿತು.

ಹಾಸನದಲ್ಲಿ 500 ಕ್ಕೂ ಹೆಚ್ಚು ಜನರು ಮೆರವಣಿಗೆ ನಡೆಸಿ ಪ್ರಮುಖ ಬೀದಿಗಳಲ್ಲಿ ಬಂದ್ ನಡೆಸಿದರೆ ಸಕಲೇಶಪುರದಲ್ಲಿ 400 ಕ್ಕೂ ಹೆಚ್ಚು ಪ್ಲಾಂಟೇಶನ್ ನೌಕರರು ಪ್ರತಿಭಟನೆ ನಡೆಸಿದರು. ಚಿಕ್ಕಮಗಳೂರಿನಲ್ಲಿ 400ಕ್ಕೂ ಹೆಚ್ಚು ಕಾರ್ಮಿಕರು ನೌಕರರು AITUC- CITU, ಬ್ಯಾಂಕ್ ನೌಕರರ ಸಂಘಟನೆಗಳ ನೇತೃತ್ವದಲ್ಲಿ ಮೆರವಣಿಗೆ ಬಹಿರಂಗ ಸಭೆ ನಡೆಸಿದರು.

ಧಾರವಾಡದಲ್ಲಿ 200, ಹುಬ್ಬಳ್ಳಿಯಲ್ಲಿ 300ಕ್ಕೂ ಹೆಚ್ಚು ಕಾರ್ಮಿಕರು, ನೌಕರರು ವಿದ್ಯಾರ್ಥಿ ಯುವಜನರು ಮೆರವಣಿಗೆಯಲ್ಲಿ ಭಾಗವಹಿಸಿದ್ದು ಸಿಪಿಐ, ಸಿಪಿಐ(ಎಂ) ಮತ್ತು ಜನತಾದಳ(ಎಸ್) ಮುಖಂಡರು ಮುಷ್ಕರ ಬೆಂಬಲಿಸಿ ಜಂಟಿ ಹೇಳಿಕೆ ನೀಡಿದರು.

ಭಟ್ಕಳದಲ್ಲಿ ಅಂಗನವಾಡಿ ಕಾರ್ಯಕರ್ತೆಯರನ್ನು ಒಳಗೊಂಡಂತೆ 318 ಜನ ರಸ್ತೆತಡೆ ನಡೆಸಿ ಬಂಧನಕ್ಕೆ ಒಳಗಾದರು. ಮಳವಳ್ಳಿಯಲ್ಲಿ 100 ಮಂದಿ ಮಹಿಳೆಯರೂ ಸೇರಿದಂತೆ 200 ಕ್ಕೂ ಹೆಚ್ಚು ಮಂದಿ ಧರಣಿ ನಡೆಸಿದರು. ಮಂಗಳೂರು, ಕುಂದಾಪುರ, ಬೆಳ್ತಂಗಡಿ ಮೊದಲಾದೆಡೆ ಯಶಸ್ವಿ ಮುಷ್ಕರಗಳಾದ ಬಗ್ಗೆ ವರದಿ ಬಂದಿದೆ.


ರಾಜ್ಯ ಸರಕಾರಿ ನೌಕರರು ಮತ್ತು ಕೇಂದ್ರ ಸರಕಾರಿ ನೌಕರರು ರಾಜ್ಯ ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಧರಣಿ ನಡೆಸಿ ಮುಷ್ಕರಕ್ಕೆ ಬೆಂಬಲ ನೀಡಿದರು. ಪ್ರಾಂತ ಕೃಷಿಕೂಲಿಕಾರರ ಸಂಘಟನೆ ಮೇ 5 ರಿಂದ 10 ರ ವರೆಗೆ ರಾಜ್ಯದಾದ್ಯಂತ ಸೈಕಲ್ ಜಾಥಾ ನಡೆಸಲು ಕರೆಕೊಟ್ಟಿತ್ತು.

ರಾಜ್ಯದ ರಾಜಧಾನಿಯಲ್ಲಿ

ಬೆಂಗಳೂರಿನ 5 ಕೈಗಾರಿಕಾ ಕ್ಷೇತ್ರಗಳಲ್ಲಿ 30 ನಿಮಿಷದಿಂದ ಒಂದು ಗಂಟೆವರೆಗೂ ರಸ್ತೆ ತಡೆ ನಡೆಸಿದ ಕಾರ್ಮಿಕರು, ರೈತರು ಮಹಿಳೆಯರು ಕೇಂದ್ರ ಸರಕಾರದ ಆರ್ಥಿಕ ನೀತಿಯ ವಿರುದ್ಧ, ಕೋಮುವಾದದ ವಿರುದ್ಧ ಮುಗಿಲು ಮುಟ್ಟುವ ಘೋಷಣೆ ಕೂಗಿದರು. ಪ್ರತಿಯೊಂದು ಕಡೆ 200 ರಿಂದ 2000 ಜನರವರೆಗೆ ಭಾಗವಹಿಸಿದ್ದು ಒಟ್ಟು 5000 ಕ್ಕೂ ಹೆಚ್ಚು ಕಾರ್ಮಿಕರು ಇತರೆ ಜನ ವಿಭಾಗದವರು ಪ್ರತಿಭಟನೆ ತೋರಿದರು. ಕೈಗಾರಿಕಾ ಪ್ರದೇಶಗಳಲ್ಲಿ ಘೋಷಣೆ ಕೂಗುತ್ತಾ ಕೆಂಬಾವುಟದ ಅಡಿಯಲ್ಲಿ ಮೆರವಣಿಗೆ ನಡೆಸುತ್ತಾ ಕೈಗಾರಿಕೆಗಳನ್ನು ಮುಚ್ಚಿಸಿದರು.

ಬೆಂಗಳೂರು ನಗರ ಕೇಂದ್ರದಲ್ಲಿ ಬ್ಯಾಂಕ್, ವಿಮೆ ನೌಕರರು ಕೈಗಾರಿಕಾ ಕಾರ್ಮಿಕರು, ವಿದ್ಯಾರ್ಥಿ ಯುವಜನ ಮಹಿಳೆಯರು ದೊಡ್ಡ ಸಂಖ್ಯೆಯಲ್ಲಿ ರ್‍ಯಾಲಿ ನಡೆಸಿ ರಾಜಭವನದೆಡೆಗೆ ಧಾವಿಸಿದಾಗ ಪೋಲೀಸರು ತಡೆದರು. ನಂತರ ಎನ್.ಪಿ.ಎಂ.ಓ. ಸಂಚಾಲಕ ಕೆ.ವಿ. ಶ್ರೀನಿವಾಸ್ ಸಿಐಟಿಯು ರಾಜ್ಯ ಅಧ್ಯಕ್ಷ ಎಸ್. ಸೂರ್ಯನಾರಾಯಣರಾವ್, ಕಾರ್ಯದರ್ಶಿ ವಿ.ಜೆ.ಕೆ. ನಾಯರ್ , ಎ.ಐ.ಟಿ.ಯುಸಿ ಅಧ್ಯಕ್ಷ ಎಂ.ಸಿ. ನರಸಿಂಹನ್, ಎ.ಐ.ಬಿ.ಇ.ಎ. ರಾಜ್ಯ ಕಾರ್ಯದರ್ಶಿ ವಸಂತರೈ, ಕೃಷಿಕೂಲಿಕಾರರ ರಾಜ್ಯ ಅಧ್ಯಕ್ಷ ಜಿ.ಎನ್. ನಾಗರಾಜ್ ಮೊದಲಾದವರು ರ್‍ಯಾಲಿಯ ನೇತೃತ್ವ ವಹಿಸಿದ್ದು ರಾಜ್ಯಪಾಲರಿಗೆ ಮನವಿ ನೀಡಿ ಜನವಿರೋಧಿ ನೀತಿಗಳನ್ನು ಹಿಂತೆಗೆದುಕೊಳ್ಳಬೇಕೆಂದು ಕೇಂದ್ರ ಸರಕಾರಕ್ಕೆ ಎಚ್ಚರಿಕೆ ನೀಡಿದರು.

ಮುಷ್ಕರದಲ್ಲಿ ಭಾಗವಹಿಸಿದ ಎಲ್ಲಾ ವಿಭಾಗದ ಜನರನ್ನು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಅಭಿನಂದಿಸಿದೆ. ಮೇ 11 ರ ಮುಷ್ಕರವನ್ನು ಆಳವಾಗಿ ವಿಮರ್ಶಿಸಿ, ಜನವಿರೋಧಿ ಆರ್ಥಿಕ ನೀತಿಯ ವಿರುದ್ಧ ಹೋರಾಟವನ್ನು ಮುಂದುವರಿಸುವುದಾಗಿ ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆ (ಎನ್.ಪಿ.ಎಂ.ಓ) ಹೇಳಿಕೆ ನೀಡಿದೆ.



ಮೇ ತಿಂಗಳಿನಿಂದ ಡಿಸೆಂಬರ್‌ವರೆಗೆ

ನಿರಂತರ ಚಳುವಳಿಗೆ ಸಿಐಟಿಯು ಕರೆ

ಏಪ್ರಿಲ್ 20 ರಿಂದ 22ರ ವರೆಗೆ ಕೇರಳದ ಕೋಝಿಕೋಡ್‌ನಲ್ಲಿ ನಡೆದ ಸಿಐಟಿಯು ಜನರಲ್ ಕೌನ್ಸಿಲ್ ಸಭೆ ಮೇ 11 ರ ಮುಷ್ಕರದ ನಂತರ ಚಳುವಳಿಯನ್ನು ಮುಂದುವರಿಸಲು ಡಿಸೆಂಬರ್ 26 ರಿಂದ ಹೈದರಾಬಾದಿನಲ್ಲಿ ಜರುಗುವ ಅಖಿಲ ಭಾರತ ಸಮ್ಮೇಳನದವರೆಗೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

1. ಮೇ 20 -ಸಿಐಟಿಯು ರಾಜ್ಯ ಸಮಿತಿ ಸಭೆ (ಕರ್ನಾಟಕದಲ್ಲಿ ಮೇ 14 ರಂದು ಜರುಗಲಿದೆ).

2. ಮೇ 30 - ಸಿಐಟಿಯು ಸ್ಥಾಪನಾದಿನ ಕಾರ್ಮಿಕ ವರ್ಗಕ್ಕೆ 30 ವರ್ಷಗಳ ಸಮರ ಶೀಲ ಹೋರಾಟಗಳ ಪರಿಚಯ. ಅಂದು ಜಿಲ್ಲಾ/ ಪ್ರಾದೇಶಿಕ ಕೈಗಾರಿಕಾ ಘಟಕಗಳ ಮಟ್ಟದಲ್ಲಿ ಸಾರ್ವಜನಿಕ ಸಭೆ.

3. ಜೂನ್ 10 ರಿಂದ ಜುಲೈ 31
ಗುಂಪು ಸಭೆ /ಬೀದಿ ಬದಿ ಸಭೆ/ ಗೇಟ್ ಮೀಟಿಂಗ್ ರಾಷ್ಟ್ರಾಧ್ಯಕ್ಷರಿಗೆ ಮನವಿ - ಸಹಿ ಸಂಗ್ರಹ ಚಳುವಳಿ.

4. ಆಗಸ್ಟ್ 31 ರ ವರೆಗೆ
ಕಾರ್ಮಿಕರ ದೇಶದ ಸಮಸ್ಯೆಗಳ ಗಮನ ಸೆಳೆಯುತ್ತಾ ಪರ್ಯಾಯ ಧೋರಣೆಗಳ ಕುರಿತು ಸ್ಥಳೀಯ ಜಿಲ್ಲಾ ಮತ್ತು ರಾಜ್ಯಮಟ್ಟದ ಸಮಾವೇಶ

5. ಸೆಪ್ಟೆಂಬರ್
ಮಾನವ ಸರಪಳಿ ಪಂಜಿನ ಮೆರವಣಿಗೆ ಕಾರ್ಯಕ್ರಮ.

6. ಜಿಲ್ಲಾ ಮಟ್ಟದಲ್ಲಿ ಪಾದಯಾತ್ರೆ, ಜಾಥಾ ಇತ್ಯಾದಿ. ಜಿಲ್ಲಾಧಿಕಾರಿ ಅಥವಾ ಜಿಲ್ಲಾ ಮ್ಯಾಜಿಸ್ಟ್ರೇಟರ್ ಮುಂದೆ ಬೃಹತ್ ಪ್ರತಿಭಟನೆ.

7. ಅಕ್ಟೋಬರ್.
ರಾಜ್ಯ ಸಮ್ಮೇಳನವನ್ನು ಗಮನದಲ್ಲಿರಿಸಿ ರಾಜ್ಯಮಟ್ಟದ ರ್‍ಯಾಲಿ (ಕರ್ನಾಟಕದಲ್ಲಿ ಜುಲೈ ತಿಂಗಳಲ್ಲೇ ನಡೆಯಬಹುದು).

8. ಡಿಸೆಂಬರ್ 26 - ಅಖಿಲ ಭಾರತ ಸಮ್ಮೇಳನದತ್ತ. ಹಿಂದೆ ಸಿಐಟಿಯು ಅಖಿಲ ಭಾರತ ಸಮ್ಮೇಳನ ನಡೆದ ಪ್ರದೇಶಗಳಿಂದ, ಅಂದರೆ ಕಲ್ಕತ್ತ ಮುಂಬೈ, ಚೆನ್ನೈ, ಕಾನ್ಪುರ, ಪಾಟ್ನಾ ಹಾಗೂ ಕೊಚ್ಚಿನ್‌ಗಳಿಂದ ಪ್ರಾದೇಶಿಕ ಮಟ್ಟದ ಜಾಥಾ ಆರಂಭಗೊಂಡು ಡಿಸೆಂಬರ್ 26 ರಂದು ಹೈದರಾಬಾದ್ ತಲುಪುವುದು. ಇನ್ನೊಂದು ಜಾಥಾ ದೆಹಲಿಯಿಂದಲೂ ಹೊರಡುವುದು.

ಆರಂಭಗೊಂಡಿದೆ ಕಾರ್ಮಿಕ ವರ್ಗದ ನೇತೃತ್ವದಲ್ಲಿ ಚಳುವಳಿ

ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ಆರ್ಥಿಕ ಧೋರಣೆ ಮತ್ತು ಕೋಮುವಾದವನ್ನು ಹಿಮ್ಮೆಟ್ಟಿಸಲು ಕರ್ನಾಟಕದಲ್ಲೂ ಕಾದಾಟದ ಕಹಳೆ ಮೊಳಗಲಿ



ನಿರುದ

ನಿರಂತರವಾಗಿ ಬೆಳೆಯ

ನಿರುದ್ಯೋಗ ದೇಶದ ಇಂದಿನ ಅತಿದೊಡ್ಡ ಸಮಸ್ಯೆ. ಆರ್ಥಿಕ ಸಾಮಾಜಿಕವಾದ ಮಹಾಪಿಡುಗು.

'26 ರ ಹರೆಯದ ಯುವಕನ ಆತ್ಮಹತ್ಯೆ' ಅವನ ಪಕ್ಕದಲ್ಲಿ ಒಂದು ಚೀಟಿ "ಈ ಸಾವು ನನ್ನ ನಿರ್ಧಾರ, ಇಂದಲ್ಲ, ನಾಳೆ ಒಂದು ಉದ್ಯೋಗ ಸಿಗಬಹುದೆಂದು ಹಣೆಬರಹ ನಂಬಿ, ಎಲ್ಲೆಲ್ಲೋ ಓಡಾಡಿದೆ... ಕೊನೆಗೂ ಸಿಕ್ಕ ಉತ್ತರ 'ನೋವೇಕೆನ್ನಿ'. ಇಲ್ಲೆಲ್ಲೂ ಜಾಗವಿಲ್ಲದ ನನಗೆ ಜೀವನದಲ್ಲಿಯೇ ಜಿಗುಪ್ಸೆ ಬಂದಿದೆ. ಈ ಸಾವಿಗೆ ನಾನೇ ಹೊಣೆ". ಕೈಯಿಂದ ಕೈಗೆ ಬದಲಾದ, ಎಲ್ಲಿಯೂ ಜಾಗ ಸಿಗದ ಆತನ ಪದವಿ ಅಂಕಪಟ್ಟಿಗಳು ಕೋಣೆ ತುಂಬಾ ಹರಡಿಕೊಂಡು ಅನಾಥವಾಗಿವೆ. ಮುಪ್ಪಿನಲ್ಲಾದರೂ ಆಸರೆಯಾಗಬಹುದೆಂಬ ಆಸೆ ಇರಿಸಿಕೊಂಡ ಆತನ ತಂದೆ ತಾಯಿಗಳೂ ಅನಾಥರು. ಒಡಲ ಬೇಗುದಿಯಲ್ಲಿ ಇಂಗಿಹೋದ ಕಣ್ಣೀರು.... ಈ ದಾರುಣ ಸುದ್ದಿ ಪತ್ರಿಕೆಗಳ ಒಳಪುಟದ ಮೂಲೆಯಲ್ಲಿ ಸಾಮಾನ್ಯ ಸುದ್ದಿಯಂತೆ ಮುದ್ರಣವಾಗುತ್ತದೆ 'ಜಿಗುಪ್ಸೆಯಿಂದ ಯುವಕನ ಆತ್ಮಹತ್ಯೆ'. ತಲೆಬರಹದ ಮೇಲೆ ಕಣ್ಣಾಡಿಸಿದ ಜನ ಪತ್ರಿಕೆಯ ಪುಟ ತಿರುವುತ್ತಾರೆ. 'ದಿನ ಸಾಯುವವರಿಗೆ ಅಳುವವರು ಯಾರು?" ಆದರೆ ಪತ್ರಿಕೆಯ ಮುಖಪುಟದಲ್ಲಿ ವರ್ಷಕ್ಕೆ ಒಂದು ಕೋಟಿ ಉದ್ಯೋಗ- ಪ್ರಧಾನಿ ಭರವಸೆ" ಪುನರ್ ಮುದ್ರಣವಾಗಿದೆ. ಕೆಂಪುಕೋಟೆಯ ಮೇಲೂ ಅದೇ ಪುನರುಚ್ಚಾರ.... ಈ ಮಾತಿನಂತೆ ಎಲ್ಲಾದರೂ ಒಂದು ಉದ್ಯೋಗ ಗಿಟ್ಟಿಸಿಕೊಂಡವರು ನಿಮಗೆ ಸಿಕ್ಕಲ್ಲಿ ದಯವಿಟ್ಟು ತಿಳಿಸಿ.... ನಮ್ಮಲ್ಲಂತೂ ಇದ್ದ ಉದ್ಯೋಗ ಕಳೆದುಕೊಂಡು ಬೀದಿ ಭಿಕಾರಿಗಳಾಗುತ್ತಿರುವವರಂತೂ ನಿತ್ಯವೂ ಎದುರಾಗುತ್ತಾರೆ.

ಇಂಥ ಉದ್ಯೋಗ ಕಳೆದುಕೊಂಡ ಎಂಜಿನಿಯರ್ ಒಬ್ಬ ತನ್ನ ಪತ್ನಿ, ಇಬ್ಬರು ಮಕ್ಕಳ ಸಮೇತ ಮಂಗಳೂರಿನಲ್ಲಿ ಆತ್ಮಹತ್ಯೆ ಮಾಡಿಕೊಂಡ ಸುದ್ದಿ ನೀವು ಓದಿರಬಹುದು. ಹೆಸರು, ಊರು ಅಲ್ಪಸ್ವಲ್ಪ ವಿವರಗಳು ಬದಲಾಗುತ್ತವೆ. ಆದರೆ ಹೂರಣ ಒಂದೇ..... ನಿರುದ್ಯೋಗ, ನಿರುದ್ಯೋಗ, ನಿರುದ್ಯೋಗ.

ನಿರುದ್ಯೋಗ ದೇಶದ ಇಂದಿನ ಅತಿದೊಡ್ಡ ಸಮಸ್ಯೆ. ಆರ್ಥಿಕ- ಸಾಮಾಜಿಕವಾದ ಮಹಾಪಿಡುಗು. ಮೂರು ಯುವಜನರಲ್ಲಿ ಇಬ್ಬರು ನಿರುದ್ಯೋಗಿಗಳು. ವರ್ಷದಿಂದ ವರ್ಷಕ್ಕೆ ನಿರುದ್ಯೋಗಿಗಳ ಸಂಖ್ಯೆಯಲ್ಲಿ ವಿಪರೀತ ಹೆಚ್ಚಳ. 1951 ರಲ್ಲಿ 3.29 ಲಕ್ಷವಿದ್ದ ನೊಂದಾಯಿತ ನಿರುದ್ಯೋಗಿಗಳು ಈಗ 4 ಕೋಟಿಗೂ ಅಧಿಕ. ಶೇ 1.5 ರಷ್ಟಿದ್ದ ನಿರುದ್ಯೋಗದ ಬೆಳವಣಿಗೆ ಪ್ರಮಾಣ ಇಂದು ಶೇ 20 ನ್ನು ದಾಟಿದೆ. ಕಳೆದ 40 ವರ್ಷಗಳಲ್ಲಿ ನಿರುದ್ಯೋಗ 110 ಪಟ್ಟು ಬೆಳೆದಿದೆ. ಇದಕ್ಕೆ ವ್ಯತಿರಿಕ್ತವಾಗಿ 1971 ರಲ್ಲಿ ಉದ್ಯೋಗಗಳ ಸೃಷ್ಟಿ ಶೇ 9.88 ಇದ್ದರೆ 1999 ರಲ್ಲಿ ಶೇ 4.06 ಕ್ಕೆ ಇಳಿದಿದೆ. 2000 ಇಸ್ವಿಗಂತೂ ಇನ್ನೂ ಕುಸಿದ ವರದಿಗಳು ಇವೆ. 80 ಮತ್ತು 90 ರ ದಶಕಗಳು ನಿರುದ್ಯೋಗ ಆಸ್ಫೋಟಕಾರಿಯಾಗಿ ಬೆಳೆದ ಅವಧಿಯಾಗಿದೆ.

ಎಲ್ಲೆಲ್ಲೋ ಓಡಾಡಿದೆ... ಕೊನೆಗೂ ಸಿಕ್ಕ ಉತ್ತರ 'ನೋವೇಕೆನ್ನಿ'. ಇಲ್ಲೆಲ್ಲೂ ಜಾಗವಿಲ್ಲದ ನನಗೆ ಜೀವನದಲ್ಲಿಯೇ ಜಿಗುಪ್ಸೆ ಬಂದಿದೆ. ಈ ಸಾವಿಗೆ ನಾನೇ ಹೊಣೆ".

ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೊಂದಾಯಿತರಾದವರು ಒಟ್ಟು ನಿರುದ್ಯೋಗಳಲ್ಲಿ ಕೇವಲ ಶೇ 28.72 ಎನ್ನುತ್ತದೆ ರಾಷ್ಟ್ರೀಯ ಸಮೀಕ್ಷೆ. ಇದು ವಿದ್ಯಾವಂತರದ್ದಾಯಿತು. ಗ್ರಾಮೀಣ ಪ್ರದೇಶಗಳಲ್ಲಿ..... ನಿರುದ್ಯೋಗಿಗಳು, ಅರೆ ಉದ್ಯೋಗಿಗಳು.. ಹತ್ತಾರು ಕೋಟಿ. (14 ಕೋಟಿ ಎಂಬ ಅಂದಾಜು). ಒಟ್ಟು ದೇಶದ ಜನಸಂಖ್ಯೆಯಲ್ಲಿ ಮಕ್ಕಳು, ಮುದುಕರು, ಅಶಕ್ತರನ್ನು ಹೊರತುಪಡಿಸಿದರೆ ದುಡಿಯಲು ಯೋಗ್ಯರಾದವರ ಸಂಖ್ಯೆ 54 ಕೋಟಿ. ಇದರಲ್ಲಿ ಸರ್ಕಾರದ ಅಂಕಿ-ಸಂಖ್ಯೆಯಂತೆ ದುಡಿಮೆ ಕ್ಷೇತ್ರದಲ್ಲಿರುವವರು 32 ಕೋಟಿ. ಅಂದರೆ ಸಹಜವಾಗಿ ನಿರುದ್ಯೋಗಿಗಳು 22 ಕೋಟಿ ಎಂದಾಯಿತು. ಈ 22 ಕೋಟಿ ಮಾನವ ಸಂಪತ್ತು, ಅಗಾಧವಾದ ಶಕ್ತಿ ಇದ್ದು ಸತ್ತಂತೆ, ನಿಷ್ಪ್ರಯೋಜಕ. ನಿರುದ್ಯೋಗಿಯೆಂದರೆ ನಿರಾಕರಿಸಲ್ಪಟ್ಟ ಶ್ರಮ. ಈ ಶ್ರಮ, ಕೌಶಲ್ಯ, ಪರಿಣತಿ ಬಳಸದೇ ದೇಶ ಅದೆಷ್ಟು ಸೊರಗಿಹೋಗಿದೆ. ದೇಶದ ಯುವಜನರಿಗೆ ದುಡಿಯಬಲ್ಲ ಈ ಶಕ್ತಿಗೆ ಒದಗಿರುವ ದುಸ್ಥಿತಿಯೇ ದೇಶದ ಸ್ಥಿತಿಯ ಬಗ್ಗೆ ಅದೆಷ್ಟೋ ದುರಂತದ ಕಥೆಗಳನ್ನು ಹೇಳಬಲ್ಲದು.

ರಾಜ್ಯದಲ್ಲಿ ನಿರುದ್ಯೋಗಿಗಳು ಪದವೀಧರರು	
1. ಬಿ.ಎ., ಬಿ.ಕಾಂ. ಬಿ.ಎಸ್ಸಿ	91,496
2. ಇಂಜಿನಿಯರಿಂಗ್	13,881
3. ವೈದ್ಯಕೀಯ	930
4. ಕಾನೂನು	493
5. ಶಿಕ್ಷಣ	53,457
6. ಕೃಷಿ	701
7. ಇತರೆ	1493
ಸ್ನಾತಕೋತ್ತರ	
8. ಎಂ.ಎ., ಎಂ.ಕಾಂ., ಎಂ.ಎಸ್ಸಿ	13,294
9. ಇಂಜಿನಿಯರಿಂಗ್	377
10. ವೈದ್ಯಕೀಯ	34
11. ಶಿಕ್ಷಣ	367
12. ಇತರೆ	1014
13. ಡಿಪ್ಲೊಮೋ	37,624
14. ಐಟಿಐ, ಐಟಿಸಿ	65,530
15. ಎಸ್.ಎಸ್.ಎಲ್.ಸಿ. ಪಾಸ್	12,59,576
16. ಎಸ್.ಎಸ್.ಎಲ್.ಸಿ. ಫೇಲ್	1,54,381
17. ಇತರೆ	1,71,138
ಒಟ್ಟು	**18,65,851**

(ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೊಂದಾಯಿತರಾದವರು - ಜುಲೈ 1999)

ಕರ್ನಾಟಕದಲ್ಲಿ ದುಡಿಯಬಲ್ಲವರು. 3.04 ಕೋಟಿಯಿದ್ದು, ಸದ್ಯ ದುಡಿಯುವವರನ್ನು ಹೊರತುಪಡಿಸಿದರೆ ನಿರುದ್ಯೋಗಿಗಳ ಕನಿಷ್ಠ ಪ್ರಮಾಣ ಶೇ 23.

ಕೆಲವು ತಿಂಗಳ ಹಿಂದೆ 'ಬೆಂಗಳೂರಿನ ಪೋಲಿಸ್ ಕಮಿಷನರ್ ಆಗಿದ್ದ ರೇವಣಸಿದ್ದಯ್ಯನವರು ಕೆಲವು ಮಾಹಿತಿಗಳನ್ನು ಹೊರಗೆಡವಿದರು. ರಾಜಧಾನಿಯಲ್ಲಿರುವ ಒಟ್ಟು ಅಪರಾಧ ಪ್ರಕರಣಗಳಲ್ಲಿ ಶೇ 80 ರಷ್ಟರಲ್ಲಿ 18 ರಿಂದ 25 ವಯಸ್ಸಿನ ಹದಿಹರಯದವರೇ ತೊಡಗಿದ್ದಾರೆ ಎಂಬುದು. ಇವರಲ್ಲಿ ವಿದ್ಯಾಭ್ಯಾಸ ಇಲ್ಲದವರು, ಶಿಕ್ಷಣವಿದ್ದೂ ಉದ್ಯೋಗ ಸಿಗದೇ ಪರದಾಡುವ ಅತಂತ್ರ ಯುವಜನರೇ ಬಹುತೇಕ. ಹೂದೋಟಗಳ ಹೈಟೆಕ್ ನಗರ ರಾಜಧಾನಿ ಬೆಂಗಳೂರು ಅಪರಾಧಿಗಳ ತವರೂರಾಗುತ್ತಿದೆ. ಕೈಗಾರಿಕೆಗಳು ಮುಚ್ಚುತ್ತಿರುವ ಬೆಂಗಳೂರಿನ ಹಲವು ಪ್ರದೇಶಗಳು, ಕೆ.ಜಿ.ಎಫ್., ದಾಂಡೇಲಿ, ಹುಬ್ಬಳ್ಳಿ-ಧಾರವಾಡ, ದಾವಣಗೆರೆ-ಹರಿಹರ, ಗುಲಬರ್ಗ, ಮಂಗಳೂರು - ಕಾರವಾರದಂತಹ ಒಟ್ಟು ಕರಾವಳಿ ಪ್ರದೇಶಗಳಲ್ಲಿ ಯುವಜನ ಕ್ರಿಮಿನಲ್ ಚಟುವಟಿಕೆಗಳತ್ತ ಸೆಳೆಯಲ್ಪಡುತ್ತಿದ್ದಾರೆ. ಕೋಮು ಗಲಭೆ, ಜಾತಿ ಸಂಘರ್ಷಗಳಲ್ಲಿ ಆ ಶಕ್ತಿಗಳ ದಾಳಕ್ಕೆ ಸಿಕ್ಕು ಹೂಂಕರಿಸುವ ಬಲಿಪಶುಗಳು ಇದೇ ಯುವಜನರೇ. ಉದ್ಯೋಗ ಅರಸಿ ಬಂದ ವಲಸಿಗ ನಿರುದ್ಯೋಗಿಗಳ ಮೇಲೆ ಧಾಳಿ ನಡೆಸುವವರು ಇದೇ ನಿರುದ್ಯೋಗಿಗಳೇ. ಮೀಸಲಾತಿ ವಿರೋಧಿಸುವ ಹೆಸರಲ್ಲಿ ತನ್ನಂತಹ ನಿರುದ್ಯೋಗಿಗಳ ಮೇಲೆ ಆಕ್ರಮಣ ಮಾಡುವವರು ಇವರೇ. ಪಂಜಾಬ್, ಕಾಶ್ಮೀರ, ಈಶಾನ್ಯ ಭಾರತದಂತಹ ಹಲವು ಕಡೆ ಪ್ರತ್ಯೇಕತಾವಾದಿ, ಛಿದ್ರಕಾರಿ, ಭಯೋತ್ಪಾದಕ ಶಕ್ತಿಗಳಾಗಿ ಪರಿವರ್ತಿತವಾಗಿ, ಅಮೆರಿಕಾ ಮುಂತಾದ ಸಾಮ್ರಾಜ್ಯಶಾಹಿಗಳ ಕೈಗೊಂಬೆಗಳಾಗಿ ವರ್ತಿಸುವವರಲ್ಲಿ ನಿರುದ್ಯೋಗಿ ಯುವಜನರೇ ಅತ್ಯಧಿಕ.

ಗಲ್ಲಿಗಲ್ಲಿಗಳಲ್ಲಿರುವ ಈ ನಿರುದ್ಯೋಗಿ ಯುವಜನರೇ ಅಣ್ಣಮ್ಮದೇವಿ, ಗ್ರಾಮದೇವಿಗಳ ಉತ್ಸವದಲ್ಲಿ, ರಾಜ್ಯೋತ್ಸವದಲ್ಲಿ ತೊಡಗಿಕೊಳ್ಳುವವರು, ಭಾಷಾಂಧರು, ಸ್ಥಾಪಿತ ಹಿತಾಸಕ್ತಿಗಳು, ಈ ಯುವಜನರನ್ನು ಬಳಸಿ, ಅನ್ಯಭಾಷಿಕ, ಬಡವರು, ನಿರುದ್ಯೋಗಿಗಳು ಹಾಗೂ ದುಡಿಯುವರ ವಿರುದ್ಧ ಹಲವಾರು ಬಾರಿ ಎತ್ತಿಕಟ್ಟುತ್ತಾರೆ. ಮತ್ತು ಅಂಧಶ್ರದ್ಧೆಯೂ ಈ ವಿಭಾಗದಲ್ಲೇ ಬೆಳೆಯುತ್ತವೆ. ಮೂಢನಂಬಿಕೆಗಳು, ಪವಾಡಗಳಿಗೆ, ಅತೀ ದೈವಿಕತೆಗೆ ಹೀಗೆ ಬದುಕಿನಲ್ಲಿ ಅಭದ್ರತೆ, ಆತಂಕ ಅನುಭವಿಸುತ್ತಿರುವ ಈ ವಿಶಾಲ ಯುವ ಸಮುದಾಯ ಬಲಿಯಾಗಿದೆ. ಈ ಸ್ಥಿತಿಯು ಕೋಮುಭಾವನೆ- ವಿಭಜನೆಗಳಿಗೆ ಫಲವತ್ತಾದ ಭೂಮಿ.

ನಮ್ಮಲ್ಲಿನ ಟಿ.ವಿ. ಚಾನಲ್, ಸಾಹಿತ್ಯ-ಪತ್ರಿಕೆಗಳು, ಸಿನಿಮಾಗಳು ಪ್ರಸಾರಿಸುವ ಕೊಳೆತು ನಾರುವ ಮೌಲ್ಯಗಳು, ಹಿಂಸೆ, ಕ್ರೌರ್ಯ, ಅತ್ಯಾಚಾರ, ಸಿನಿಕತನಗಳನ್ನು ವಿಜೃಂಭಿಸುವ ಪ್ರಸಾರ ಮಾಧ್ಯಮಗಳು ಯುವಜನರನ್ನು ದಾರಿ ತಪ್ಪಿಸಿವೆ. ಹತಾಶೆಗೊಂಡ



ಯುವಜನರು, ವಿದ್ಯಾರ್ಥಿಗಳು ಕುಡಿತ, ಮಾದಕದ್ರವ್ಯಗಳ ಸೇವನೆಗೆ ಈಡಾಗಿದ್ದಾರೆ. ಭೂಗತಲೋಕದ ಶಕ್ತಿಗಳು ಇವನ್ನು ಬಳಸುತ್ತಿವೆ.

ಭಾರತ ಸ್ವಾತಂತ್ರ್ಯ ಪಡೆದು ಈ 53 ವರ್ಷಗಳಲ್ಲಿ ಬೃಹತ್ ಕೈಗಾರಿಕೆ, ನೀರಾವರಿ,



...ದ್ಯೋಗ
...ತ್ತಿರುವ ಪೆಡಂಭೂತ



ಎಸ್.ವೈ.ಗುರುಶಾಂತ್

ಕೃಷಿ ಚಟುವಟಿಕೆಗಳ ವಿಸ್ತರಣೆಯಾಗಿವೆ. ಪಂಚವಾರ್ಷಿಕ ಯೋಜನೆಗಳು ದೇಶದ ಕೆಲವು ಪ್ರಾಶಸ್ತ್ಯ ಅಭಿವೃದ್ಧಿ ಕ್ಷೇತ್ರಗಳನ್ನು ಗುರುತಿಸಿ ಅಭಿವೃದ್ಧಿಗೆ ಗಮನ ನೀಡಿದೆ. ದೇಶದ ಸಂಪನ್ಮೂಲ, ಉತ್ಪಾದನಾ ಸಾಮರ್ಥ್ಯ ಬೆಳೆದಿದೆ. ನಿಜ, ಆದರೆ ಈ ಅಭಿವೃದ್ಧಿಯು ದೇಶದ ಜನತೆಗೆ ಪೂರ್ಣ ಉದ್ಯೋಗ ಒದಗಿಸಿಲ್ಲ. ಜನತೆಯ ಮೂಲಭೂತ ಅಗತ್ಯಗಳನ್ನು ಪೂರೈಸಿಲ್ಲ. ಪ್ರತಿ ಪಂಚವಾರ್ಷಿಕ ಯೋಜನೆಗಳಿಂದ ಇನ್ನೊಂದು ಯೋಜನೆಗೆ ನಿರುದ್ಯೋಗ ಬೆಳೆಯುತ್ತ ಹೋಗಿದೆ. ಸೃಷ್ಟಿಯಾದ ಉದ್ಯೋಗಗಳಲ್ಲಿ ಸಹ ಬಹುಮುಖ್ಯವಾದ ಪಾಲು ಸಾರ್ವಜನಿಕ ವಲಯದ ಕೈಗಾರಿಕೆಗಳದ್ದು. 1961 ರಲ್ಲಿ 70.5 ಲಕ್ಷ ದಿಂದ 1998 ಕ್ಕೆ 194.14 ಲಕ್ಷ ಉದ್ಯೋಗಗಳನ್ನು ನೀಡಿದೆ. ಆದರೆ ಖಾಸಗಿ ವಲಯವು 1961 ರಲ್ಲಿ 50.4 ಲಕ್ಷದಿಂದ 1998 ರಲ್ಲಿ 87.48 ಲಕ್ಷ ಹೊಂದಿದೆ. 1970 ರ ದಶಕದಲ್ಲಿ ಶೇ 57 ರಷ್ಟು ಶೇರು ಬಂಡವಾಳವನ್ನು ಸಾರ್ವಜನಿಕವಲಯ ಹೊಂದಿದ್ದು, ಉದ್ಯೋಗ ಹೆಚ್ಚಳದಲ್ಲಿ ಶೇ 9.8 ಪಾಲು ಹೆಚ್ಚಳ ಸಾಧಿಸಿದೆ. ಆದರೆ ಖಾಸಗಿ ಬಂಡವಾಳ ಶೇ 404 ರಷ್ಟು ಹೆಚ್ಚಿದ್ದು, ಉದ್ಯೋಗದ ಹೆಚ್ಚಳ ಕೇವಲ ಶೇ 6.1 ಮಾತ್ರ. ಆದರೆ ಖಾಸಗಿ ಉದ್ದಿಮೆಗಳು ಉದ್ಯೋಗ ಸೃಷ್ಟಿಸುವ ದಿಕ್ಕಿನಲ್ಲಿರದೇ ಕಡಿಮೆ ಉದ್ಯೋಗಗಳ ಮೂಲಕ ಲಾಭ ದೋಚುವ, ದಿಕ್ಕಿನಲ್ಲಿವೆ. ಇಂದಿಗೂ ಅಸಂಘಟಿತ ವಲಯದಲ್ಲಿ ದುಡಿಯುವವರು ಶೇ 92, ಸಂಘಟಿತ ವಲಯದಲ್ಲಿ ಕೇವಲ ಶೇ 8 ಮಾತ್ರ. ಅಸಂಘಟಿತ ವಲಯದಲ್ಲಿ ಉದ್ಯೋಗ ಭದ್ರತೆಯಿಲ್ಲ, ಖಾಯಂ ಇಲ್ಲ. ಕನಿಷ್ಠ ಕೂಲಿಯೂ ಸಿಗುವುದಿಲ್ಲ. ಅತೀ ಹೆಚ್ಚು ಶ್ರಮಜೀವಿಗಳಿರುವ ಕೃಷಿರಂಗವು ಶೇ 31.51 ಜನಸಂಖ್ಯೆ ಹೊಂದಿದ್ದು, ಕನಿಷ್ಠ ಜೀವನ ಸೌಲಭ್ಯಗಳು ಅವರಿಗೆ ದುಸ್ತರವಾಗಿವೆ.

ಈ ನಿರುದ್ಯೋಗಕ್ಕೆ ಕಾರಣವೇನು?

ಹೆಚ್ಚುತ್ತಿರುವ ಜನಸಂಖ್ಯೆಯೇ? ಶಿಕ್ಷಣದ ಪ್ರಸಾರವೇ? ಆಧುನಿಕ ತಂತ್ರಜ್ಞಾನವೇ? ಬೇರೆ ರಾಜ್ಯಗಳ ಜನರ ವಲಸೆಯೇ? ಹಿಂದುಳಿದ, ಪರಿಶಿಷ್ಟ ಜಾತಿಗಳವರಿಗೆ ನೀಡುವ ಮೀಸಲಾತಿಯೇ? ಅಲ್ಪಸಂಖ್ಯಾತರ ತುಷ್ಟೀಕರಣವೇ? ಅಥವಾ ಹಣಬರಹವೇ?.... ಇವೆಲ್ಲವೂ ಕಾರಣವೆನ್ನುತ್ತಾರೆ ಆಳುವವರು ಮತ್ತು ಅವರ ತುತ್ತೂರಿಗಳು. ನಿರುದ್ಯೋಗಕ್ಕೆ ಇವೇ ಕಾರಣಗಳಲ್ಲ ಎಂಬುದು ಸ್ಪಷ್ಟವಿದೆ.

25 ಅಭಿವೃದ್ಧಿಶೀಲ ದೇಶಗಳು ಹಾಗೂ ಅತ್ಯಂತ ಶ್ರೀಮಂತ ಜಿ-7 ರಾಷ್ಟ್ರಗಳು ನಮ್ಮ ದೇಶಕ್ಕಿಂತಲೂ ಅತ್ಯಂತ ಕಡಿಮೆ ಜನಸಂಖ್ಯೆ ಹೊಂದಿವೆ. ಆದರೆ 1994 ರ ಅಂಕಿಸಂಖ್ಯೆಯಂತೆ 3.5 ಕೋಟಿ ನಿರುದ್ಯೋಗಿಗಳು ಈ ದೇಶದಲ್ಲಿದ್ದಾರೆ. 2000 ಇಸ್ವಿಗೆ ಈ ಬಹಳಷ್ಟು ಸಂಖ್ಯೆ ಹೆಚ್ಚಿದೆ. ಆದರೆ ನಮಗಿಂತಲೂ ಅಧಿಕವಾಗಿ ಜನಸಂಖ್ಯೆ ಇರುವ (120 ಕೋಟಿ), ಚೀನಾದಲ್ಲಿ ಭಾರತವನ್ನು ಒಳಗೊಂಡು ಬಹುತೇಕ ಎಲ್ಲಾ ದೇಶಗಳಿಗಿಂತಲೂ ಎಷ್ಟೋ ಪರಿಣಾಮಕಾರಿಯಾಗಿ ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸಲಾಗಿದೆ, ಉದ್ಯೋಗ ದೊರಕಿಸಲಾಗಿದೆ. ಭಾರತದಲ್ಲಿ ಶಿಕ್ಷಣ ಪಡೆದವರ ಸಂಖ್ಯೆ ಶೇ 40 ದಾಟಿಲ್ಲ. ಅದರಲ್ಲಿಯೂ ಉನ್ನತ ಶಿಕ್ಷಣ ಪಡೆದವರು ಶಿಕ್ಷಣ ಪಡೆಯುತ್ತಿರುವ ಮಕ್ಕಳ ಸಂಖ್ಯೆಯಲ್ಲಿ (ಶೇ 20 ರಲ್ಲಿ) ಶೇ 5 ಕ್ಕೂ ಕಡಿಮೆ. ವಿದ್ಯಾವಂತರ ಹೆಚ್ಚಳವೇ ನಿರುದ್ಯೋಗ ಹೆಚ್ಚಿಸಿದೆ ಎನ್ನುವುದರ ಮೂಲಕ ಶಿಕ್ಷಣ ಪಡೆಯುವುದಕ್ಕೆ ಅಡೆತಡೆ ಉಂಟು ಮಾಡಲಾಗುತ್ತಿದೆ. ಶುಲ್ಕ, ಶಿಕ್ಷಣ ವೆಚ್ಚ ದುಬಾರಿ ಮಾಡಲಾಗುತ್ತಿದೆ. ಉದ್ಯೋಗ ನೀಡುವ ತಂತ್ರಜ್ಞಾನ ಭಾರತಕ್ಕೆ ಅತ್ಯಗತ್ಯವಾಗಿದೆ. ಆದರೆ ಬಂಡವಾಳ, ಲಾಭ ವೃದ್ಧಿಸುವುದನ್ನೇ ಗಮನದಲ್ಲಿರಿಸಿದ ತಂತ್ರಜ್ಞಾನ, ಹೊಸ ಆರ್ಥಿಕ ನೀತಿಗಳು, ಉದಾರೀಕರಣ, ಉದ್ಯೋಗಗಳನ್ನು ಕೊಲ್ಲುತ್ತಿವೆ ಮಾತ್ರವಲ್ಲ ನಿರುದ್ಯೋಗ ಬೆಳೆಸುತ್ತಿವೆ. ಗ್ರಾಮಾಂತರ ದಿವಾಳಿತನ, ಆಯಾ ರಾಜ್ಯಗಳಲ್ಲಿನ ಅನಭಿವೃದ್ಧಿ ಉದ್ಯೋಗ ಹುಡುಕಿಕೊಂಡು ಹೋಗುವಂತೆ ಮಾಡಿವೆ. ಇನ್ನು ಮೀಸಲಾತಿ ನಿರುದ್ಯೋಗಕ್ಕೆ ಕಾರಣವೇ ಅಲ್ಲ. ಈಗಲೂ ಪ.ಜಾತಿ ಶೇ 15, ಪ.ವರ್ಗ ಶೇ 7.5 ಇದ್ದು, ಕೇಂದ್ರ ಸರ್ಕಾರದಲ್ಲಿ ಎಸ್.ಸಿ.ಗಳಲ್ಲಿ 1ನೇ ದರ್ಜೆಯಲ್ಲಿ 8.2, 2ನೇ ದರ್ಜೆಯಲ್ಲಿ 10.4, 3ನೇ ದರ್ಜೆಯಲ್ಲಿ 14.5, 4ನೇ ದರ್ಜೆಯಲ್ಲಿ 20.1, ಹಾಗೂ ಎಸ್.ಟಿ.-ಒಂದನೇ ದರ್ಜೆ-2.1, 2ನೇ ದರ್ಜೆಯಲ್ಲಿ 1.9, ಮೂರನೇ ದರ್ಜೆ 4.2, 4ನೇ ದರ್ಜೆ 5.8 ಮಾತ್ರ ಇವೆ. ಸರ್ಕಾರ-ಅರೆ ಸರ್ಕಾರದ ಹಲವಾರು ಇಲಾಖೆಗಳಲ್ಲಿ ನೇಮಕಾತಿಯಾಗದೇ ಉಳಿದ ಉದ್ಯೋಗಗಳು ಸಾವಿರಾರು. ಹಿಂದುಳಿದ ವರ್ಗದ ಜನಸಂಖ್ಯೆ ಶೇ 52 ಇದ್ದು; ಮಂಡಲ್ ಆಯೋಗದ ಶಿಫಾರಸುಗಳು ಪೂರ್ಣ ಜಾರಿಗೆ ಬಂದರೂ ಸಿಗುವುದು ಕೇವಲ 27% ರಷ್ಟು ಜನರಿಗೆ ಮಾತ್ರ. ಹೀಗಾಗಿ, ಮೀಸಲಾತಿ ವ್ಯಾಪ್ತಿಯಲ್ಲಿನ ಹಿಂದುಳಿದ ಜಾತಿಗಳ ಯುವಜನರು 15 ಕೋಟಿಯಷ್ಟಿದ್ದು, ಬಿಗಿಯಾಗಿ ಮೀಸಲಾತಿ ಜಾರಿಯಾದರೂ ಒಂದು ಲಕ್ಷ ಮಾತ್ರ ಉದ್ಯೋಗ ಸಿಗಬಹುದೆಂದು ವರದಿಯೊಂದು ತಿಳಿಸುತ್ತದೆ. ಹಾಗೇ ಅಲ್ಪಸಂಖ್ಯಾತರು ಶೇ 11.4 ಜನಸಂಖ್ಯೆಯಿದ್ದು, ಶೇ 4.4 ರಷ್ಟು ಮಾತ್ರ ಕೇಂದ್ರ ಸರ್ಕಾರದ ಹುದ್ದೆಗಳಲ್ಲಿದ್ದಾರೆ. ಈ ಅಂಶಗಳಿಂದ ತಿಳಿದು ಬರುವುದೇನೆಂದರೆ ಆಳುವವರು, ಬಹುಮುಖ್ಯವಾಗಿ ಪಿಸುಮಾತಿನ ಸಂಘ ಪರಿವಾರದವರು ಪ್ರಚಾರಿಸುವ ವಾದಗಳು ಎಷ್ಟೊಂದು ಸುಳ್ಳು ಹಾಗೂ ಯುವಜನ ದ್ವೇಷಿ ಎಂಬುದು.

ಹಾಗಾದರೆ ಈ ನಿರುದ್ಯೋಗಕ್ಕೆ ಮುಖ್ಯ ಕಾರಣವೇನು? ನಿರುದ್ಯೋಗದ ಸಮಸ್ಯೆಗಳು ಹಾಗೂ ಸಮಾಜ ವ್ಯವಸ್ಥೆಗೂ ನಿಕಟವಾದ ಸಂಬಂಧವಿದೆ.

ಬಂಡವಾಳಶಾಹಿ ವರ್ಗಗಳು ದುಡಿಯುವ ವರ್ಗದ ಕೂಲಿ-ಸಂಬಳಗಳನ್ನು ಸದೆಬಡಿಯಲು, 'ನಿರುದ್ಯೋಗಿಗಳ ಖಾಯಂ ಮೀಸಲು ಸೈನ್ಯ'ವನ್ನು ಹೊಂದಿರಬಯಸುತ್ತವೆ. ಅಂದರೆ ದುಡಿಯುವವರಲ್ಲೇ ಕಡಿಮೆ ಸಂಬಳಕ್ಕೆ ದುಡಿಯಲು ಕೃತಕ ಸ್ಪರ್ಧೆ ಏರ್ಪಡಿಸುವುದು. ಜೀವನ ನಿರ್ವಹಣೆಗಾಗಿ ಕೂಲಿ, ಸೌಲಭ್ಯ ಹೆಚ್ಚಳಕ್ಕಾಗಿ ಕೆಲಸಗಾರರು ಚಳುವಳಿ ನಡೆಸಿದರೆ ಅದನ್ನು ಮುರಿಯಲು ಈ ನಿರುದ್ಯೋಗಿಗಳನ್ನು ಎತ್ತಿಕಟ್ಟಿ ಬಳಸುವುದನ್ನು ನಾವು ಎಲ್ಲೆಡೆ ಕಾಣಬಹುದು. ಬಂಡವಾಳಗಾರರು ಸದಾ ಬಂಡವಾಳ ಪ್ರಾಶಸ್ತ್ಯದ ಆಧುನಿಕ ತಂತ್ರಜ್ಞಾನ ಹೊಂದಬಯಸುತ್ತದೆ. ಕಡಿಮೆ ಜನ ದುಡಿದರೆ ಹೆಚ್ಚು ಲಾಭ ಹೊಡೆಯಬಹುದು ಎಂಬುದು ಲೆಕ್ಕಾಚಾರ. ಜನತೆಗೆ, ದೇಶಕ್ಕೆ ಅಗತ್ಯವಿರುವ ಉತ್ಪಾನೆಯಲ್ಲ ಬದಲಾಗಿ ಲಾಭ ತರುವ ಉತ್ಪಾದನೆ ಅವಲಂಬಿಸಲಾಗುವುದು. ಹೀಗಾಗಿ ಕಾರ್ಖಾನೆ ಮುಚ್ಚುವುದು, ನಾಶ ಮಾಡುವುದು ಸಾಗುತ್ತಿರುತ್ತದೆ.

ಭಾರತ ಸ್ವಾತಂತ್ರ್ಯಗೊಂಡು ಈ ಅವಧಿಯುದ್ದಕ್ಕೂ ಅನುಸರಿಸಿಕೊಂಡು ಬಂದ ಬಂಡವಾಳಶಾಹಿ-ಭೂಮಾಲೀಕ ಪರವಾದ ಅಭಿವೃದ್ಧಿ ಮಾರ್ಗವೇ ಈ ಸಮಸ್ಯೆಗೆ ಮೂಲ ಕಾರಣ. ಇದು ಭಾರತ ಮಾತ್ರವಲ್ಲ ಈ ನೀತಿ ಅನುಸರಿಸಿದ ಇತರೆ ದೇಶಗಳಲ್ಲಿಯೂ ಇದೇ ಸ್ಥಿತಿಯನ್ನು ಕಾಣುತ್ತೇವೆ. ಸಮಾಜವಾದಿ ಪದ್ಧತಿಯನ್ನು ಬಿಟ್ಟು - ಬಂಡವಾಳಶಾಹಿ ಪದ್ಧತಿ ಅನುಸರಿಸುತ್ತಿರುವ ಮಾಜಿ ಸಮಾಜವಾದಿ ದೇಶಗಳಲ್ಲಿಯೂ ನಿರುದ್ಯೋಗ ಉಲ್ಬಣಗೊಂಡಿರುವುದನ್ನು ನೋಡಬಹುದು.

ಭಾರತದಲ್ಲಿ ಭೂಮಿಯು ಹೆಚ್ಚು ಹೆಚ್ಚಾಗಿ ಭೂಮಾಲೀಕರಲ್ಲಿ ಕೇಂದ್ರೀಕರಣಗೊಂಡಿದೆ. ಕೋಟಿ ಕೋಟಿ ಜನತೆಯು ಭೂಹೀನರಾಗಿ ದೂಡಲ್ಪಟ್ಟಿದ್ದಾರೆ. ಕೃಷಿಯೂ ದುಬಾರಿಯಾಗುತ್ತಿದೆ. ಸೂಕ್ತ ನೀರಾವರಿ ಇಲ್ಲ. ಬೆಳೆಗೆ ಬೆಲೆಯಿಲ್ಲ. ಕನಿಷ್ಠ ಕೂಲಿ ಇಲ್ಲದೇ ಕೂಲಿಕಾರರು ದುಡಿಯುತ್ತಿದ್ದಾರೆ. ಹೀಗೆ ಆಂತರಿಕ ಮಾರುಕಟ್ಟೆ ವಿಸ್ತರಣೆ ಆಗದೇ ಕುಗ್ಗಿದೆ.

ನಮ್ಮ ದೇಶದಲ್ಲಿ ಕೃಷಿಯೋಗ್ಯ ಭೂಮಿಯು ಒಟ್ಟು ವಿಸ್ತೀರ್ಣದಲ್ಲಿ ಶೇ 38 ರಷ್ಟಿದೆ. ಇದರಲ್ಲಿ ಶೇ 18 ನ್ನು ಬಳಸಲಾಗುತ್ತಿದ್ದು ಇನ್ನು ಶೇ 20 ರಷ್ಟು ಭೂಮಿ ಅಂದರೆ ಈಗ ಕೃಷಿಗೆ ಒಳಪಟ್ಟಿರುವುದಕ್ಕಿಂತ ಹೆಚ್ಚು ಭೂಮಿಯನ್ನು ಕೃಷಿಗೆ ಒಳಪಡಿಸಿಲ್ಲ. ಆದ್ದರಿಂದ ಈ ಭೂಮಿಯನ್ನು ಮತ್ತು ಭೂಮಾಲೀಕರಲ್ಲಿ ಕೇಂದ್ರೀಕರಣ ಗೊಂಡಿರುವ ಕೋಟಿ ಕೋಟಿ ಎಕರೆ ಭೂಮಿಯನ್ನು ಭೂರಹಿತರಿಗೆ ಹಂಚಿದಲ್ಲಿ ಇಡೀ ಮಾನವ ಶ್ರಮವನ್ನು ಪೂರ್ತಿಯಾಗಿ ತೊಡಗಿಸಲು ಸಾಧ್ಯ. ಮಾತ್ರವಲ್ಲ ಉತ್ಪಾದನೆಯೂ ಅದ್ಭುತವಾಗಿ ಹೆಚ್ಚಿ, ಜನರಲ್ಲಿ ಕೊಳ್ಳುವ ಶಕ್ತಿಯೂ ಏರಲಿದೆ. ಬಳಕೆದಾರರೂ ಹೆಚ್ಚಾಗುವರು. ಹೀಗಾಗಿ ಕೃಷಿ ರಂಗದಲ್ಲಿ ಈ ಕ್ರಾಂತಿಕಾರಿ ಬದಲಾವಣೆಯಿಂದ, ವಸ್ತು ಬೇಡಿಕೆಯು ಹೆಚ್ಚಿ ಕೈಗಾರಿಕಾ ವಲಯದಲ್ಲಿ ಉತ್ಪಾದನೆಯೂ ಇಮ್ಮಡಿಗೊಳ್ಳುವುದು. ಆದ್ದರಿಂದ ಎಲ್ಲರಿಗೂ ಭೂಮಿ ಸಿಗುವಂತಹ ಪ್ರಗತಿಪರ ಭೂಸುಧಾರಣೆಯೊಂದೇ ಇದಕ್ಕೆ ಪರಿಹಾರ. ಇದು ಕೃಷಿ ರಂಗದಲ್ಲಿ ಆ ಮೂಲಕ


ಉದ್ಯೋಗ ದೊರೆತವರು ವಿನಿಮಯ ಕೇಂದ್ರಗಳ ಮೂಲಕ (ನೊಂದಾಯಿತರಲ್ಲಿ)	
1971	9.88%
1981	8.03%
1991	4.06%

ಕೈಗಾರಿಕಾ ವಲಯದಲ್ಲಿ ಉದ್ಯೋಗ ಸೃಷ್ಟಿಗೊಂಡು ನಿರುದ್ಯೋಗ ಸಮಸ್ಯೆಗೆ ಪರಿಹಾರ ಸಿಗುತ್ತದ.

ಈಗ ತರಲಾಗುತ್ತಿರುವ ಉದಾರೀಕರಣ, ಖಾಸಗೀಕರಣ, ಜಾಗತೀಕರಣ ನೀತಿಗಳು ಈ ಉದ್ಯೋಗ ಸೃಷ್ಟಿಸುವುದಿರಲಿ, ನಿರುದ್ಯೋಗವನ್ನು ವಿಪರೀತ ಹೆಚ್ಚಿಸುತ್ತಿದೆ. 1980 ರ ದಶಕದಿಂದ ಆರಂಭಗೊಂಡು ಈಗ ತೀವ್ರವಾಗುತ್ತಿರುವ ಈ ಪ್ರಕ್ರಿಯೆಯು ನಮ್ಮ ದೇಶದ ಕೈಗಾರಿಕೆಗಳನ್ನು ನಾಶಪಡಿಸುತ್ತಿವೆ. ಸುಮಾರು 4 ಸಣ್ಣ ಲಕ್ಷ ಕೈಗಾರಿಕಾ ಘಟಕಗಳು ಈಗಾಗಲೇ ಕೊನೆಯುಸಿರೆಳೆದು, ಕೋಟ್ಯಾಂತರ ಉದ್ಯೋಗಿಗಳನ್ನು ಹಾಗೂ ಕುಟುಂಬಗಳ ಸದಸ್ಯರನ್ನು ಬೀದಿಪಾಲಾಗಿಸಿವೆ. ಸಾರ್ವಜನಿಕ ವಲಯವನ್ನೇ ನಾಶಪಡಿಸಲಾಗುತ್ತಿದೆ. ಇಲ್ಲಿದ್ದ ಒಂದೆರಡು ಕೈಗಾರಿಕೆಗಳಲ್ಲಿನ 20,000, 15,000 ಹೀಗೆ ಇದ್ದ ಕೆಲಸಗಾರರ ಬದಲಾಗಿ 2000, 3000 ದಷ್ಟು ಮಾತ್ರ ಉಗ್ಯೋಗಿಗಳನ್ನು ಇರಿಸಲಾಗಿದೆ. ಬಿಹೆಚ್‌ಇಎಲ್, ಬಿ.ಇ.ಎಲ್., ಐಟಿಐ, ಹೆಚ್.ಎ.ಎಲ್., ಚಿನ್ನದ ಗಣಿ ಜೀವಂತ ದುರಂತ ಉದಾಹರಣೆಗಳು. ವಿಶೇಷವಾಗಿ ಈಗಾಗಲೇ ಸರ್ಕಾರದ ಆಮದು ನೀತಿಯಂತೆ 2100 ಕ್ಕೂ ಹೆಚ್ಚು ವಸ್ತುಗಳನ್ನು ಮುಕ್ತವಾಗಿ ದೇಶದೊಳಗೆ ತರಿಸಿಕೊಳ್ಳುವುದರಿಂದ ಕೃಷಿ-ಕೈಗಾರಿಕೆಗಳು ದಿವಾಳಿಯಾಗತೊಡಗಿವೆ.

1980 ರಿಂದಲೂ ವಾಸ್ತವವಾಗಿ ಖಾಲೀ ಇರುವ ಹುದ್ದೆಗಳಿಗೆ ನೇಮಕಾತಿಯೇ ಇಲ್ಲ. ಅಘೋಷಿತ ನಿರ್ಬಂಧ ಹೇರಲಾಗಿದೆ. ಈಗ

ಪುಟ 10ಕ್ಕೆ



ಮಾದಕ ವಸ್ತುಗಳ ಚಟಕ್ಕೆ ಬಲಿಯಾಗಿರುವ ಯುವಕ

ಭಾರತದಲ್ಲಿ ನಿರುದ್ಯೋಗ ಬೆಳವಣಿಗೆಯ ಆಸ್ಫೋಟಕಾರಿ ಚಿತ್ರ (ಲಕ್ಷಗಳಲ್ಲಿ)

ವರ್ಷ	ಉದ್ಯೋಗ ವಿನಿಮಯ	ಒಟ್ಟು ನೊಂದಾಯಿತ ಕೇಂದ್ರಗಳು	ಶಿಕ್ಷಿತ ನಿರುದ್ಯೋಗಿಗಳು ನಿರುದ್ಯೋಗಿಗಳು	ಶೇಕಡವಾರು ನಿರುದ್ಯೋಗ ಬೆಳವಣಿಗೆ
1951	126	3.29	-	-
196 1	325	18.33	5.10	1.5 %
1971	437	51.00	22.96	3.27%
1981	663	178.38	90.18	11.48%
1991	854	363.00	221.00	19.72%

ಗಿಡುಗವನ್ನು ಅಟ್ಟಿದ ಗುಬ್ಬಚ್ಚಿಗಳು

ಅರೆರೆ ಎನ್ನುಯ ಸಮಾನರಾರಿಹರು ಎಂದು ಮೆರೆಯುವ ಅಮೆರಿಕನ್ ಸಾಮ್ರಾಜ್ಯಶಾಹಿ ತನಗಿಷ್ಟವಿಲ್ಲದ ಎಲ್ಲ ದೇಶಗಳನ್ನು ಛಿದ್ರಗೊಳಿಸುವ ಕೋಟ್ಯಾಂತರ ಜನಗಳನ್ನು ಸಾವಿನ ದವಡೆಗೆ ನೂಕುವ ರಕ್ಕಸ ಆಟವನ್ನು ಆಡುತ್ತಿದೆ. ಬೊಕ್ಕಿಯಾದ ಕರುಳು ಕಿತ್ತುಬರುವ ಆಕ್ರಂದನವನ್ನು ನೋಡಿ. ಉತ್ತರ ಕೊರಿಯಾ-ದಕ್ಷಿಣ ಕೊರಿಯಾ ಪೂರ್ವ ಜರ್ಮನಿ-ಪಶ್ಚಿಮ ಜರ್ಮನಿ, ಜನತಾ ಚೀನಾ - ರಿಪಬ್ಲಿಕ್ ಚೈನಾ(ಟೈವಾನ್) ಇಂತಹ ವಿಭಜಕ ಆಟಗಳನ್ನು ಆಡಿ ಯಶಸ್ವಿಯಾದ ಅಮೇರಿಕಾ ಈ ಆಟವನ್ನು ವಿಯೆಟ್ನಾಂನಲ್ಲಿ ಆಡಹೋಗಿ ಮಣ್ಣು ಮುಕ್ಕಿದ ಯಶೋಗಾಥೆ ಇದು. ವಿಶ್ವದ ಚರಿತ್ರೆಯಲ್ಲಿ ಒಂದು ಮಹಾಸಾಹಸ.

ಶರತ್‌ಚಂದ್ರ

ಈ ವರ್ಷ ಏಪ್ರಿಲ್-30 ಕ್ಕೆ ಅಮೆರಿಕನ್ ಸಾಮ್ರಾಜ್ಯಶಾಹಿ ಅಗಾಧ ಮಿಲಿಟರಿ ಶಕ್ತಿಯನ್ನು 10 ವರ್ಷಗಳ ದೀರ್ಘ ಕಾಲ ಎದುರಿಸಿ ವಿಯೆಟ್ನಾಮ್ ಗೆದ್ದು 25 ವರ್ಷಗಳಾದವು. ಅಮೆರಿಕನ್ ಸಾಮ್ರಾಜ್ಯಶಾಹಿ ವಿರುದ್ಧ ವಿಯೆಟ್ನಾಮ್ ವಿಜಯದ ಬೆಳ್ಳಿಹಬ್ಬವಿದು. 60 ರ ಮತ್ತು 70 ರ ದಶಕದಲ್ಲಿ ಜನ-ಪರ ಒಲವು, ಕಾಳಜಿ ಇರುವ ಎಲ್ಲರಿಗೂ ಸ್ಫೂರ್ತಿಯ ಚಿಲುಮೆಯಾಗಿದ್ದದ್ದು ವಿಯೆಟ್ನಾಮ್‌ನ ಅದಮ್ಯ ಹೋರಾಟ. 'ಹಮಾರಾ ನಾಮ್-ತುಮಾರಾ ನಾಮ್-ವಿಯೆಟ್ನಾಮ್-ವಿಯೆಟ್ನಾಮ್'(ನಿಮ್ಮ ಹೆಸರು-ನಮ್ಮ ಹೆಸರು-ನಮ್ಮೆಲ್ಲರ ಹೆಸರು - ವಿಯೆಟ್ನಾಮ್ - ಅಂದರೆ ನಿಮ್ಮದು ನಮ್ಮದೂ ನಮ್ಮೆಲ್ಲರದು ಸಾಮ್ರಾಜ್ಯಶಾಹಿ-ವಿರೋಧಿ ಜನಪರ ಹೋರಾಟ ಎಂಬ ಅರ್ಥ) ಆಗಿನ ಅತ್ಯಂತ ಜನಪ್ರಿಯ ಘೋಷಣೆ. ಅಮೆರಿಕದಲ್ಲೂ, ಯುರೋಪಿನ ಇತರ ಅಭಿವೃದ್ಧ ಬಂಡವಾಳಶಾಹಿ ದೇಶಗಳಲ್ಲೂ ವಿಯೆಟ್ನಾಮ್-ಯುದ್ಧವಿರೋಧಿ ಶಾಂತಿ ಚಳುವಳಿ ಜನಪರ ಎಡ ಚಳುವಳಿಗೆ ಗಟ್ಟಿ ಅಡಿಪಾಯವಾಗಿತ್ತು. ವಿಯೆಟ್ನಾಮ್ ವಿಜಯದ ಬೆಳ್ಳಿ ಹಬ್ಬ ಈ ಶತಮಾನದ ಉತ್ತರಾರ್ಧದ ಅಮೋಘ ಹೋರಾಟದ ಮಹತ್ವವನ್ನು ನೆನಪು ಮಾಡಿಕೊಳ್ಳುವ ಸಂದರ್ಭ.

ಏಪ್ರಿಲ್ 30, 1975. ಇಡೀ ಜಗತ್ತಿನ ಪ್ರಗತಿಪರ ಜನ ಹರ್ಷೋದ್ಗಾರ ಮಾಡಿದ ದಿನ. ಆ ದಿನದ ಟೆಲಿವಿಷನ್ ಪರದೆಗಳಲ್ಲಿ ಉತ್ತರ ವಿಯೆಟ್ನಾಮ್‌ನ ಕಮ್ಯುನಿಸ್ಟ್ ಸರ್ಕಾರದ ಟ್ಯಾಂಕ್‌ಗಳು ದಕ್ಷಿಣ ವಿಯೆಟ್ನಾಂನ ಅಮೆರಿಕದ ಕೈಗೊಂಬೆ ಸರಕಾರದ ಅಧ್ಯಕ್ಷನ ಅರಮನೆ ಗೇಟ್‌ಗಳನ್ನು ಮುರಿದು ಅರಮನೆಯನ್ನು ವಶಕ್ಕೆ ತೆಗೆದುಕೊಂಡದ್ದು ನೋಡಿ ಜನ ಹರ್ಷೋದ್ಗಾರ ಮಾಡಿದ್ದರು. ವಿಯೆಟ್ನಾಮ್‌ನ ಅಂತಿಮ ವಿಜಯ ಖಚಿತವಾಗುತ್ತಿದ್ದಂತೆ ಅಮೆರಿಕನ್ ಸೈನಿಕರು ಮತ್ತು ರಾಜತಾಂತ್ರಿಕರು ಹೆಲಿಕಾಪ್ಟರುಗಳಲ್ಲಿ ವಿಮಾನಗಳಲ್ಲಿ ವಿಯೆಟ್ನಾಮ್ ಬಿಟ್ಟು ಓಡುತ್ತಿದ್ದ ದೃಶ್ಯ ಅಷ್ಟೇ 'ಮನೋರಂಜಕ'ವಾಗಿತ್ತು. ಹತ್ತು ವರ್ಷಗಳ ಕಾಲ ವಿಯೆಟ್ನಾಮ್‌ನ್ನು ಅತ್ಯಂತ ಬರ್ಬರ ದಾಳಿಗೆ ಒಳಪಡಿಸಿದ್ದ ಅಮೆರಿಕನ್ನರ ಈ ದಯನೀಯ ಸ್ಥಿತಿ ಸಾಮ್ರಾಜ್ಯಶಾಹಿ-ವಿರೋಧಿಗಳಿಗೆ ರೋಮಾಂಚನ ತಂದಿತ್ತು.

60 ರ ಮತ್ತು 70 ರ ದಶಕದಲ್ಲಿ 'ರಾಜಕೀಯ' ಯೌವ್ವನ ಪಡೆಯುತ್ತಿರುವವರಿಗೆ, ಆಗಲೇ ಜನ-ಪರ ಪ್ರಗತಿಪರ ಹೋರಾಟದಲ್ಲಿ ತೊಡಗಿಸಿಕೊಂಡಿದ್ದವರಿಗೆ ವಿಯೆಟ್ನಾಮ್ ಸ್ಫೂರ್ತಿ ಮತ್ತು ಶಿಕ್ಷಣದ ಮುಖ್ಯ ಮೂಲವಾಗಿತ್ತು. **ಎರಡನೇ ಮಹಾಯುದ್ಧ ನಂತರದ ಎಲ್ಲಾ ಕ್ರಾಂತಿಕಾರಿ ತೊರೆಗಳೂ ಸೇರಿ, ವಿಯೆಟ್ನಾಮ್‌ನ ಹೋರಾಟ ಮಹಾಸಾಗರದಂತೆ ಭೋರ್ಗರೆಯುತ್ತಿತ್ತು.** ವಿಯೆಟ್ನಾಮ್ ಸಾಮ್ರಾಜ್ಯಶಾಹಿ-ವಿರೋಧಿ ಹೋರಾಟವೂ ಆಗಿತ್ತು, ಮಾರ್ಕ್ಸ್‌ವಾದಿ- ಲೆನಿನ್‌ವಾದಿ ಪಕ್ಷವೊಂದರ ನಾಯಕತ್ವದಲ್ಲಿ ರಾಷ್ಟ್ರೀಯ ವಿಮೋಚನಾ ಹೋರಾಟದಿಂದ (ಸ್ವಾತಂತ್ರ್ಯದಿಂದ ಪಡೆಯುವುದರಿಂದ), ಸಮಾಜವಾದದತ್ತ ಸಾಗುವ ಹೋರಾಟವೂ ಆಗಿತ್ತು. ಎರಡನೇ ಮಹಾಯುದ್ಧದ ನಂತರದಲ್ಲಿ ಬಂದ ಪೀಳಿಗೆಗೆ, 20ನೇ ಶತಮಾನದ ಆದಿಯ ಪೀಳಿಗೆಗೆ ಅಕ್ಟೋಬರ್ ಕ್ರಾಂತಿ ಮಾಡಿದ ಪರಿಣಾಮವನ್ನೇ ವಿಯೆಟ್ನಾಮ್ ವಿಜಯ ಬೀರಿತ್ತು.

ವಿಯೆಟ್ನಾಮ್‌ನ ಮೂರು ದಶಕಗಳ ಕ್ರಾಂತಿಕಾರಿ ಹೋರಾಟ

ವಿಯೆಟ್ನಾಮ್ ಈಗ ಆಚರಿಸುತ್ತಿರುವುದು ಅಮೆರಿಕನ್ ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಟದ ವಿಜಯದ ಬೆಳಕು ಮಾತ್ರವಲ್ಲ. ಇದು ಮೂರು ದಶಕಗಳ ಕಾಲ ವಿಯೆಟ್ನಾಮ್‌ನ ಜನತೆಯ ವಿಮೋಚನಾ ಹೋರಾಟಕ್ಕೆ ದೊರೆತ ಜಯ.

ವಿಯೆಟ್ನಾಮ್ ಈ ಶತಮಾನದಲ್ಲಿ ಮೂರು ಸಾಮ್ರಾಜ್ಯಶಾಹಿಗಳ ವಿರುದ್ಧ ಹೋರಾಡಬೇಕಾಗಿ ಬಂದಿದೆ. ಫ್ರೆಂಚ್, ಜಪಾನ್ ಮತ್ತು ಅಮೆರಿಕನ್. ವಿಯೆಟ್ನಾಮ್, ಫ್ರೆಂಚ್, ಇಂಡೋ-ಚೀನಾ ವಸಾಹತುನ ಭಾಗವಾಗಿತ್ತು. ವಿಯೆಟ್ನಾಮ್‌ನ ಜನತೆಯ ವಿಮೋಚನಾ ಹೋರಾಟ 1937 ರಲ್ಲಿ ಇಂಡೋ-ಚೀನಾ ಕಮ್ಯುನಿಸ್ಟ್ ಪಕ್ಷದ ಸ್ಥಾಪನೆಯಿಂದ ಆರಂಭವಾಗಿತ್ತು. ಸ್ಥಾಪನೆಯಾಗುತ್ತಲೇ ವಿಮೋಚನಾ ಹೋರಾಟದ ಭಾಗವಾಗಿ ಕಮ್ಯುನಿಸ್ಟ್ ಪಕ್ಷ ಶಸ್ತ್ರಗಳನ್ನು ಕೈಗೆತ್ತಿಕೊಂಡಿತು. ಎರಡನೇ ಮಹಾಯುದ್ಧ ಮುಂದುವರೆಯುತ್ತಿದ್ದಂತೆ ಇಂಡೋ-ಚೀನಾದಲ್ಲಿ ಜಪಾನಿಯರ ಕೈಮೇಲಾಗಿ, ಫ್ರೆಂಚರು ಹಿಂದೆ ಸರಿದರು. ಹೊ-ಚಿ-ಮಿನ್‌ರ ಸಮರ್ಥ ನಾಯಕತ್ವದಲ್ಲಿ ಕಮ್ಯುನಿಸ್ಟ್ ಪಕ್ಷ ತನ್ನ ಸಶಸ್ತ್ರ ಹೋರಾಟ ಮುಂದುವರೆಸಿ, ವಿಯೆಟ್ನಾಮ್ ರಿಪಬ್ಲಿಕ್ ಘೋಷಿಸಲಾಯಿತು. ಯುದ್ಧ ಮುಗಿಯುತ್ತಿದ್ದಂತೆ ಫ್ರೆಂಚರು ಹಿಂತಿರುಗಿದರು. ಫ್ರೆಂಚರು ಕಮ್ಯುನಿಸ್ಟ್-ವಿರೋಧಿ ಕ್ಯುಮಿಂಟಾಂಗ್‌ನ ಸೈನಿಕರನ್ನು ವಿಯೆಟ್ನಾಮ್‌ನ ಉತ್ತರ ಭಾಗ ವಶಪಡಿಸಿಕೊಳ್ಳಲು ಬಳಸಿದರು. 1954 ರ ವರೆಗೆ ಫ್ರೆಂಚರ ಜತೆಗೆ ಸಶಸ್ತ್ರ ಹೋರಾಟ ಮುಂದುವರೆಯಿತು. 1954 ರಲ್ಲಿ ಪ್ಯಾರಿಸ್‌ನಲ್ಲಿ ಮಾತುಕತೆ ನಡೆದು ಎಲ್ಲಾ ಸಾಮ್ರಾಜ್ಯಶಾಹಿಗಳು ಸೇರಿ, ವಿಯೆಟ್ನಾಮನ್ನು ಇಬ್ಭಾಗ ಮಾಡುವ ಸಂಚನ್ನು ಹೂಡಿದರು. ಇದರಲ್ಲಿ ಅಮೆರಿಕದ್ದೇ ದೊಡ್ಡ ಪಾತ್ರ.


ಅಮೆರಿಕನ್ನರ ಪ್ರವೇಶ

ದಕ್ಷಿಣ ವಿಯೆಟ್ನಾಮಿನಲ್ಲಿ ಸಾಮ್ರಾಜ್ಯಶಾಹಿಗಳ ಬೆಂಬಲದಿಂದ ಅವರ ಕೈಗೊಂಬೆ ಸರ್ಕಾರವೊಂದನ್ನು ಸ್ಥಾಪಿಸಲಾಯಿತು. ಅದರ ವಿರುದ್ಧ ಹೋರಾಡಿ ದಕ್ಷಿಣ ವಿಯೆಟ್ನಾಮನ್ನು ವಿಮೋಚನೆ ಮಾಡಲು 'ರಾಷ್ಟ್ರೀಯ ರಂಗ'ವನ್ನು ರಚಿಸಲಾಯಿತು. ರಾಷ್ಟ್ರೀಯ ರಂಗದ ಯಶಸ್ವಿ ಸಶಸ್ತ್ರ ಹೋರಾಟ ಅಮೆರಿಕದ, ಅವರ ಕೈಗೊಂಬೆ ಸರ್ಕಾರದ ನಿದ್ದೆಗೆಡಿಸುತ್ತಿತ್ತು. 'ರಾಷ್ಟ್ರೀಯ ರಂಗ'ದ ಸಶಸ್ತ್ರ ದಾಳಿಯಿಂದ ತತ್ತರಿಸಲಾರಂಭಿಸಿದ್ದ ಕೈಗೊಂಬೆ ಸರ್ಕಾರ ಉಳಿಸಲು, ಅಮೆರಿಕನ್ ಸರ್ಕಾರ(ಅಧ್ಯಕ್ಷ ಕೆನಡಿ)ತನ್ನ ಸೈನ್ಯ ಕಳಿಸಲು ನಿರ್ಧರಿಸಿತು(1956 ರಲ್ಲಿ). ಮುಂದಿನ 10 ವರ್ಷಗಳ ಕಾಲ ಅಮೆರಿಕನ್ ಸೈನ್ಯದ ಸಂಖ್ಯೆ ಏರುತ್ತಾ ಹೋಗಿ 5 ಲಕ್ಷ ಮುಟ್ಟಿತ್ತು.

ವಿಯೆಟ್ನಾಮ್‌ನಲ್ಲಿ ಅಮೆರಿಕದ ಯುದ್ಧದ ಪೈಶಾಚಿಕ ಕೃತ್ಯಗಳು, ಎರಡನೇ ಮಹಾಯುದ್ಧದಲ್ಲಿ ನಾಜೀ ಮತ್ತು ಜಪಾನಿಗಳ ಯುದ್ಧ-ಅಪರಾಧಗಳನ್ನು ಮೀರಿಸುವಂತಿದ್ದವು. 30 ಲಕ್ಷ ವಿಯೆಟ್ನಾಮಿ ಜನ ಈ ಯುದ್ಧದಲ್ಲಿ ಸತ್ತರು. 1965 ರಿಂದ ಅಮೆರಿಕ, ಉತ್ತರ ವಿಯೆಟ್ನಾಮ್(ಅಲ್ಲಿ ಆಗ ಕಮ್ಯುನಿಸ್ಟ್ ಸರ್ಕಾರ ಅಧಿಕಾರದಲ್ಲಿತ್ತು) ದಕ್ಷಿಣಕ್ಕೆ ತನ್ನ ಸೈನ್ಯ ಕಳಿಸುತ್ತಿದೆ ಎಂದು ಆರೋಪಿಸಿ ಭಾರಿ ಬಾಂಬ್ ದಾಳಿ ಆರಂಭಿಸಿತು. (ಸುಳ್ಳು ಆಪಾದನೆ ಹೊರಿಸಿ-ಇರಾಕ್ ಮತ್ತು ಯುಗೋಸ್ಲಾವಿಯದಲ್ಲಿ ಮಾಡಿದಂತೆ - ಬಾಂಬ್ ದಾಳಿ ಆರಂಭಿಸುವುದು ಹೊಸತಲ್ಲ).

1972 ರವರೆಗೆ ವಿಯೆಟ್ನಾಮ್, ಕಾಂಬೋಡಿಯಾ, ಲಾವೋಸ್‌ಗಳ ಮೇಲೆ ಅಮೆರಿಕ ಸುರಿಸಿದ ಬಾಂಬ್, ಸ್ಫೋಟಕಗಳು - ಎರಡನೇ ಮಹಾಯುದ್ಧದಲ್ಲಿ ಎಲ್ಲಾ ಸೈನ್ಯಗಳು ಹಾಕಿದ್ದರ ನಾಲ್ಕು ಪಟ್ಟು ಎಂದರೆ ಈ ಯುದ್ಧದ ಅಗಾಧತೆಯ ಅರಿವಾಗುತ್ತದೆ.

ಅಮೆರಿಕದ ಮಿಲಿಟರಿ-ಕೈಗಾರಿಕಾ ಸಂಕೀರ್ಣ ವಿಯೆಟ್ನಾಮನ್ನು ತನ್ನ ಹೊಸ ಶಸ್ತ್ರಾಸ್ತ್ರಗಳ ಸಂಶೋಧನೆ ಹಾಗೂ ಪರೀಕ್ಷಣಾ ಸ್ಥಳವಾಗಿ ಪರಿವರ್ತಿಸಿತು. ನಾಪಾಮ್, ರಾಸಾಯನಿಕ ಮತ್ತು ಜೈವಿಕ ಶಸ್ತ್ರಾಸ್ತ್ರಗಳನ್ನು ವಿಯೆಟ್ನಾಮ್‌ನ ಮೇಲೆ ಮುಕ್ತವಾಗಿ ಬಳಸಲಾಯಿತು. ಇದು ಜನರನ್ನು ಮಾತ್ರವಲ್ಲ, ಗಿಡ-ಮರಗಳನ್ನು ನಾಶಮಾಡುವಂಥವು. ದಕ್ಷಿಣ ವಿಯೆಟ್ನಾಮ್‌ನಲ್ಲಿ ಅಮೆರಿಕನ್ ಕೈಗೊಂಬೆ ಸರ್ಕಾರದ ವಿರುದ್ಧ ಸಶಸ್ತ್ರ ಹೋರಾಟ ನಡೆಸುತ್ತಿದ್ದ ಗೆರಿಲ್ಲಾಗಳಿಗೆ ಸಪ್ಲೈ ಒದಗಿಸಲು ಉತ್ತರದಿಂದ - ದಕ್ಷಿಣ ವಿಯೆಟ್ನಾಂಗೆ ಕಾಡಿನ ಮೂಲಕ 'ಹೊ-ಚಿ-ಮಿನ್ ದಾರಿ'ಯನ್ನು ಗೆರಿಲ್ಲಾ ಗಳು ತಯಾರಿಸಿದ್ದರು. ಈ ದಾರಿಯನ್ನು ನಾಶ ಮಾಡಿ, ಸಪ್ಲೈ ತಪ್ಪಿಸಲು ಅಮೆರಿಕ ಏಜೆಂಟ್ ಆರೆಂಜ್ ಎಂಬ ಹಸಿರು ಸಸ್ಯ, ಗಿಡ-ಮರಗಳನ್ನು ನಾಶ ಮಾಡುವ ರಾಸಾಯನಿಕ ಬಳಸಿ ಹಲವು ವಿಮಾನ ಹಾರಾಟಗಳ ಮೂಲಕ ಈ 'ಪರಿಸರ ಮೇಧ' ನಡೆಸಿದರು. ಇದರ ಪರಿಣಾಮದಿಂದ ಆಮೇಲೆ ಸಾವಿರಾರು ನವಜಾತ ಶಿಶುಗಳು ಸಾಯುತ್ತಿದ್ದವು. ಈಗಲೂ-ಹಲವು ವಿಯೆಟ್ನಾಮಿಗಳು ಈ ರಾಸಾಯನಿಕ-ಜೈವಿಕ ಶಸ್ತ್ರಾಸ್ತ್ರಗಳ ಬಳಕೆಯಿಂದ ನರಳುತ್ತಿದ್ದಾರೆ.



ರಾಸಾಯನಿಕಗಳಿಂದ 55 ಲಕ್ಷ ಎಕರೆ ಕಾಡನ್ನು ನಾಶ ಮಾಡಿದರು

ಚೀನಾ-ಸೋವಿಯತ್ ಒಡಕಿನ ನಡುವೆ ವಿಯೆಟ್ನಾಮ್ ವಿಜಯ

ವಿಯೆಟ್ನಾಮ್ ಸಶಸ್ತ್ರ ವಿಮೋಚನಾ ಹೋರಾಟಕ್ಕೆ

ವಿಯೆಟ್ನಾಮ್ ವಿಜಯದ ಬೆಳ್ಳಿಹಬ್ಬ

ಇಡೀ ವಿಯೆಟ್‌ನಾಮ್ ವಿಜಯದ ಬೆಳ್ಳಿಹಬ್ಬವನ್ನು ಸಂಭ್ರಮದಿಂದ ಆಚರಿಸಿತು. ಮಾರ್ಚ್ ಮತ್ತು ಏಪ್ರಿಲ್ ಎರಡೂ ತಿಂಗಳ ತುಂಬಾ ಆಚರಣೆ ಇತ್ತು. ದಕ್ಷಿಣ ವಿಯೆಟ್ನಾಂನ 'ಬೌನ್ ಮಾ ಥೋಟ್' ಎಂಬ ಪಟ್ಟಣದಲ್ಲಿ ವಿಜಯೋತ್ಸವ ಆರಂಭವಾಯಿತು. ವಿಜಯದ ಪ್ರಮುಖ ಘಟ್ಟಗಳನ್ನು ಬಿಂಬಿಸುವ ಜಾಗಗಳಲ್ಲಿ ವಿಜಯೋತ್ಸವ ಆಚರಿಸಲಾಯಿತು. ಹಳೆಯ ಗೆರಿಲ್ಲಾ ಸೈನಿಕರ ಪುನರ್ಮಿಲನ, ಸನ್ಮಾನ ಇತ್ಯಾದಿ ಎರಡೂತಿಂಗಳು ನಡೆಯಿತು. ಮುಖ್ಯ ಸಮಾರಂಭ ಏಪ್ರಿಲ್ 30, 1975 ರಂದು ರಾಜಧಾನಿ ಹೋ-ಚಿ-ಮಿನ್ ನಗರದಲ್ಲಿ ಜರುಗಿತು. ಲಕ್ಷಾಂತರ ಜನ ಈ ಹೆಮ್ಮೆಯ ಸಮಾರಂಭದಲ್ಲಿ ಭಾಗವಹಿಸಿದ್ದರು.

ವಿಶ್ವಾದ್ಯಂತ ದಂತಕತೆಯಾದ ಜನರಲ್ ಗಿಯಾಪ್

ವಿಯೆಟ್ನಾಮಿನ ವೀರಗಾಥೆಯ ನಿಜವಾದ 'ಹೀರೋ'ಗಳು ವಿಯೆಟ್ನಾಮಿನ ಜನ. ಅದಕ್ಕೆ ಸಂಶಯವಿಲ್ಲ, ಆದರೆ ಜಗತ್ತಿನ ಅತ್ಯಂತ ಪ್ರಬಲ ಮಿಲಿಟರಿ ಸೋಲಿಸಿದ ಜನರಿಗೆ ಯಶಸ್ವೀ ಸಮರ್ಥ ನಾಯಕತ್ವ ನೀಡಿದ ವಿಯೆಟ್ನಾಮಿನ ಕಮ್ಯುನಿಸ್ಟ್ ಪಕ್ಷದ ನಾಯಕರಲ್ಲಿ, ಜನರಲ್ ಗಿಯಾಪ್ ದಂತಕತೆಯಾದವರು. ಈಗಲೂ ಬದುಕಿರುವ ಜನರಲ್ ಗಿಯಾಪ್ ಗೆರಿಲ್ಲಾ ಯುದ್ಧದಲ್ಲಿ ಹೂಡಿದ ತಂತ್ರಗಾರಿಕೆ, ಅಮೆರಿಕದ ಹಿಂಡು-ಹಿಂಡು ಮಿಲಿಟರಿ ಯೋಜಕರಿಗೆ ಚಳ್ಳೆ ಹಣ್ಣು ತಿನ್ನಿಸಿತ್ತು.

"ನಾವು ದೊಡ್ಡ ಶಸ್ತ್ರಾಸ್ತ್ರಗಳ ವಿರುದ್ಧ ಚಿಕ್ಕ, ಆಧುನಿಕ ಶಸ್ತ್ರಗಳ ವಿರುದ್ಧ ಹಿಂದುಳಿದ ಶಸ್ತ್ರಾಸ್ತ್ರಗಳನ್ನು ಬಳಸಲೇಬೇಕಾದ ಅನಿವಾರ್ಯವಿತ್ತು. ಯುದ್ಧದಲ್ಲಿ ಜನತೆ ಮತ್ತು ಶಸ್ತ್ರಾಸ್ತ್ರ ಎರಡೂ ಮುಖ್ಯವಾದವು. ಆದರೆ ಕೊನೆಗೆ ನಿರ್ಣಾಯಕವಾಗುವುದು ಜನಬಲ ಎಂಬುದನ್ನು ವಿಯೆಟ್ನಾಮ್ ಯುದ್ಧ ತೋರಿಸಿತು"

ವಿಯೆಟ್ನಾಮ್ ವಿಜಯದ ಬೆಳ್ಳಿಹಬ್ಬದ ಸಂದರ್ಭದಲ್ಲಿ ಗಿಯಾಪ್ ಸಂದರ್ಶನಕ್ಕೆ ಡಿಮಾಂಡೋ ಡಿಮಾಂಡು. ಇಂತಹ ಸಂದರ್ಶನವೊಂದರಲ್ಲಿ ಅವರ ಮಾತುಗಳು: ಅವರ ಅತ್ಯಂತ ಹೆಮ್ಮೆಯ ಕ್ಷಣಗಳ ಬಗ್ಗೆ ಕೇಳಿದಾಗ

"ಹಲವು ಇಂತಹ ಕ್ಷಣಗಳು ಇದ್ದವು. ಆದರೆ ಅತ್ಯಂತ ಹೆಮ್ಮೆಯ ಕ್ಷಣ ಏಪ್ರಿಲ್ 30, 1975 ರದ್ದು ಎಂಬ ಬಗ್ಗೆ ಸಂಶಯವಿಲ್ಲ. ನಮ್ಮ ಟ್ಯಾಂಕ್‌ಗಳು ಸೈಗಾನ್‌ನ ಅಧ್ಯಕ್ಷೀಯ ಅರಮನೆಯ ಗೇಟ್‌ಗಳನ್ನು ಒಡೆದು ನುಗ್ಗಿದವು ಎಂದು ರೇಡಿಯೊದಿಂದ ಸಂದೇಶ ಬಂದಾಗ, ನಾನಿದ್ದ 'ಸುಪ್ರೀಮ್ ಕಮಾಂಡ್'ನ ಕೋಣೆ ಇಡಿಯಾಗಿ ಗರ್ಜಿಸಿತು. ನನ್ನನ್ನು ಸೇರಿ, ನಮ್ಮೆಲ್ಲರ ಕಣ್ಣುಗಳಲ್ಲಿ ಆನಂದದ ಕಣ್ಣೀರಿತ್ತು" ಎನ್ನುವಾಗ ಗಿಯಾಪ್‌ನ ಮುದಿ ಕಣ್ಣುಗಳೂ ಹೊಳೆಯುತ್ತವೆ.

ಮೈಲೇ ಗ್ರಾಮದಲ್ಲಿ ಅಮೆರಿಕನ್ ಪೈಶಾಚಿಕತೆ

ಮೈಲೇ ವಿಯೆಟ್ನಾಮ್ ಯುದ್ಧದಲ್ಲಿ ಅಮೆರಿಕನ್ ನಾಜಿ-ಸದೃಶ ಪೈಶಾಚಿಕತೆಯ ಪ್ರತೀಕವಾಗಿತ್ತು. ಅದೊಂದು ವಿಯೆಟ್ನಾಮ್‌ನ ಹಳ್ಳಿ. ಲೆಫ್ಟಿನೆಂಟ್ ಕ್ಯಾಲಿ ಎಂಬ ಅಧಿಕಾರಿ ಮತ್ತು ಆತನ ತುಕಡಿ ಆ ಹಳ್ಳಿಯ 504 ಹೆಂಗಸರು ಮಕ್ಕಳ ನರಮೇಧ, ಜಗತ್ತನ್ನು ಆಗ ತಲ್ಲಣ ಗೊಳಿಸಿತ್ತು. ಅಂತರ್‌ರಾಷ್ಟ್ರೀಯ ಸ್ಪಂದನ ಮೈಲೇಗೆ ಎಷ್ಟು ಜೋರಾಗಿತ್ತೆಂದರೆ, ಅಮೆರಿಕನ್ ಸೈನ್ಯ ಆ ಬಗ್ಗೆ ವಿಚಾರಣೆ ನಡೆಸಿ ಲೆಫ್ಟಿನೆಂಟ್ ಕ್ಯಾಲಿ ತಪ್ಪಿತಸ್ಥನೆಂದು ಸಾರಬೇಕಾಯಿತು. ಆದರೆ ಆತನಿಗೆ ಅದಕ್ಕೆ ಸಿಕ್ಕ ಶಿಕ್ಷೆ. ಮೂರುವರ್ಷ ಗೃಹ ಬಂಧನ! ಆಮೇಲೆ ಬಿಸಿ ತಣ್ಣಗಾದ ಮೇಲೆ ಆತನನ್ನು ಬಿಡುಗಡೆ ಮಾಡಲಾಯಿತು. ಮೈಲೇ ವರದಿಯಾಗಿ ಸುದ್ದಿಯಾಗಿತ್ತು. ಆದರೆ ವರದಿ ಯಾಗದ, ಸುದ್ದಿಯಾಗದ ಹಲವಾರು ಮೈಲೇಗಳು ವಿಯೆಟ್ನಾಮ್ ಯುದ್ಧದ ಗರ್ಭದಲ್ಲಿ ಅಡಗಿವೆ. ಕರ್ನಾಟಕದ ಪ್ರಸಿದ್ಧ ಚಿತ್ರಕಾರ ಕೆ.ಕೆ.ಹೆಬ್ಬಾರ 'ಮೈಲೇ' ಮೇಲೆ ಒಂದು ತೈಲ ಚಿತ್ರವನ್ನು ಮಾಡಿ ಆಗ ಪ್ರಸಿದ್ಧರಾಗಿದ್ದರು.



ವಿಜಯದ ಅಂತಿಮ ಕ್ಷಣ: ಸೈಗಾನ್‌ನಲ್ಲಿ ಅಧ್ಯಕ್ಷರ ಅರಮನೆಯನ್ನು ವಶ ಮಾಡಿಕೊಳ್ಳುತ್ತಿರುವ ವಿಯೆಟ್ನಾಮ್ ಸೈನ್ಯ

ಅಂತರಾಷ್ಟ್ರೀಯವಾಗಿ ಪ್ರಶಸ್ತವಾದ ಸಮಯವೇನೂ ಆಗಿರಲಿಲ್ಲ. ಇದೇ ಅವಧಿಯಲ್ಲಿ ಚೀನಾ ಮತ್ತು ಸೋವಿಯತ್ ಕಮ್ಯುನಿಸ್ಟ್ ಪಕ್ಷಗಳ ನಡುವೆ ತೀವ್ರ ಸೈದ್ಧಾಂತಿಕ ಭಿನ್ನಾಭಿಪ್ರಾಯದಿಂದ ಆರಂಭವಾಗಿ, ಅವುಗಳೆರಡು ಪರಸ್ಪರ ವೈರಿಗಳೆಂದು ಪರಿಗಣಿಸುವಷ್ಟು ವಿಕೋಪಕ್ಕೆ ಹೋಗಿತ್ತು. ವಿಯೆಟ್ನಾಮಿನ ಕಮ್ಯುನಿಸ್ಟ್ ಪಕ್ಷ ಇಲ್ಲಿ ನೀತಿಬದ್ಧ ನಿಲುವ ಅನುಸರಿಸಿ, ಎರಡು ಪಕ್ಷಗಳಿಗೂ ತಮ್ಮ ಮತ-ಭೇದಗಳನ್ನು ಮರೆತು ಅಮೆರಿಕನ್-ಸಾಮ್ರಾಜ್ಯಶಾಹಿ ವಿರುದ್ಧ ಒಂದಾಗಬೇಕೆಂದು ಕರೆ ನೀಡಿದ್ದರು. ಅಲ್ಲದೆ ಬಹುಮಟ್ಟಿಗೆ ತಮ್ಮ ಕಾಲ ಮೇಲೆ ನಿಂತು ಹೋರಾಡಿದರು. ಚೀನಾ ಮತ್ತು ಸೋವಿಯತ್ ಒಕ್ಕೂಟಗಳು, ಅವುಗಳ ಮತ-ಬೇಧಗಳು ಏನೇ ಇರಲಿ, ವಿಯೆಟ್ನಾಮ್‌ಗೆ ಅತ್ಯಮೂಲ್ಯ ರಾಜಕೀಯ-ಮಿಲಿಟರಿ-ಸಾಮಗ್ರಿಗಳ ನೆರವು ನೀಡಿದವು. ಇದು ವಿಯೆಟ್ನಾಮಿನ ವಿಜಯದಲ್ಲಿ ನಿರ್ಣಾಯಕ ಪಾತ್ರ ವಹಿಸಿದೆ.

ಆದರೆ ನಿಜವಾದ 'ಹೀರೋ'ಗಳು ವಿಯೆಟ್ನಾಮಿನ ಜನ. ಸಮರ್ಥ ನಾಯಕತ್ವ ನೀಡಿದ ಹೊ-ಚಿ-ಮಿನ್‌ರ ಕಮ್ಯುನಿಸ್ಟ್ ಪಕ್ಷ. ಜಗತ್ತಿನ ಅತ್ಯಂತ ಪ್ರಬಲ ದೇಶದ ಎಲ್ಲಾ ಮಿಲಿಟರಿ ಬಲವನ್ನು ಎದುರುಹಾಕಿಕೊಂಡರೂ ಕಂಗೆಡಲಿಲ್ಲ. ಹಗಲಲ್ಲಿ ಹೋರಾಟ ಮಾಡಿ, ರಾತ್ರಿ ವೈರಿ ನಿದ್ರಿಸುತ್ತಿದ್ದಾಗ ಕೃಷಿ, ಕೈಗಾರಿಕೆಗಳಲ್ಲಿ ತೊಡಗಿ ಆರ್ಥಿಕವನ್ನು ನಡೆಸುತ್ತಿದ್ದ ಅಮೋಘ ವೀರಗಾಥೆಗಳು ವಿಯೆಟ್ನಾಮಿನ ತುಂಬಾ ಸಿಗುತ್ತವೆ. ಅಮೆರಿಕದ ಸೈನ್ಯವು ಈ ಯುದ್ಧದಲ್ಲಿ ತೀವ್ರ ಕಷ್ಟ-ನಷ್ಟ ಅನುಭವಿಸಿತು. 58 ಸಾವಿರ ಜನ ಸೈನಿಕರು ಸತ್ತರು. ವಿಯೆಟ್ನಾಮ್ ತಮ್ಮ 'ಸ್ವದೇಶಿ' ಹಸ್ತಚಾಲಿತ ಆಂಟಿ-ಏರ್‌ಕ್ರಾಫ್ಟ್ ಗನ್ನುಗಳಿಂದ 3726 ಯುದ್ಧ ವಿಮಾನಗಳನ್ನು, 486(?) ಹೆಲಿಕಾಪ್ಟರನ್ನು ಕೆಡವಿದರು. 1970 ರ ಹೊತ್ತಿಗೆ ಯುದ್ಧದ ನಷ್ಟ, ಭಾರಿ ಹಾನಿ ಅಮೆರಿಕಕ್ಕೂ ಸಹಿಸಲಾರದ ಮಟ್ಟ ಮುಟ್ಟಿತ್ತು. ಅದರ ಜತೆ ವಿಯೆಟ್ನಾಮ್ ಯುದ್ಧಕ್ಕೆ ಕಡ್ಡಾಯ ಮಿಲಿಟರಿ-ಸೇವೆಯ ಆಧಾರದ ಮೇಲೆ ವಿದ್ಯಾರ್ಥಿ ಚಳುವಳಿಯ ವಿರುದ್ಧ ಕಳಿಸುತ್ತಿದ್ದುದರಿಂದ, ಅಮೆರಿಕದ ವಿಶ್ವವಿದ್ಯಾಲಯಗಳಲ್ಲಿ ಪ್ರಬಲ ಯುದ್ಧ-ವಿರೋಧಿ ಚಳುವಳಿ ಹುಟ್ಟಿತು. ಯುವಕರನ್ನು ವಿದ್ಯಾರ್ಥಿಗಳನ್ನು ಎಳೆತಂದು ಸೇನೆಗೆ 1968 ರಲ್ಲಿ ಕೆಲವು ವಿಶ್ವವಿದ್ಯಾಲಯಗಳಲ್ಲಿ 'ನೇಶನಲ್ ಗಾರ್ಡ್ಸ್' ಬಳಕೆ ಮತ್ತು ಗೋಳಿಬಾರು ಇಡೀ ದೇಶದ ತುಂಬಾ ಯುದ್ಧ ವಿರೋಧಿ ಭಾವನೆ ಬರುವಲ್ಲಿ ನೆರವಾಯಿತು.

ಈ ಎಲ್ಲಾ ಕಾರಣಗಳಿಂದ ಅಮೆರಿಕ ವಿಯೆಟ್ನಾಮಿನಿಂದ ಕಾಲ್ತೆಗೆಯಬೇಕಾಯಿತು. 1973 ರಲ್ಲಿ ಪ್ಯಾರಿಸ್ ಒಪ್ಪಂದವಾಯಿತು. 1973 ರಿಂದ ಅಮೆರಿಕದ ಬಹುಭಾಗ ಪಡೆಗಳು ಕಾಲ್ತೆಗೆದರೂ ದಕ್ಷಿಣ ವಿಯೆಟ್ನಾಂನಲ್ಲಿ ಅದರ ಕೈಗೊಂಬೆ ಸರ್ಕಾರದ ನೆರವಿನಲ್ಲಿ ಮುಂದುವರೆಯಲು ಪ್ರಯತ್ನಿಸಿತು. ಇನ್ನೆರಡು ವರ್ಷಗಳಲ್ಲಿ ದಕ್ಷಿಣ ವಿಯೆಟ್ನಾಮಿನ ಗೆರಿಲ್ಲಾ ಹೋರಾಟ

"ನಾನು ಇನ್ನು ಹನ್ನೆರಡು ವರ್ಷಗಳಲ್ಲಿ ಶತಕ ಮುಟ್ಟುತ್ತೇನೆ. ಆದರೆ ನನ್ನ ಕಮ್ಯುನಿಸ್ಟ್ ಚೇತನ ಇನ್ನೂ ಯೌವ್ವನ ಸೂಸುತ್ತಿದೆ" ಎನ್ನುತ್ತಾರೆ ವಿಯಟ್ನಾಮ್‌ನ ವಿಜಯದ ಹೆಮ್ಮೆಯ ನಾಯಕ ಜನರಲ್ ಗಿಯಾಪ್.

ಇಡೀ ಪ್ರದೇಶವನ್ನು ವಶಪಡಿಸಿಕೊಂಡು ಅಮೆರಿಕದ ಕೈಗೊಂಬೆ ಸರ್ಕಾರದ ಸೈನ್ಯ ಮತ್ತು ಅಳಿದುಳಿದ ಅಮೆರಿಕನ್ನರನ್ನು ಹೊಡೆದೋಡಿಸಿತು.


ವಿಜಯದ ಪಾಠಗಳು

ವಿಯೆಟ್ನಾಮಿನ ಹೋರಾಟ ಜನತೆಯ ವಿಮೋಚನಾ ಹೋರಾಟವನ್ನು ಯಾವುದೇ ಅಗಾಧ ವಾದ ಮಿಲಿಟರಿ ಶಕ್ತಿ ಸೋಲಿಸಲಾಗದು ಎಂದು ಇಡೀ ಜಗತ್ತಿಗೆ

ಪುಟ 10 ಕ್ಕೆ

ಅವರು ಕಾಯುತ್ತಾರೆ

ಅವರು ಕಾಯುತ್ತಾರೆ
ಗುಹೆಗಳಲ್ಲಿ, ಕಾಡುಗಳಲ್ಲಿ; ಬೆಟ್ಟಗಳಲ್ಲಿ
ಹಾರಿ ಬಂದ ಶೆಲ್ಲುಗಳ ಹೆಕ್ಕುತ್ತಾ
ಸಿಡಿಯಲಾರದ ಬಾಂಬುಗಳು ಉಸಿರು
ಪಡೆಯುವ ಮುನ್ನ
ನಿಷ್ಕ್ರಿಯಗೊಳಿಸುತ್ತಾ -
ಗುರಿ ಮಾಡಿದ ಬಂದೂಕುಗಳಿಗೆ
ತಿರುಗುವ ಕ್ಷಿಪಣಿಗೆ
ಕೆಲವೊಮ್ಮೆ ಆಹಾರವಾಗುತ್ತ
ನೀರವ ರಾತ್ರಿಗಳಲ್ಲಿ,
ಹಾಡ ಗುನುಗುಗಳು ಸಂಗಾತಿಯಾಗಿದ್ದಾಗ
ಶೆಲ್ಲು ಕತ್ತಲ ಮರೆಸಿ
ಬಾಂಬು ಒಡಲನು ಕುದಿಸಿ
ಶಬ್ದಗಳ ಸೀಳುತ್ತವೆ
ನಮ್ಮ ಹೃದಯದಿಂದ ಹಾಡುಗುನುಗುಗಳ ಕಿತ್ತು
ಮೂಕ ರಾತ್ರಿಗಳಲ್ಲಿ
ಸತ್ತು ಬಿದ್ದಿವೆ ರಸ್ತೆ
ಕರೆದೊಯ್ಯಲಾಗದೆ ಕನಸುಗಳ ನಮ್ಮೂರಿಗೆ
ಕತ್ತಲಿನ ನಿಟ್ಟುಸಿರು
ಗಾಢ ಕಾಡುವ ನೋವು
ತಲುಪಲಾರವೆ ಬೆಳಕು ರಾಜ್ಯವನ್ನು
ಇಲ್ಲಿ ಕತ್ತಲಿನಲ್ಲಿ
ಹೆಪ್ಪುಗಟ್ಟಿದ ಮೌನ ಗುಳೆ ಎದ್ದ ಮಾತುಗಳು
ತಿರುಗಿ ಬರಲಿಲ್ಲ
ಕಣ್ಣು ಕೊಡು, ಕನಸ ಕೊಡು
ಕವನ ಕೊಡು, ರಾಗ ಕೊಡು
ದೂರದಲ್ಲಿ ಉಳಿದ ನಿಮ್ಮ ತುಣುಕುಗಳಿಗೆ
ಹಾಡಲಾಗದ ಎದೆಗೆ ಒಂದಿಷ್ಟು ಭಾವಗಳ
ಹಾರಲಾರದ ಮನಕೆ ಒಂದಷ್ಟು ರೆಕ್ಕೆ
ಬಾಂಬು ಬೀಳಲಿ ಇನ್ನು, ಶೆಲ್ಲುಗಳು ಹಾರಲಿ
ನಮ್ಮ ಎದೆ ಕನಸನ್ನು
ಕಡಿದಷ್ಟೂ ಗೆಳೆಯ
ಅವು ಚಿಗುರುತ್ತಲೇ ಇರುತ್ತವೆ
ವಿಯಟ್ನಾಂನ ಕ್ಷನು ಮರಗಳಂತೆ
ಒಂದೊಂದೇ ಶೆಲ್ಲುಗಳು ಎದೆಗೆ ಬಡಿದಂತೆಲ್ಲಾ
ಉಳಿಯುವುವು ಹಾಡ ಗುನುಗುಗಳು, ಭಾರ
ಎದೆ ಬಡಿತಗಳು ಮಾತ್ರ.



ಬಿಜೆಪಿ ಉಪಾಧ್ಯಕ್ಷ ಖುರಾನಾಗೆ ಖೊಕ್ ಕೊಟ್ಟ ಜಾಗತೀಕರಣ!

ಹೌದು ಬಿಜೆಪಿ ಉಪಾಧ್ಯಕ್ಷ ಖುರಾನಾಗೆ ಅವರ ಅಧ್ಯಕ್ಷ ಠಾಕ್ರೆ ಖೊಕ್ ಕೊಟ್ಟಿದ್ದಾರೆ. ಇದಕ್ಕೂ ಜಾಗತೀಕರಣಕ್ಕೂ ಏನೂ ಸಂಬಂಧ? ಎಂದು ಮೂಗು ಮುರಿಯಬೇಡಿ. ಕಾಲು ಫ್ರಾಕ್ಚರ್ ಆಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಅಧ್ಯಕ್ಷ ಠಾಕ್ರೆ ಅದೇ ಕಾಲಿನಿಂದ ಖುರಾನಾಗೆ ಒದ್ದಿದ್ದಾರೆ. ಯಾಕೆ ಇಷ್ಟು ಗಡಿಬಿಡಿ. ಯಾಕೆಂದರೆ ಖುರಾನಾ ಇತ್ತೀಚೆಗೆ ಆಮದು ನೀತಿ ಮತ್ತು ಸಂಚಾರವಾಹಿನಿ ಪ್ರಾಜೆಕ್ಟನ್ನು 'ದೇಶದ ಸಾರ್ವಭೌಮತೆ ಮತ್ತು ಭದ್ರತೆಗೆ' ಅಪಾಯ ಎಂದು ಪ್ರಧಾನಿಗೆ ಬರೆದ ಪತ್ರದಲ್ಲಿ ಟೀಕಿಸಿದ್ದಾರೆ. ಸ್ವಾಮಿ ಆಳುವ ಪಕ್ಷದ ಉಪಾಧ್ಯಕ್ಷರಾದರೂ ಜಾಗತೀಕರಣದ ವಿರುದ್ಧ ಟೀಕೆ ಮಾಡಿ ಬಚಾವಾಗುವಂತಿಲ್ಲ. ಜಾಗತೀಕರಣದ ಮಹಿಮೆ ಹಾಗಿದೆ ಸ್ವಾಮಿ? ಅವರು ಆರೆಸ್ಸೆಸ್ ಹೇಳಿದ್ದನ್ನೇ ನಾನು ಹೇಳಿದ್ದು. ನನಗೆ ಮಾತ್ರ ಯಾಕೆ ಶಿಕ್ಷೆ ಎಂದು ಗೋಳಾಡುತ್ತಿದ್ದಾರೆ.

ಬಿಜೆಪಿ ಉಪಾಧ್ಯಕ್ಷ ಖುರಾನಾ ಬಹಳ ತಿಂಗಳುಗಳಿಂದ, ಆಳುವ ಪಕ್ಷದಲ್ಲಿ ಭಿನ್ನಮತೀಯರು. ಅವರು ಇತ್ತೀಚೆಗೆ ಒಂದು ಪತ್ರ ಬರೆದರು, ಪ್ರಧಾನ ಮಂತ್ರಿ ವಾಜಪೇಯಿಗೆ. ಅದರಲ್ಲಿ 'ರಾಷ್ಟ್ರೀಯ ಹಿತಾಸಕ್ತಿ' ಮತ್ತು 'ಭದ್ರತೆ'ಗೆ ಅಪಾಯ ತರುವ ಇತ್ತೀಚಿನ ಹಲವು ನೀತಿಗಳನ್ನು ವಿರೋಧಿಸಿದ್ದರು. ಕೃಷಿ, ಆಹಾರ ಸಂಬಂಧಿ ಸರಕುಗಳು ಸೇರಿದಂತೆ 1429 ಸರಕುಗಳ ಮೇಲೆ ಆಮದು ನಿರ್ಬಂಧಗಳನ್ನು ತೆಗೆದುಹಾಕುವ ಆಮದು ನೀತಿ, ರೇಶನ್ ಆಹಾರಧಾನ್ಯಗಳ ಬೆಲೆ ಏರಿಕೆ ಮತ್ತು ಸಂಚಾರ ವಾಹಿನಿ ಪ್ರಾಜೆಕ್ಟ್ ಬಗ್ಗೆ ಅವರು ಪ್ರಸ್ತಾಪ ಮಾಡಿರುವ ನೀತಿಗಳು. ಇವೆಲ್ಲಾ ಜಾಗತೀಕರಣದ ಹಾದಿಯಲ್ಲಿ ಇನ್ನೂ ರಭಸದಿಂದ ಸಾಗಿರುವ ವಾಜಪೇಯಿ ಸರ್ಕಾರದ ಅಮೇರಿಕ ಮುಂತಾದ ಸಾಮ್ರಾಜ್ಯಶಾಹಿ ದೇಶಗಳಿಗೆ ಅತ್ಯಂತ ಪ್ರಿಯವಾದ ನೀತಿಗಳು ಎಂದು ಬೇರೆ ಹೇಳಬೇಕಾಗಿಲ್ಲವಲ್ಲ.

ಪಾಪ ಖುರಾನಾ ಪ್ರಧಾನವಂತ್ರಿಗೆ ಖಾಸಗಿಯಾಗಿ ಕಾಗದ ಬರೆದು, ಅವರ ಅಭಿಪ್ರಾಯ ಹೇಳಿದರೆ ಅದು ಹೇಗೆ ಅಶಿಸ್ತು ಆಗುತ್ತದೆ ಎಂದಿರಾ? ಆ ಪತ್ರ ಗುಟ್ಟಾಗಿ ಇರಲಿಲ್ಲ. ಪತ್ರಿಕೆಗಳಿಗೆ 'ಲೀಕ್' ಆಯಿತು. ವಾಜಪೇಯಿ ಲೀಕ್ ಮಾಡಿದರೋ, ಖುರಾನಾ ಲೀಕ್ ಮಾಡಿದರೋ ಗೊತ್ತಿಲ್ಲ. ಅಂತೂ ಲೀಕ್ ಆಯಿತು. ಖುರಾನಾ ಸಾಹೇಬರು ಈ ನೀತಿಗಳನ್ನು ಬಯ್ದು, 'ಮೊಸಳೆ ಕಣ್ಣೀರು' ಹಾಕಿದ್ದರೆ ವಾಜಪೇಯಿ ಸುಮ್ಮನಿರುತ್ತಿದ್ದರೇನೋ. ಖುರಾನಾ ಮುಂದೆ ಹೋಗಿ ಇನ್ನೊಂದು 'ಅಪ್ರಿಯ ಸತ್ಯ'ವನ್ನು ಹೇಳಿದ್ದರು ಪತ್ರದಲ್ಲಿ. ಈ ಎಲ್ಲಾ ನೀತಿಗಳು, ಅದರಲ್ಲೂ ಆಮದು ನೀತಿಯನ್ನು ಅಮೆರಿಕದ ನೇರ ಒತ್ತಡದಿಂದ ಮಾಡಿದ್ದು. ಅದು WTO ಒಪ್ಪಂದದ ಪ್ರಕಾರವೂ ಅಗತ್ಯವಿರಲಿಲ್ಲ. 2003 ವರೆಗೆ ಈ ನಿರ್ಬಂಧಗಳನ್ನು ಉಳಿಸಿಕೊಳ್ಳಬಹುದಾಗಿತ್ತು. ಸಂಚಾರವಾಹಿನಿ [illegible] ಟೆಲಿಕಾಂ ಅಪಾರ್ಟ್‌ಮೆಂಟ್

ಸ್ವಾಮಿ ಆಳುವ ಪಕ್ಷದ ಉಪಾಧ್ಯಕ್ಷರಾದರೂ ಜಾಗತೀಕರಣದ ವಿರುದ್ಧ ಟೀಕೆ ಮಾಡಿ ಬಚಾವಾಗುವಂತಿಲ್ಲ. ಜಾಗತೀಕರಣದ ಮಹಿಮೆ ಹಾಗಿದೆ ಸ್ವಾಮಿ?

ಮತ್ತು ಅಮೆರಿಕನ್ ಕಂಪನಿ IUNET ನಡುವಣ ಒಪ್ಪಂದಕ್ಕೆ ತರಾತುರಿಯಿಂದ ಒಪ್ಪಿಗೆ ನೀಡಿದ್ದು 'ದೇಶದ ಭದ್ರತೆ' ದೃಷ್ಟಿಯಿಂದ ಅವಸರದ ನಿರ್ಣಯ. ಈ ರೀತಿ 'ದೇಶದ ಸಾರ್ವಭೌಮತೆ' ಮತ್ತು 'ಭದ್ರತೆ'ಗೆ ಅಪಾಯವೊಡ್ಡುವ ನೀತಿಗಳು ಎಂದು ಬಿಜೆಪಿಯ ನೀತಿಯನ್ನು ಕರೆದಾಗ, ಅದು ಪಬ್ಲಿಕ್ಕಾದಾಗ ವಾಜಪೇಯಿ ಸುಮ್ಮನಿರುತ್ತಾರೆಯೇ?

ವಾಜಪೇಯಿ, ಅಡ್ವಾಣಿ, ಯಶವಂತ ಸಿನ್ಹಾ ಮೀಟಿಂಗ್ ಮಾಡಿದರಂತೆ. ಖುರಾನಾ ತಮ್ಮ ಮೇರೆ ಮೀರಿದ್ದಾರೆ, ಅವರ ಮೇಲೆ ತಕ್ಷಣ ಕ್ರಮ ಕೈಗೊಳ್ಳಬೇಕೆಂದು ನಿರ್ಧರಿಸಿದರಂತೆ. ವಾಜಪೇಯಿ ಪರವಾಗಿ 'ಅಡ್ವಾಣಿ' ಅಧ್ಯಕ್ಷ ಠಾಕ್ರೆಗೆ ಆಸ್ಪತ್ರೆಗೆ ಹೋಗಿ ಹೇಳಿದರಂತೆ - ಖುರಾನಾಗೆ ಗೇಟ್‌ಪಾಸ್ ಕೊಡಬೇಕು ಅಂತ. ಠಾಕ್ರೆ ಮಣಿದರು. ಆದರೆ ಈಗ ಇದು ಬಿಜೆಪಿಗೆ, ಸರ್ಕಾರಕ್ಕೆ ಬಿಸಿ ತುಪ್ಪವಾಗಿದೆ. ಪ್ರಧಾನಿ ಒತ್ತಡದಿಂದ ಠಾಕ್ರೆ ಹೀಗೆ ಮಾಡಿದರು ಎಂಬ ಪುಕಾರು ಹರಡಿದೆ. ಇದು ಠಾಕ್ರೆಯವರ ಸ್ವ-ವಿವೇಚನೆಯ ನಿರ್ಧಾರ ಎಂದು ಬಿಂಬಿಸಲು ಬಿಜೆಪಿ ನಾಯಕರು ಲಾಗ ಹೊಡೆಯುತ್ತಿದ್ದಾರೆ.

ಖುರಾನಾ ಈ 'ಗೇಟ್‌ಪಾಸ್' ನಂತರವೂ ತಮ್ಮ ಪತ್ರಕ್ಕೆ 'ಪಶ್ಚಾತಾಪ' ವ್ಯಕ್ತಪಡಿಸಿಲ್ಲ. ನಾನೇನು ಪಕ್ಷದ ಶಿಸ್ತು ಉಲ್ಲಂಘಿಸಿಲ್ಲ ಎಂದು ಸವಾಲು ಹಾಕಿದ್ದಾರೆ. ಆರೆಸ್ಸೆಸ್‌ನ ಹಲವು ನಾಯಕರು, ಮುಖ್ಯಸ್ಥ ಸುದರ್ಶನ್ ಇದೇ ನೀತಿಗಳ ಬಗ್ಗೆ ಅದನ್ನೇ ಹೇಳಿದ್ದಾರೆ. ನಾನು ಮಾತ್ರ ಮಾಡಿದ್ದು ಯಾವ ಪಾಪ? ಎಂದು ಮರು ಪ್ರಶ್ನಿಸಿದ್ದಾರೆ.

ಹಾಗಿದ್ದರೆ ಈ ಕಠಿಣ ಕ್ರಮ ಏಕೆ? ಉತ್ತರ ಸ್ಪಷ್ಟ. ಆರೆಸ್ಸೆಸ್ ನಾಯಕರು ಇತ್ಯಾದಿ ಟೀಕಿಸಿದ್ದರು, ಅದು 'ಸಂಘ ಪರಿವಾರ'ದ ನಾಟಕದ ಭಾಗ. ಮಾತ್ರವಲ್ಲ, ಅವರು 'ಅಮೇರಿಕನ್ ಸರ್ಕಾರದ ಒತ್ತಡ'ದ ಮೇಲೆ ಇವೆಲ್ಲಾ ಮಾಡಿದೆ ಎಂದು ವಾಜಪೇಯಿ ಸರ್ಕಾರದ ಚಡ್ಡಿ ಬಿಚ್ಚಿರಲಿಲ್ಲ. ಇದಲ್ಲದೆ ಖುರಾನಾ ಇತರ ಎನ್‌ಡಿಎ ನಾಯಕರ ಜತೆಗೆ 'ದೇಶದ ಸಾರ್ವಭೌಮತೆಗೆ' ಮತ್ತು 'ಭದ್ರತೆ' ಪ್ರಶ್ನೆಯನ್ನು ಪಾರ್ಲಿಮೆಂಟಿನಲ್ಲಿ ಎತ್ತುವವರಿದ್ದಾರೆ ಎಂದು ವಾಜಪೇಯಿಗೆ ಸುದ್ದಿ ಬಂದಿತ್ತಂತೆ. ಆದ್ದರಿಂದ ಈ ಕಠಿಣ ಕ್ರಮ. ಅಲ್ಲದೆ ವಾಜಪೇಯಿ ಸುಮ್ಮನಿದ್ದರೆ ಅವರ ಧಣಿ ಕ್ಲಿಂಟನ್ ಸುಮ್ಮನೆ ಬಿಟ್ಟಾರೆಯೇ? ಇಂತಹ 'ಅವಮಾನಕಾರಿ ಟೀಕೆ'ಯನ್ನು ಸಹಿಸುವ 'ದುರ್ಬಲ ಸಾಮಂತ ಸರ್ಕಾರ'ಕ್ಕೆ ಉಗಿಯುವುದಿಲ್ಲವೇ? ಆದ್ದರಿಂದ ಈ ಕಠಿಣ ಕ್ರಮ.

ಖುರಾನ ಸಹ ಇದರಿಂದ ಪಾಠ ಕಲಿಯಬೇಕು. ಜಾಗತೀಕರಣವನ್ನು ವಿರೋಧಿಸುವುದು ಗಂಭೀರ ವಿಷಯ. ಇದನ್ನು ಪಕ್ಷದ ಅಂತರಿಕ 'ಭಿನ್ನಮತೀಯ ರಾಜಕಾರಣ'ಕ್ಕೆ ಉಪಯೋಗಿಸಲು ಬರುವುದಿಲ್ಲ. ಅದನ್ನು ನಿಜವಾಗಿ ವಿರೋಧಿಸಬೇಕಾದರೆ ಜನಬೆಂಬಲದಿಂದ ಮಾಡಬೇಕು. 'ಅರಮನೆ ರಾಜಕಾರಣ'ದಲ್ಲಿ ಇದನ್ನು ಬಳಸುವುದು ಅಪಾಯಕರ.

ಈಗ 'ಅರಮನೆ ದಂಗೆ' ಅರಮನೆಯೊಳಗೆ ಪರಿಹಾರ ಕಂಡಿದೆ. ಆದರೆ ಅಮೆರಿಕದ ಒತ್ತಡದ ಮೇಲೆ ಈ ನೀತಿಗಳನ್ನು ಅನುಸರಿಸಲಾಗುತ್ತಿದೆ ಎಂಬ ಸತ್ಯ, ಆಳುವ ಪಕ್ಷದ ಅಂತರಿಕ ವಿಚಾರವಲ್ಲ. ಸಾರ್ವಜನಿಕ ಚರ್ಚೆಗೆ ಒಳಪಡಿಸಬೇಕು.

ದೇವದಾಸಿಯರ ಸಂಕಟಗಳು

ಪುಟ 4 ರಿಂದ

ಅಕ್ಷರಜ್ಞಾನ ಪಡೆದರೆ ಸಮಸ್ಯೆ ಪರಿಹಾರವೆನ್ನಲಾಗುತ್ತದೆ. ತಿಳುವಳಿಕೆಯಿಲ್ಲದೇ ಶಾಲೆಗೆ ಮಕ್ಕಳನ್ನು ಕಳುಹಿಸುತ್ತಿಲ್ಲವೆನ್ನಲಾಗುತ್ತದೆ. ಆದರೆ ವಾಸ್ತವದಲ್ಲಿ ಅವರೆಲ್ಲಾ ಮರ್ಯಾದೆಯ ಜೀವನ ನಡೆಸಲು ಎಲ್ಲರಂತೆ ತಮ್ಮ ಮಕ್ಕಳು ಓದಿ ವಿದ್ಯಾವಂತರಾಗಿ ಬುದ್ಧಿವಂತರಾಗಿ ಮುಂದೆ ಬರಲು ತುದಿಗಾಲಲ್ಲಿ ನಿಂತಿದ್ದಾರೆ. ಆದರೆ ಮುಂದೆ ಹೆಜ್ಜೆ ಇಡಲು ಆರ್ಥಿಕ ಬಂಧನ ಬಿಡುತ್ತಿಲ್ಲ ಇದರ ನಿವಾರಣೆಗೆ ಸರ್ಕಾರಗಳ ಹತ್ತಿರ ಒಂದು ವೈಜ್ಞಾನಿಕ ಸಮರ್ಥ ಕಾರ್ಯಕ್ರಮ ಇಲ್ಲದಿರುವುದೇ ಪರಿಸ್ಥಿತಿ ಮುಂದುವರಿಕೆಯ ಹಿಂದಿನ ನಿಜವಾದ ಕಾರಣವಾಗಿದೆ.

ಆದರೆ ಈ ಪರಿಸ್ಥಿತಿಯನ್ನು ಪಕ್ಕದ ಕೇರಳದಲ್ಲಿ ನಾವು ಕಾಣುವುದಿಲ್ಲ. ಅಲ್ಲಿ ಜೀತ ಮತ್ತು ಸಂಬಳದ ಕೆಲಸ ದೇವದಾಸಿ ಪದ್ಧತಿ ಅನಕ್ಷರತೆ ಹೆಚ್ಚು ಕಡಿಮೆ ಇಲ್ಲವೆಂದೇ ಹೇಳಬಹುದು. ಶೇ 95 ರಷ್ಟು ಮನುಷ್ಯನನ್ನು ಮನುಷ್ಯನನ್ನಾಗಿ ಕಾಣದ ಅಸ್ಪೃಶ್ಯತೆಯ ನಿವಾರಣೆಯನ್ನು ಶೇ 100 ರಷ್ಟು ಸಾಕ್ಷರತೆಯನ್ನು ಕಾಣುತ್ತೇವೆ.

ಏನು? ಅಲ್ಲಿನ ಜನತೆ ಸರ್ಕಾರ ರಾತ್ರೋರಾತ್ರಿ ತಪಸ್ಸನ್ನಾಚರಿ ಪುಣ್ಯ ಪಡೆಯಿತೇ ಪವಾಡಮಾಡಿತೇ? ಹೇಗೆ ಸಾಧ್ಯವಾಯಿತು?

ಆದುದಿಷ್ಟೇ....: ಕೇರಳದಲ್ಲಿ ಸಮಾಜಸುಧಾರಣಾ ಚಳುವಳಿಗಳನ್ನು ನಡೆಸಿದರು. ಎಲ್ಲ ರೀತಿಯ ಕಂದಾಚಾರ, ಮೂಢನಂಬಿಕೆಗಳ ವಿರುದ್ಧ ನಿರಂತರವಾದ ಪ್ರಚಾರ ನಡೆಯಿತು. ಅಸ್ಪೃಶ್ಯತೆಯ ಆಚರಣೆಯನ್ನು ವಿರೋಧಿಸಿ ಚಳುವಳಿಗಳನ್ನು ನಡೆಸಲಾಯಿತು. ಆದರೆ ಬಹಳ ಮುಖ್ಯವಾಗಿ ಅಲ್ಲಿನ ಬಡಜನತೆಯ ಆದಾಯವನ್ನು ಹೆಚ್ಚಿಸಲಾಯಿತು ಅದರ ಪರಿಣಾಮವೇ ಈ ಹೊಸ ಫಲಿತಾಂಶವಾಗಿದೆ. ರೈತ ಕೂಲಿಕಾರರ ಸಂಘಟನೆ ಜನ ಪರ ಚಳುವಳಿ, ರಾಜ್ಯ ಸರ್ಕಾರ ಕೈಗೊಂಡ ಜನ ಪರ ಕಾನೂನು ಇದರ ಮೂಲದಲ್ಲಿವೆ.

ಜನತೆಯ ಒತ್ತಾಯದ ಮೇರೆಗೆ ಅಲ್ಲಿನ ಮೊದಲ ಕಮ್ಯುನಿಸ್ಟ್ ಸರ್ಕಾರ ಭೂ ಸುಧಾರಣೆಗೆ ಕಟಿಬದ್ಧವಾಗಿದ್ದು ಜಾರಿಗೆ ತಂದಿದ್ದರಿಂದ ಲಕ್ಷಾಂತರ ಎಕರೆ ಭೂ ಪ್ರದೇಶವು ಬಡ ರೈತ ಕೂಲಿಕಾರರಿಗೆ ದೊರೆತು ರಾಜ್ಯದಾದ್ಯಂತ ಅರ್ಧಕ್ಕಿಂತ ಹೆಚ್ಚಿನ ಕೂಲಿಕಾರರ ಸಂಖ್ಯೆಯನ್ನು ಕಡಿಮೆ ಮಾಡಿತು. ಅದೇ ಸಂದರ್ಭದಲ್ಲಿ ಸಾಗುವಳಿ ನಿರತರ ಸಂಖ್ಯೆಯನ್ನು ದೊಡ್ಡದಾಗಿ ಹೆಚ್ಚಿಸಿತು. ಅದೇ ರೀತಿ ಕಡಿತಗೊಂಡ ಕೂಲಿಗಾರರ ಸಂಖ್ಯೆಯು ಸಂಘಟನೆಯಲ್ಲಿ ಒಗ್ಗೂಡಿ ಮುನ್ನಡೆದುದರಿಂದ, ಕೂಲಿ ಹೆಚ್ಚಳಕ್ಕಾಗಿ ಇತರೇ ಸೌಲಭ್ಯಗಳಿಗಾಗಿ ಹೋರಾಡಿದ್ದರಿಂದ ಈಗ ಅಲ್ಲಿನ ಕೂಲಿ ದಿನವೊಂದಕ್ಕೆ ಸರಾಸರಿ ಗಂಡು ಹೆಣ್ಣು ಸೇರಿ 250 ರೂಪಾಯಿಗಳಷ್ಟು ಮಧ್ಯಾಹ್ನದ ಊಟವನ್ನು ಹೊರತುಪಡಿಸಿ ಪಡೆಯುತ್ತಾರೆ. ಜೊತೆಗೆ ಸಂಘಟನೆ, ಚಳುವಳಿಯಲ್ಲಿ ಭಾಗವಹಿಸಿದ್ದರಿಂದ ಕೇರಳದ ದಲಿತಕೂಲಿಕಾರರು ಪ್ರಜ್ಞಾವಂತರಾದರು.

ಕರ್ನಾಟಕದಲ್ಲಿನಂತೆಯೇ ಅಲ್ಲಿನ ಕೂಲಿಕಾರರು 100 ದಿನಗಳ ಕೂಲಿ ಕೆಲಸ ಹೊಂದಿದ್ದರೂ ಅವರ ಆದಾಯ ವಾರ್ಷಿಕ 25 ಸಾವಿರದಷ್ಟಾಗಲಿದೆ. ಹೀಗಾಗಿ ಅವರ ಮಕ್ಕಳು ಬಾಲಕಾರ್ಮಿಕರಾಗಿ, ಜೀತಗಾರರಾಗಿ ದೇವದಾಸಿಯರಾಗಿ ಬದುಕುವ ಒತ್ತಡ ಉಳಿದಿಲ್ಲ. ಪರಿಣಾಮವಾಗಿ ಅವರೆಲ್ಲಾ ಸಾಕ್ಷರರಾಗಿ, ಸ್ವಾವಲಂಬಿಗಳಾಗಿ ಮುನ್ನಡೆದಿದ್ದಾರೆ.

ಆದ್ದರಿಂದ ನಾವು ಹೆಚ್ಚಿನವರು ನಂಬಿರುವಂತೆ ಈ ಅನಿಷ್ಟ ಪದ್ಧತಿಯು ಮುಂದುವರೆದಿರುವುದು ಕೇವಲ ಅಜ್ಞಾನದಿಂದಾಗಲೀ ಹಣೇಬರಹದಿಂದಾಗಲಿ ಹಿಂದಿನ ಜನ್ಮದಲ್ಲಿ ಮಾಡಿದ ಪಾಪದಿಂದಾಗಲೀ ಅಲ್ಲವೆಂಬುದು ಮತ್ತು ಅದು ಮುಖ್ಯವಾಗಿ ಆದಾಯ ಹೆಚ್ಚಿಸುವ ಕ್ರಮ ಕೈಗೊಂಡಲ್ಲಿ ಅದು ಉಳಿಯಲಾರದೆಂಬುದು ಕೇರಳದ ಅನುಭವದಿಂದ ತಿಳಿದು ಬರುವ ಸಂಗತಿಯಾಗಿದೆ.

ಧರ್ಮ ಸಿದ್ಧಾಂತ ಅಥವಾ ಪುನರ್ಜನ್ಮ ಸಿದ್ಧಾಂತ ಹೇಳುವ ಹಾಗೆ ಮುಂದಿನ ಜನ್ಮ ಇದಕ್ಕೆ ಪರಿಹಾರವಲ್ಲ. ಇದೇ ಜನ್ಮದಲ್ಲಿಯೇ ಆರ್ಥಿಕ ಪರಿಸ್ಥಿತಿ ಸುಧಾರಿಸಿ ಬದಲಾವಣೆ ತರಲು ಸಾಧ್ಯವೆಂಬುದು ಕೇರಳದ ಅನುಭವದಿಂದ ಸಾಬೀತಾಗಿ ಕರ್ಮಸಿದ್ಧಾಂತ ಒಂದು ಪೊಳ್ಳು ವಿಚಾರ ಎಂದು ಮತ್ತೊಮ್ಮೆ ಬಯಲಾಗಿದೆ.

ಹೀಗೆ ಒಂದೆಡೆ ಆದಾಯ ಹೆಚ್ಚಿಸುವ ಕ್ರಮಕೈಗೊಂಡು ಮತ್ತೊಂದೆಡೆ ದೇವದಾಸಿ ಪದ್ಧತಿ ಮುಂದುವರಿಕೆಗೆ ಕಾರಣವಾದ ಪಾಳೆಯಗಾರಿ ತಿಳುವಳಿಕೆಯನ್ನು ವೈಚಾರಿಕ ಸಂಘರ್ಷದ ಮೂಲಕ ಹೊಡೆದೋಡಿಸ ಬಹುದಾಗಿದೆ.

ವಿಶೇಷವಾಗಿ ಕರ್ನಾಟಕದಲ್ಲಿಯೂ ಕೇವಲ ಕಣ್ಣೀರು ಒರೆಸುವ ರೀತಿಯ ದೇವದಾಸಿಯರ ಪುನರ್‌ವಸತಿ ಯೋಜನೆ ಎಂದು ರೂಪಿಸಿ ಅದರಲ್ಲಿ ಹೆಗ್ಗಣಗಳನ್ನು ಬಿಟ್ಟು ಆದಾಯದಲ್ಲಿ ಹೆಚ್ಚಳ ಸಾಧಿಸುವಲ್ಲಿ ಯಶಸ್ವಿಯಾಗಿದ್ದೇವೆಯೇ ಎಂಬುದನ್ನು ಮೌಲ್ಯಮಾಪನ ಮಾಡದೇ ಇದ್ದು ಸರ್ಕಾರ ಕೈತೊಳೆದುಕೊಂಡು ಬಿಟ್ಟಿದೆ. ಮತ್ತೊಂದು ಸಮಾಜದಲ್ಲಿರುವ ರೋಗದ ಮೂಲಕ್ಕೆ ಮದ್ದು ಕೊಡದೇ ನೋವಿನ ಉಪಶಮನಕ್ಕೆದರೆ ಪರಿಹಾರವಾಗದು. ಹೀಗಾಗಿ ಫಲಿತಾಂಶ ಶೂನ್ಯವಾಗಿರದೆ ಏನಾಗಿರಲು ಸಾಧ್ಯ.

ಭೂ ಸಂಬಂಧಗಳ ಬಲಾ ಬಲದಲ್ಲಿ ಬದಲಾವಣೆ ತರಲು ಸರ್ಕಾರ ದೃಢವಾದ ಕ್ರಮ ಕೈಗೊಳ್ಳಬೇಕು. ಭೂ ಸುಧಾರಣೆಗೆ ವಿಶೇಷ ಕ್ರಮ ಪಶ್ಚಿಮ ಬಂಗಾಳ ಕೇರಳ ಸರ್ಕಾರಗಳಂತೆ ವಹಿಸಬೇಕು. ಕೂಲಿಕಾರರಿಗೆ ಪೆನ್ಶನ್ 50 ಸಾವಿರ ರೂಪಾಯಿಗಳ ಭವಿಷ್ಯ ನಿಧಿ ಯೋಜನೆ ಜಾರಿಗೆ ತರಬೇಕು.

ಅದೇ ಸಂದರ್ಭದಲ್ಲಿ ಬಡರೈತರು. ಕೂಲಿಕಾರರು, ದೇವದಾಸಿಯರು ತಮ್ಮ ಹಕ್ಕುಗಳಿಗಾಗಿ ಹೋರಾಡಲು ನೆರವಾಗಬೇಕು.

ಹೀಗೆ ರಾಜ್ಯ ಸರ್ಕಾರ ಹೆಜ್ಜೆ ಇಡದೇ ಹೋದಲ್ಲಿ ಅಥವಾ ಆ ರೀತಿಯ ಹೆಜ್ಜೆ ಇಡುವಂತೆ ಜನ ಚಳುವಳಿಗಳು ಒತ್ತಡ ಹೇರದೇ ಹೋದಲ್ಲಿ ಸಾಮಾಜಿಕ ಸುಧಾರಣೆ ಕೇವಲ ಮರೀಚಿಕೆಯಾಗಲಿದೆ.

ಬಡ ರೈತಳಾಗಿ, ಕೂಲಿಕಾರಳಾಗಿ, ಕಟ್ಟಕಡೆಯ ಜಾತಿಯವಳಾಗಿ, ಅಸ್ಪೃಶ್ಯಳಾಗಿ ಹಾಗೂ ಮಹಿಳೆಯಾಗಿ ಅದರಲ್ಲೂ ದೇವದಾಸಿಯಾದ ಮಹಿಳೆ ಪ್ರತ್ಯೇಕವಾಗಿ ಸಂಘಟಿತರಾಗಿ ಭೂಮಾಲಿಕ ಬಂಡವಾಳಶಾಹಿ ಸಮಾಜದ ವಿರುದ್ಧ, ಸಮಾಜಿಕ ಅಸಮಾನತೆಯ ವಿರುದ್ಧ ಪುರುಷ ಪ್ರಧಾನತೆಯ ವಿರುದ್ಧ ಆರ್ಥಿಕ ಭದ್ರತೆಗಾಗಿ ಸಮಗ್ರ ಭೂ ಸುಧಾರಣೆಗಾಗಿ ಕೂಲಿಕಾರರ ಸಮಗ್ರ ಕಾನೂನಿಗಾಗಿ ಕೂಲಿ ಹೆಚ್ಚಳಕ್ಕಾಗಿ ಎಲ್ಲ ದುಡಿಯುವ ಜನತೆಯೊಡನೆ ಸೇರಿ ಹೋರಾಡದೇ ವಿಮೋಚನೆ ಸಾಧ್ಯವಿಲ್ಲವೆಂಬುದನ್ನು ಅರಿತು ಸೇರುವುದೊಂದೇ ದಾರಿಯಾಗಿದೆ.

○

ನಿರುದ್ಯೋಗ........ ಪೆಡಂಭೂತ.....

ಪುಟ 7 ರಿಂದ

ಐಎಂಎಫ್, ವಿಶ್ವಬ್ಯಾಂಕಗಳು ಸರ್ಕಾರದ ಗಾತ್ರ ಕಿರಿದುಗೊಳಿಸಬೇಕೆಂದು, ಕನಿಷ್ಟ ಶೇ 35 ರಷ್ಟು ಹುದ್ದೆಗಳನ್ನು ರದ್ದುಗೊಳಿಸಿ, ಕಡಿತ ಮಾಡಬೇಕೆಂದು ಒತ್ತಾಯಿಸಿದೆ. ಕೇಂದ್ರ ವಾಜಪೇಯಿ ಸರ್ಕಾರ ವರ್ಷಕ್ಕೆ ಒಂದು ಕೋಟಿ ಉದ್ಯೋಗ ನೀಡುವ ಭರವಸೆ ನೀಡಿ ಅಧಿಕಾರಕ್ಕೆ ಬಂದಿದ್ದು, ಅದರ ಮಾತೇ ಇಲ್ಲವಾಗಿದೆ.

ರಾಜ್ಯದ ಕೃಷ್ಣರವರ ಸರ್ಕಾರವೂ ಉದ್ಯೋಗ ಕಡಿತಕ್ಕೆ ಮುಂದಾಗಿದೆ. ಹೀಗಾಗಿ ಕರ್ನಾಟಕದಲ್ಲಿ ಖಾಲಿ ಇರುವ 1 ಲಕ್ಷ 5 ಸಾವಿರ ಹುದ್ದೆಗಳಲ್ಲಿ ಈ 35,000 ಹುದ್ದೆಗಳು ನಿರ್ಮೂಲವಾಗಲಿವೆ. ಇದು ಹಂತಹಂತವಾಗಿ ಇನ್ನೂ ಹೆಚ್ಚಲಿದೆ.

ಈಗ ಖಾಯಂ ಕೆಲಸ, ನೇಮಕಾತಿ ಇಲ್ಲವಾಗಿ, ಕಂಟ್ರಾಕ್ಟ್ ಪದ್ಧತಿಯು ಜಾರಿಗೆ ಬರತೊಡಗಿದೆ. ಅಂತರ್‌ರಾಷ್ಟ್ರೀಯವಾಗಿ, ಬಳಕೆಯಲ್ಲಿರುವ Hire & Fire (ಬಳಸಿ- ಬಿಸಾಡು) ನೀತಿಯಂತೆ ಕೆಲಸಕ್ಕೆ ಬಳಸಿ, ನಂತರ ಹೊರದೂಡುವ ಪದ್ಧತಿ ಜಾರಿಯಾಗುತ್ತಿದೆ. ಕಾರ್ಮಿಕ ಕಾನೂನುಗಳು ನಾಮಕಾವಸ್ಥೆಯಾಗುತ್ತಿವೆ ಮತ್ತು ಮಾಲೀಕರ ಬಹುರಾಷ್ಟ್ರೀಯ ಕಂಪನಿಗಳ ಹಿತಾಸಕ್ತಿಗೆ ಅನುಗುಣವಾಗಿ ತಿದ್ದುಪಡಿಯಾಗುತ್ತಿವೆ. ಸ್ವಯಂ ಉದ್ಯೋಗದಂತಹ ನಿರುದ್ಯೋಗ ನಿವಾರಣಾ ಯೋಜನೆಗಳು ಕೇವಲ ಪ್ರಹಸನವಾಗುತ್ತಿವೆ.

ಆದ್ದರಿಂದ ಇಂತಹ ಅಸಮಾನತೆ, ಸುಲಿಗೆಕೋರ ಸಮಾಜದ ವ್ಯವಸ್ಥೆ ವಿರುದ್ಧ ಬದಲಾವಣೆಗಾಗಿ ಹೋರಾಡಬೇಕಿದೆ. ಕೆಲಸದ ಹಕ್ಕು, ಶಿಕ್ಷಣದ ಹಕ್ಕು ಮೂಲಭೂತ ಹಕ್ಕಾಗಬೇಕು. ಈಗ ಹೇರಲಾಗುತ್ತಿರುವ ಆರ್ಥಿಕ ನೀತಿಗಳನ್ನು ಕೈಬಿಡಬೇಕು. ಆಂತರಿಕ ಮಾರುಕಟ್ಟೆ ವಿಸ್ತರಿಸುವ, ಕೃಷಿ ಆಧಾರಿತ ಕೈಗಾರಿಕೆಗಳು ಬೆಳೆದು ಬರಲು, ಸಮಗ್ರ, ಪ್ರಗತಿಪರ ಭೂ ಸುಧಾರಣೆ-ಭೂಹಂಚಿಕೆ ಜಾರಿಯಾಗಬೇಕು. ಸಾರ್ವಜನಿಕವಲಯದ ಉದ್ದಿಮೆಗಳ ರಕ್ಷಣೆ-ಬೆಳವಣಿಗೆಗೆ ಆದ್ಯತೆ, ಅನಗತ್ಯ ಆಮದಿಗೆ ತಡೆ ಹಾಗೂ ಅಗತ್ಯ ಕ್ಷೇತ್ರಗಳಲ್ಲಿ ಮಾತ್ರ ವಿದೇಶಿ ಬಂಡವಾಳ-ತಂತ್ರಜ್ಞಾನ ಬಳಸುವುದು. ಸ್ಥಳೀಯ ಸಂಪನ್ಮೂಲ ಬಳಸಿ, ಕೈಗಾರಿಕೆ ಬೆಳೆಸುವುದು. ರೈತರಿಗೆ ಬೆಳೆಗೆ ಸೂಕ್ತ ಸಾಲ-ಸೌಲಭ್ಯ, ಬೆಳೆಗೆ ಬೆಂಬಲಿತ ಬೆಲೆ ನಿಗದಿ, ಕೃಷಿಕೂಲಿಕಾರರು, ಕಾರ್ಮಿಕರಿಗೆ ಕನಿಷ್ಟ ಕೂಲಿ ಇಂತಹ ಅತ್ಯಗತ್ಯ ಕ್ರಮಗಳು ಬೇಕು.

ಖಾಲಿ ಇರುವ ಹುದ್ದೆಗಳಿಗೆ ಕೂಡಲೇ ನೇಮಕಾತಿ, ಅರ್ಜಿಶುಲ್ಕಗಳ ವಸೂಲಾತಿ ರದ್ದತಿ, ಉದ್ಯೋಗ ವಿನಿಮಯ ಕೇಂದ್ರಗಳ ಹೆಚ್ಚಳ, ಸ್ವಯಂ ಉದ್ಯೋಗಕ್ಕೆ ಸೂಕ್ತ ಸಹಾಯ. ಉದ್ಯೋಗ ನೇಮಕಾತಿಯಲ್ಲಿ ಪಾರದರ್ಶಕತೆ, ಭ್ರಷ್ಟಾಚಾರಕ್ಕೆ ತಡೆ, ಗ್ರಾಮೀಣ ಉದ್ಯೋಗ ಸೃಷ್ಟಿ ಕ್ರಮ ಇವು ತಕ್ಷಣದಲ್ಲಿ ಕೈಗೆತ್ತಿಕೊಳ್ಳಬೇಕು.

ಒಟ್ಟಾರೆ ಈ ನಿರುದ್ಯೋಗದ ಸಮಸ್ಯೆ ವಿರುದ್ಧ ಎಲ್ಲಾ ನಿರುದ್ಯೋಗಿಗಳು, ಯುವಜನರೂ ಒಂದಾಗಬೇಕು. ಮಾತ್ರವಲ್ಲದೇ ಕಾರ್ಮಿಕ ವರ್ಗ ಹಾಗೂ ದುಡಿಯುವ ಎಲ್ಲಾ ಜನವಿಭಾಗಗಳೂ ಸಹ ಸೂಕ್ತ ಗಮನಹರಿಸಬೇಕು. ಚಳುವಳಿ ರೂಪಿಸಬೇಕಿದೆ.

○

ಗಿಡುಗವನ್ನು ಅಟ್ಟಿದ ಗುಬ್ಬಚ್ಚಿಗಳು

ಪುಟ 9 ರಿಂದ

ತೋರಿಸಿತು. ವಿಯೆಟ್ನಾಮಿನ ಜನತೆಯನ್ನು ಸೋಲಿಸಲು ಅಮೆರಿಕದ ಆಳುವವರ್ಗ ತನ್ನ ಬತ್ತಳಿಕೆಯಲ್ಲಿದ್ದ ಎಲ್ಲಾ ಬಾಣಗಳನ್ನು ಪ್ರಯೋಗಿಸಿತು. ಎಲ್ಲಿಲ್ಲದ ಎಂದೂ ಇಲ್ಲದ ನರಮೇಧ, ಅತ್ಯಾಚಾರ ನಡೆಸಿತು. ಇಡಿ ದೇಶವನ್ನು ಸ್ಮಶಾನಸದೃಶವಾಗಿಸಿತು. ಅಮೆರಿಕ ಇಂತಹ ಅಗಾಧ ಯುದ್ಧ- ಅಪರಾಧಗಳಿಗೆ ಒಂದೇ ಸೆಂಟು (ಪೈಸೆ)ಇಲ್ಲಿಯವರೆಗೂ ಪರಿಹಾರ ನೀಡಿಲ್ಲ. ಐದು ವರ್ಷದ ಹಿಂದಿನವರೆಗೆ ವಿಯೆಟ್ನಾಮ್ ಜತೆ ಸಾಮಾನ್ಯ ರಾಜತಾಂತ್ರಿಕ-ಆರ್ಥಿಕ ಸಂಬಂಧವನ್ನು ಇರಿಸಿಕೊಂಡಿಲ್ಲ. ಇಂದಿಗೂ ಈ ಯುದ್ಧದ ಭಯಾನಕ ಪರಿಣಾಮಗಳು ಇನ್ನೂ ಮುಂದುವರೆದಿವೆ. ವಿಯೆಟ್ನಾಮ್ ತುಂಬಾ ಈಗಲೂ 'ಮೈನ್ ಬಾಂಬ್'ಗಳು ಸಿಡಿಯುತ್ತಿರುತ್ತವೆ. ಸಾವಿರಾರು ಜನರನ್ನು ಬಲಿ ತೆಗೆದುಕೊಳ್ಳುತ್ತವೆ. ಅಮೆರಿಕ ಹಾಕಿದ ರಾಸಾಯನಿಕ, ಜೈವಿಕ ಬಾಂಬ್‌ಗಳ ದೂರಗಾಮಿ ಪರಿಣಾಮ ಈಗಲೂ ವಿಯೆಟ್ನಾಮಿನ ಜನರಲ್ಲಿ, ನವಜಾತ ಶಿಶುಗಳಲ್ಲಿ ವಿಚಿತ್ರ ರೋಗಗಳು, ನೆಲದ ಫಲವತ್ತತೆ ಮೇಲೆ ದುಷ್ಪರಿಣಾಮ ಬೀರಿವೆ. ಸಾಮ್ರಾಜ್ಯಶಾಹಿಯ ಈ ಅಪರಾಧಗಳನ್ನು ಜಗತ್ತು ಮರೆಯಬಾರದು.

ವಿಯೆಟ್ನಾಮ್ ಕಳೆದ 25 ವರ್ಷಗಳಲ್ಲಿ ವಿಮೋಚನಾ ಯುದ್ಧದಂತೆ, ಶಾಂತಿಕಾಲದಲ್ಲೂ ಅಭಿವೃದ್ಧಿಯ ಯುದ್ಧದಲ್ಲಿ ದಾಪುಗಾಲಿರಿಸಿದೆ. ಯಾವುದೇ ಅಮೆರಿಕನ್, ಅಂತರ್‌ರಾಷ್ಟ್ರೀಯ ನೆರವು ಇಲ್ಲದೆ ಪುನರ್‌ರಚನೆಯಲ್ಲಿ ತೊಡಗಿದೆ. ಅಮೆರಿಕನ್ ಸಾಮ್ರಾಜ್ಯಶಾಹಿ ವಿಯೆಟ್ನಾಮ್‌ಗೆ ಮೂರು ದಶಕಗಳ ಕುಕಾಲದ ಬೆಳವಣಿಗೆಯ ಫಲ ವಂಚಿಸಿದರೂ, ತನ್ನ ಅಭಿವೃದ್ಧಿ ಪಥದಲ್ಲಿ ಮುಂದುವರೆಯುತ್ತಿದೆ.

ಇಂದು 'ನೀನೇ ಚಕ್ರಾಧಿಪತಿ', 'ನನ್ನನ್ನು ಬಿಟ್ಟರೆ ಇಲ್ಲ' ಎಂದು ಬೀಗುತ್ತಿರುವ ಅಮೆರಿಕದ ಸೊಕ್ಕಿನ ವಿರುದ್ಧ ವಿಶ್ವವ್ಯಾಪಿ ಸಾಮ್ರಾಜ್ಯಶಾಹಿ-ವಿರೋಧಿ ಹೋರಾಟದಲ್ಲಿ ವಿಯೆಟ್ನಾಮ್ ನಮ್ಮೆಲ್ಲರಿಗೂ ಸ್ಫೂರ್ತಿಯಾಗಬೇಕು.

ಬಾಬಯ್ಯನ ಜಾತ್ರೆ

ಪುಟ 12 ರಿಂದ

ಆರಂಭವಾದ ಐದು ದಿವಸಕ್ಕೆ ಲಾಡಿಹಾಕಿಸಿಕೊಳ್ಳುವ ಹರಕೆ. ಕೆಂಪು ದಾರಕ್ಕೆ ಅರಿಶಿನ ಬಣ್ಣದ ಕುಚ್ಚು ಬಿಟ್ಟಿರುತ್ತಿದ್ದ ಈ ಲಾಡಿಯನ್ನು ಊರಿನಲ್ಲಿ ಎಲ್ಲ ಮನೆಯವರೂ ಹಾಕಿಸಿಕೊಳ್ಳುತ್ತಿದ್ದರು. ಲಾಡಿ ಹಾಕಿಸಿ ಕೊಂಡವರು ಹಂದಿಮಾಂಸ ತಿನ್ನುವಂತಿರಲಿಲ್ಲ. ಏಳನೆಯ ದಿನ ಕಟ್ಟಿದ್ದ ಲಾಡಿಬಿಚ್ಚಿ ನೀರಿಗೆ ಎಸೆಯುವುದರೊಂದಿಗೆ ಹರಕೆ ಮುಗಿಯುತ್ತಿತ್ತು. ಹೊತ್ತಿನಂತೆಯೆ ಜಲ್ದಿಗೆ ಹೊರಡಲು ಎಲ್ಲ ದೇವರುಗಳನ್ನೂ ಹೊತ್ತು ನಡೆಯಬೇಕು. ಹೊರಡುವ ಮುಂಚೆ ಅಲಾವಿ ಹತ್ತಿರದ ದೇವಸ್ಥಾನಕ್ಕೆ ಅಭಿಮುಖವಾಗಿ ಎಲ್ಲ ದೇವರುಗಳನ್ನು ನಿಲ್ಲಿಸಿದ ನಂತರ ದೊಡ್ಡಪೂಜಾರಪ್ಪ (ಮುಸ್ಲಿಂ ಕುಟುಂಬದ ಯಜಮಾನ) ಕಣ್ಣೀರು ಸುರಿಸುತ್ತಾ ಮಂತ್ರ ಜಪಿಸುತ್ತಾ ನಿಲ್ಲುತ್ತಿದ್ದ. ಇವರೊಂದಿಗೆ ತಾಂಡದ ದೊಡ್ಡರಂಜ್ಯಾ ನಾಯ್ಕ ಕೂಡ ಅಳುತ್ತಾ ನಿಲ್ಲುತ್ತಿದ್ದ. ಏಳುದಿವಸಗಳ ಕಾಲ ಎಲ್ಲ ಜಾತಿಯ ಜನರೂ ಒಗ್ಗೂಡಿ ನಡೆಸಿದ್ದ ಬಾಬಯ್ಯನ ಜಾತ್ರೆಯ ಕೊನೆಯ ಘಟ್ಟ ಅದು. ಆದುದರಿಂದಾಗಿ ಅವರು ದುಃಖಿಗೊಂಡವರಂತೆ ಕಾಣುತ್ತಿದ್ದರು. ಇದನ್ನು ನೋಡುತ್ತಿದ್ದ ಇಡೀ ಜನ ಮೌನವಾಗಿ ನಿಂತಿರುತ್ತಿತ್ತು. ಪೂಜೆಯ ನಂತರ ದೇವರನ್ನು ಹೊತ್ತು ಹಳ್ಳದ ಕಡೆ ನಡೆಯುತ್ತಿದ್ದರು. ಇದರ ನಂತರ ಸಂಜೆ ಐದು ಗಂಟೆಗೆ 'ಉಂಡೆ ಉರುಳುವುದು' ನಡೆಯುತ್ತಿತ್ತು. ಮುಚ್ಚಿದ ಅಲಾವಿಯ ಸುತ್ತ ಮೂರುಸುತ್ತು ದಿಂಡುರುಳಿ ಹರಕೆ ತೀರಿಸಿಕೊಳ್ಳುವುದನ್ನು ಉಂಡೆ ಉರುಳುವುದು ಎಂದು ಕರೆಯುವುದು ವಾಡಿಕೆ.

ನಂತರ 'ಹಲ್ ಬಿದಾಯೋ, ಹಲ್‌ಬಿದಾಯೋ' ಎಂದು ಹಾಡುತ್ತಾ ಬಂದು ಬಾಬಯ್ಯನ ದೇವರುಗಳನ್ನು ಬಿಚ್ಚಿ ಕೆಂಪುಬಟ್ಟೆಯಲ್ಲಿ ಕಟ್ಟಿ ಪೆಟ್ಟಿಗೆಯಲ್ಲಿಟ್ಟು ಚಾವಡಿಯ ಮೂಲೆಗೆ ಕಟ್ಟುತ್ತಿದ್ದರು. ಪಕ್ಷಿಗಳೆಲ್ಲ ಗೂಡಿಗೆ ಮರಳುವಂತೆ ಮನೆಗಳಿಗೆ ಹಿಂದಿರುಗುತ್ತಿದ್ದರು. ಅಲ್ಲಿಗೆ ಏಳುದಿವಸ ನಡೆದ ಬಾಬಯ್ಯನ ಜಾತ್ರೆ ಈ ವಿದಾಯ ಗೀತೆಯೊಂದಿಗೆ ಮುಕ್ತಾಯವಾಗುತ್ತಿತ್ತು.

ತಮಂಧದ ಕೇಡು

ಪುಟ 11 ರಿಂದ

ಮೆಲ್ಲಗೇ.. ಹಿಡುವಿಗ! ಅಂತ ಶಾಂತಗೌಡ ಗದರಿಸಿದ. ಅವನು ಕಲ್ಲುಬಂಡೆ ಕೊರಕಲಲ್ಲಿ ಸಾಗಿಬಿಟ್ಟಿದ್ದ. ದಾರಿ ಹಿಡಿದಿದ್ದನೋ ಅವನಿಗೆ ಗೊತ್ತಿದ್ದಿಲ್ಲ. ಪಡುವಣದಾಗ ಕರಿ ಮೋಡಗಳಿಗೆ ಸೂರಿಯನ ಕೆಂಪು ಬಣ್ಣ ತಗಲಿ ಅವು ಕೆಂಡ ಕೆಂಡವಾಗಿ ವಿಕಾರವಾಗಿ ಕಂತಿದ್ದವು. ದುರುಗ ಬುಳುಬುಳು ಅಂತಿದ್ದ ತುಂಗಮ್ಮನ ಮೈಮ್ಯಾಗ ಹೊಂಟಿದ್ದರೂ ಅವನ ಖ್ಯಾಲೀ ಬ್ಯಾರೆ ಕಡೆಗಿತ್ತು. ಶಾಂತಗೌಡ ಅದಕಂಡು ಧಿಗಿಲುಗೊಂಡ. ಗಟ್ಟಿಯಾಗಿ 'ಲೇ ದುರ್‍ಗ್ಯಾ, ಮೆಲ್ಲಕ್ಕ ನಡಿಲೇ...' ಅಂದು ಗಟ್ಟಿಯಾಗಿ ಅವನ ತಲೆ ಹಿಡಕಂಡ ಹೊತ್ತುಮತ್ತ ನೋಡಕ ಆಗ್ಲಿಲ್ಲ. ಬಿದ್ದೆನಂತ ಎದೆ ನಡುಗಿತು. ದಿಗಿಲು ಕಂಡ ದುರುಗ ಏನಂದರೂ ಮಾತಾಡಲಿಲ್ಲ. ವಾಪಾಸು ತಿರುಗಲೇ ಅಂತ ಕೂಗಿಕೊಂಡ, ದುರುಗ ಮಾತ್ರ ಮುಂದಕ ಹೆಜ್ಜೆ ತುಳಿತಿದ್ದ. ಅವನಿಗೆ ತುಂಗಮ್ಮ ಕೆಂಪಗ ಕಂಡಳು. ಯಾಕಂತ ಸಲುವೊತ್ತು. ನಿಂತು ನೋಡಿದ. ಸೂರಿಯ ಮುಣುಗುವಲ್ಲಿ ಕೆಂಪನಮೋಡಗಳು ರಕುತದಾಗ ಅದ್ದಿಟ್ಟಂಗ ! ಅದು ಸಮುದ್ರ ಕಂಡಂಗಾಯ್ತು! ಸಮುದ್ರದಾಗ ಜ್ವಾಲಾಮುಖಿ ಸಿಡಿದಂಗ ಚಿತ್ರ ಕಂಡಿತು. ದುರುಗ ನಿಂತುಗಂಡಾಗ ವಾಪಾಸು ತಿರುಗತಾನಂತ ಅನಕಂಡಿದ್ದ ಶಾಂತಗೌಡ. ಅದ್ರೆ ದುರುಗ ಬಡಕ್ಕನೆ ಕೊರಕಲಾಗ ಇಳದು ದಾಪುಗಾಲು ಹಾಕಿದ. ನೀರು ಶಾಂತಗೌಡನ ಕಾಲಿಗೆ ಬಡುದವು. ಶಾಂತಗೌಡುಗ ಕಣ್ಣಿಗೆ ಕತ್ತಲು ಗವುದಂಗಾಯ್ತು. 'ನಿಂತ್ಗಳಲೇ' ಅಂದು ಕಾಲು

ಜಾಡಿಸಿದ. ದುರುಗನಿಗೆ ಜೋಲಿ ಹೋತ್ತಿತ್ತೋ ಗಟ್ಟಿಗಿ ನಿಂತ್ಗಂಡ. 'ನನ್ನ ಎದ್ದಾಗ ಇನ್ನೂ ಜೀವ ಐತಪ್ಪೋ ಅಂದ ಅವನು ಶಾಂತಗೌಡನ ತೊಡೆಗಳನ್ನು ಗಟ್ಟಿಯಾಗಿ ಹಿಡಕಂಡು ಹೆಜ್ಜೆಕಿತ್ತಿದ. ಅವರ ತಲಿಮ್ಯಾಗ ಎಂಥ ಎಂಥವೋ ಪಕ್ಷಿಗಳು ಒದರುತ್ತ ತಲಿಗೆ ಬಡಿಯಲು ಬಂದವು. ಶಾಂತಗೌಡ ತಡಿಲಾರದೆ ದುರುಗನ ತಲೆಗೆ ಜಜ್ಜ ತೊಡಗಿದ. ಜಾಡಿಸಿ ಬಡೆಯಲು ನೋಡಿದ. ದುರುಗನಿಗೆ ನಾಗಮ್ಮ ನೆನಪಿಗೆ ಬಂದಳು! ಏನೇನೋ ಹೇಳಿದಂಗ ಕೇಳಿಸಿದವು! ಅವನಿಗೆ ಯಾವುದರ ಅರಿವಿಲ್ಲದಂಗ, ಹೆಜ್ಜೆ ಕಿತ್ತಿ ಕಿತ್ತಿ ಇಡುತ್ತಿದ್ದ. ದಾರಿ ತಪ್ಪಿತು! ಒಮ್ಮೆಲೇ ನೀರು ಎದೆಗೆ ಬಂದವು. 'ದುರುಗಾ..' ಅಂತ ಅಬ್ಬರಿಸಿದ. ಶಾಂತಗೌಡನ ಕೂಗು ತುಂಗಮ್ಮನ

ದುರುಗನ ತಲೆ ಹಿಡಕಂಡು ಜಜ್ಜಿದ! ದುರುಗನ ಹೆಜ್ಜೆ ತಪ್ಪಿತೋ ಅವನು ಮುಗ್ಗರಿಸಿ ನೀರಿಗೆ ಬಿದ್ದುಬುಟ್ಟ! ಶಾಂತಗೌಡ ಮ್ಯಾಲಿಂದ ತತ್ತರಿಸಿ ದಪ್ಪಂತ ನೀರಿಗೆ ಬಿದ್ದನೋ... 'ದುರುಗಾ'.. ಅಂತ ಒದರಿದ... 'ಯಪ್ಪೋ' ... ಅಂತ ಇವನು ಅಂದ, ಒಬ್ಬರದು ಇನ್ನೊಬ್ಬರಿಗೆ ಕೇಳಿಸಲಿಲ್ಲ. ಅವರು ಒಬ್ಬರಿಗೊಬ್ಬರು ತಗುಲಲಿಲ್ಲ..

ಬರೀ ನೀರಿನ ಸಪ್ಪಳ...! ಕೈಕಾಲು ಬಡದಂಗ... ಸಪ್ಪಳ!

ತುಂಗಮ್ಮ ಬುಳು ಬುಳು ಅಂತ ಹರಿತಿದ್ದಳೋ...

ಆ ಮ್ಯಾಲೆ ಅದೇ ಸಪ್ಪಳ... ಆ ತುಂಗಮ್ಮನ ಉಡ್ಯಾಗ... ಸಲುವೊತ್ತು ಅದೇ ಅದೇ ಸಪ್ಪಳ!

(ಮುಗಿಯಿತು)

ಕಥೆ

ತಮಂಧದ ಕೇಡು

ಅಮರೇಶ ನುಗಡೋಣಿ

ದುರುಗ ಶಾಂತಗೌಡ ಧಣಿಯ ಜೀತದಾಳು. ಧಣಿ ತನ್ನ ಹೆಂಡತಿಯ ಮೇಲೆಯೇ ಕಣ್ಣುಹಾಕಿದರೂ ನುಂಗಿಕೊಂಡಿರಬೇಕಾಯಿತು. ಮುಂದೆ ಮಗ ಚೆನ್ನ ವಿದ್ಯಾವಂತನಾದ ಕಾಲೇಜಿನ ಉಪನ್ಯಾಸಕನಾದ. ಚೆನ್ನನಿಗೂ ಅವನ ವಿದ್ಯಾರ್ಥಿನಿಯಾದ ಶಾಂತಗೌಡನ ಮಗಳಿಗೂ ಪ್ರೇಮ ಬೆಳೆಯುತ್ತದೆ..... ಮುಂದೆ ಓದಿ

ತುಂಗಮ್ಮ ಇಲ್ಲಿ ವಿಚಿತ್ರ ರೂಪ ಪಡಕಂಡಿದ್ದಳು. ಒಂದೂವರೆ ಮೈಲು ಅಗಲ ಚಾಚಿ ಮಲಗಿದ್ದಳು; ಅದರಾಗ ಬರಿ ಮೈತುಂಬ ಗುಂಡು ಬಂಡೆಕಲ್ಲು ಕೊರಕಲು ತುಂಬಿಕೊಂಡ, ತುಂಗಮ್ಮನ ಅವತಾರ ಈ ಪರಿ ಇರದ್ರಿಂದ ಸೇತುವೆ ಅನ್ನೋದು ಆಗಿರಲಿಲ್ಲ. ಕರೆಂಟು ಬಂದಿರಲಿಲ್ಲ. ಈ ತುಂಗಮ್ಮನಿಗೆ ಏಳು ಹರದಾರಿ ಕೆಳಗೆ ಸೇತುವೆಯಿತ್ತು. ಹಿಂಗಾಗಿ ಇಲ್ಲಿ ಮನುಷ್ಯರು ಹಾದು ಹೋಗುವಂಗಿದ್ದಿಲ್ಲ. ಅದ್ಕ ಆ ಕಡೆ ಊರಿನವರಿಗೆ, ಈ ಕಡೆ ಊರಿನವರಿಗೆ ಕೊಡದು ತಗಳ್ಳದು ಅಂಬೋ ಕಳ್ಳುಬಳ್ಳಿ ಸಂಬಂಧ ಬೆಳಿದಿದ್ದಿಲ್ಲ. ಆ ಕಡೆ ಊರಿನವ್ರಿಗೆ ರಾಯಚೂರು ವ್ಯವಹಾರದ ಊರಾದರೆ, ತುಂಗಮ್ಮನ ಈ ಕಡೆ ಊರಿನವ್ರಿಗೆ ಕಲಬುರ್ಗಿ ವ್ಯವಹಾರದ ಊರು. ಶಾಂತಗೌಡನ ಅಕ್ಕ ರುದ್ರಮ್ಮನ ಅದೆಂದೋ ಆ ಕಡೆ ಊರಿಗೆ ಕೊಟ್ಟಿದ್ದರು. ಆಕೆ ಮದಿವೆಯಾದ ವರ್ಷ ಬರಬಿದ್ದಿತ್ತು. ಮಳೆ ಅಂಬೋದೇ ಇರಲಿಲ್ಲ. ತುಂಗಮ್ಮ ಬರಿ ಮೈಯಿಲೆ ಮಲಗಿದ್ದಳು. ಊರುಕೇರಿ ಮಂದಿ ಹೋಗಿ ಮದಿವಿ ಮುಗಿಸಿ ಬಂದವ್ರುರು ಮತ್ತೆ ಆ ಕಡೆ ಕಾಲಿಟ್ಟಿರಲಿಲ್ಲ. ರುದ್ರಮ್ಮ ಒಮ್ಮೆ ಆಕಡೆ ಹೋದಾಕಿ ಇವತ್ತಿಗೂ ತವ್ರು ಮನೆ ನೋಡಿದ್ದಿಲ್ಲ. ಈ ಸುತ್ತಿಗೆ ದುರುಗ ಒಬ್ಬ ತುಂಗಮ್ಮನ ಮಗನಾಗಿ ಆ ಕಡೆ ಹೋಗಿದ್ದ ಬರ್ತಿದ್ದ, ಅದೂ ಶಾಂತಗೋಡನ್ನ ಹೆಗಲಮ್ಯಾಲೆ ಹೊತಗಂಡು. ಈಗೀಗ ಆ ಊರಾಗೊಬ್ಬ ರುದ್ರಮ್ಮನ ಜೀತದಾಳು ಮಾನಿಷಯ್ಯ ಶಾಂತಗೌಡುಗ ಸುದ್ದಿ ಮುಟ್ಟಿಸಾಕ ಕಲಿತಿದ್ದ. ಅದು ದುರುಗ ದಾರಿ ತೋರಿಸಿ ಕಲಿಸಿದ್ದ. ಇವರಿಬ್ಬರು ಅದೇನು ದಾಟಿದರೂ ಬ್ಯಾಸಿಗ್ಯಾಗ ಮಾತ್ರ ಹೋಗುತ್ತಿದ್ದರು.

ಯಾಕೋ ಶಾಂತಗೌಡ ಇವತ್ತು ವಜ್ಜ ಅನಿಸಿದ!

ಬರುತ್ತಿದ್ದರು. ಆ ಕಲ್ಲು, ಬಂಡೆ, ಗಿಡಗಂಟೆ, ಕೊರಕಲಾಗ ಅಪ್ಪಿತಪ್ಪಿ ದನಕರುಗಳೂ ಹೋಗುತ್ತಿರಲಿಲ್ಲ. 'ನಾನು ದುರುಗನಂಗ ಇದ್ದಿದ್ರ ಯಾರ ಹಂಗೂ ಇಲ್ಲದಂಗ ಅಕ್ಕನೂರಿಗೆ ಹೋಗುತ್ತಿದ್ದೆ' ಅನಕಂಡ. ಈ ಮಾತು ಶಾಂತಗೌಡುಗ ಇವತ್ತು. ಮಾತ್ರ ಬಂದಿತ್ತು. ಶಾಂತಗೌಡ ತುಂಗಮ್ಮನ ದಂಡೆಮ್ಯಾಗ ನಿಂತು ಸುಮ್ಮನೆ ಕಣ್ಣಾಡಿಸಿದ. ದುರುಗನೂ ಸುಮ್ಮನೆ ನಿಂತುಕೊಂಡಿದ್ದ. ಇಂಥ ಗಳಿಗೆ ಅವರ ಜೀವನದಾಗ ಎಂದೂ ಬಂದಿದ್ದಿಲ್ಲ. ಬರತದಂತ ಕೂಡ ಕನಸು ಕಂಡಿದ್ದಿಲ್ಲ.

'ದುರುಗಾ' ಅಂದ ಶಾಂತಗೌಡ.

ಆ ಪುಣ್ಯದ ಕರೆಗೆ 'ಯಪ್ಪಾ' ಅಂದ ದುರುಗ.

'ತುಂಗಮ್ಮನ ನೀರು ಬಂದಿದ್ದಂಗಾವಲ್ಲ...?'

ದುರುಗ ತುಂಗಮ್ಮನ ನೋಡಿದ. ದುಮದರಿಯಿಂದ ಚೆಂದಾಗಿ ಯಾವುದು ಕಾಣ್ತಿದ್ದಿಲ್ಲ. ಕಿವಿಗೊಟ್ಟು ಕೇಳಿ 'ಬಂದ್ರ ಮಣಕಾಲಮಟ ಬಂದಿರ್ತಾವ' ಅಂದ. ಶಾಂತಗೌಡ ದುರುಗನ್ನ ದಿಟ್ಟಿಸಿ ನೋಡಿದ. ವಾರದ ಹಿಂದಿದ್ದ ದುರುಗ ಈಗಿಲ್ಲ, ಬಾಗಿ ಹೋಗಿದ್ದ. ಎಣ್ಣೆಗಂಪಿನಬಣ್ಣ ಹೋಗಿ ಮಾರೆ ಕಪ್ಪಿಟ್ಟಿತ್ತು. ಜಾಲಿ ಕೊರಡಿನಂಗಿದ್ದ ದೇಹ ಕುಸುದಂಗ ಕಂಡಿತು. ಸದಾ ಶಾಂತಗೌಡನ ಹಿಂದಿರುತ್ತಿದ್ದರಿಂದ, ಜಳಜಳ ಬಟ್ಟೆ ಹಾಕ್ಕೊಂಡಿರುತ್ತಿದ್ದ. ದುರುಗ ಚೆಲುವಾದ ಮನುಷ್ಯ ಅಂತ ಊರುಕೇರಿಗೆ ಗೊತ್ತು.

'ದುರುಗಾ, ನೀನು ಮೆತ್ತಗಾದಿ' ಅಂದ ಶಾಂತಗೌಡ'

'ಯಪ್ಪಾ, ಮಗ ಮಾಡದ್ಕ ನಾನೇನು ಮಾಡ್ಲಿ. ದೇವ್ರು ಮಾಡದ್ಕ ನಾನೇನು ಮಾಡ್ಲಿ. ನಾನೇನಾದ್ರ ನಿನಗ ಎಲ್ಲ ಬಗದೀನಾ/ ಅಂದ, ದುರುಗ. ' ನನ್ಗೂ ಥಿಳಿವಲ್ದಂಗಾಗ್ಯಾದ, ದುರುಗ. ನಿನ್ನ ಮಗನ್ನ ಆವಾಗ ನೆನಿಸಿಕಂಡ್ರ ಮುದ್ದು ಬರ್ತತ್ತು. ಈಗ ನೆನಪಾಗಿ ಕಾಡ್ತಾನ. ನನ್ನ ಮನೆತನಕ್ಕ ಮಸಿ ಬಳ್ಯಾಕ ನಿಂತು ಬುಟ್ಟಾನ... ದುರುಗಾ ಮಸಿ ಬಳ್ಯಾಕ!' ಅಂದು ಹಲ್ಲುಕಡುದ, ಶಾಂತ

ಕಾದುಕೊಂಡು ನೋಡಿ ನನ್ಗ ಬಂದು ಹೇಳು ಚೆನ್ನನನ್ನ ಕಡಿಸಿ, ಸಣ್ಣಾಗಿ ಕಡಿಸಿ ತುಂಗಮ್ಮನಲ್ಲಿ ಚೆಲಿಸಿ ಬಿಡ್ತೀನಿ! ಏನ? ಆ ಮ್ಯಾಲೆ ಜಲ್ದಿ ಅಕ್ಕಮ್ಮನ್ನ ಈ ಮನೆಗೆ ಸೊಸೆಯನ್ನಾಗಿ ಮಾಡ್ಕೋತೀನಿ.

ಗೌಡ.

'ಯಪ್ಪ ನನ್ಗ ನಿನ್ಗ ಬುಡುದ ನಂಟು ನೀನಿದ್ದಲ್ಲಿ ನಾನು, ನಾನಿದ್ದಲ್ಲಿ ನೀನು ನನ್ಗ ನಿನ್ಗ ಕುಲಯಿಲ್ಲ ಜಾತಿಯಲ್ಲ. ಹಂಗ ನಡಕಂಡು ಬಂದೀವಿ.....' ಅಂದು ಸುಮ್ಮನಾದ.

ಹೋಗ್ಲಿ ಬುಡು. ಅಂದಂಗ, ತುಂಗಮ್ಮನ್ನ ದಾಟದಾತಾದಿಲ್ಲ ನೋಡು.

ದುರುಗಗ ಅದಕ್ಕಿಂತ ಮೂರು ಪಟ್ಟು ನೀರಿದ್ದಾಗ ಹೊತಗಂಡು ದಾಟ್ಸಿದ್ದ ಅನುಭವಯಿತ್ತು. 'ನನ್ನ ಎದ್ಯಾಗ ಜೀವ ಇರತನ್ಕ ದಾಟ್ತೀನಿ, ಬಾಪ್ಪ' ಅಂತ ಕುಂತ. [illegible] ಕಟ್ಟಿಕೊಂಡು ಬೆನ್ನ ಹಿಂದೆ ಬಂದು ಕಾಲಾಕಿ ಭುಜದ ಮ್ಯಾಲೆ ಕುಂತು, ಎಡಕ್ಕೊಂದು ಬಲಕ್ಕೊಂದು ಎದೆಮ್ಯಾಗ ಕಾಲಾಕಿ ದುರುಗನ ತಲೆ ಹಿಡಕಂಡು ಕುಂತ. ಅಗಲವಾದ ಭುಜದ ಮೇಲೆ ಅರಾಮಾಗಿ ಕುಂತದ್ದು ಕಂಡಮ್ಯಾಲೆ ದುರುಗ ಎದ್ದು ನಿಂತುಗಂಡು ತಂಗಮ್ಮನ ಉಡಿಗೆ ಇಳದ. ಯಾಕೋ ಶಾಂತಗೋಡ ಇವತ್ತು ವಜ್ಜ ಅನಿಸಿದ! ಸವಾರಿ ಸಾಗಿತ್ತು ಹಿಂಗ ಸಾಗುವುದು ತುಂಗಮ್ಮ ಅದೆಷ್ಟು ಸಲ ನೋಡಿದ್ದಳೋ. ಇವತ್ತು ದುರುಗನ ಹೆಜ್ಜೆಗಳು ಸಲೀಸ ಅನಿಸಲಿಲ್ಲ ಶಾಂತಗೌಡುಗ. ಧೈರ್ಯದಿಂದ ಬಿಗಿದು ಕುಂತ.

ಆದರೂ ಆಳುಕು ಸುರುವಾಯ್ತು. ದುರುಗ ತನಗ ಗೊತ್ತಿದ್ದ ಕಾಲು ದಾರಿಯಲ್ಲೇ ಹೆಜ್ಜೆ ಇಟಗಂತ ಸಾಗಿದ. ಗುಂಡು, ಬಂಡೆ, ಸಂದು ಕೊರಕಲು ದಾಟುತ್ತ ನೀರಿನೊಳಗಿನ ಅಂತರಗಂಗೆ ಬಂದಲ್ಲಿ ಕಾಲು ಸವರುತ್ತ ಎಲ್ಲವನ್ನು ದಾಟುತ್ತ ನಡೆದ. ಜಿನಿಜಿನಿ ಮಳೆ ಸುರುವಾಯ್ತು ದುಮುದರಿ ಕರಗುವಂಗ ಕಂಡಿತು, ದುರುಗ ಮುಂದ ನೋಡಿ ದಾಟುವಲ್ಲಿ ದಾಟಿ, ಜಿಗಿವಲ್ಲಿ ಮೆಲ್ಲಕ ಜಿಗುದು, ಸರಿವಲ್ಲಿ ನೋಡಿ ಎಚ್ಚರಿಕೆಯಿಂದ ಸರುದು ಒಮ್ಮೊಮ್ಮೆ ದೊಡ್ಡ ದೊಡ್ಡ ಗುಂಡುಗಳ ನಡುಕ ಹೋಗುವಾಗ ಕೈಯಾಸರೆಗೆ ಗುಂಡುಗಳಿಗೆ ಯಿಟ್ಟು ಸಾಗುತ್ತಿದ್ದ. ಹಿಂಗ ಸಾಗುವುದೆಂದರೆ ಅವುರಿಗೆ ಬಲು ಹಿಗ್ಗು. ಊರುಕೇರಿ ಸುದ್ದಿ, ಮಳಿ ಬೆಳಿ ಸುದ್ದಿ ರುದ್ರಮ್ಮನ ವರ್ಚಸ್ಸಿನ ಸುದ್ದಿ, ಚೆನ್ನನ್ನ ಬೆಳವಣಿಗೆ ಸುದ್ದಿ ಇನ್ನೇನೇನೋ ತಮತಮಗ ತಿಳದಂಗ ಮಾತಾಡುತ್ತ ಸಾಗಿದರೆ ತುಂಗಮ್ಮನ್ನ ಎಷ್ಟೇ ಪ್ರಯಾಸದಿಂದ ದಾಟಿದರೂ ಗೊತ್ತಾತಿದ್ದಿಲ್ಲ. ಆದರೆ ಇವತ್ತು ಮಾತಿಲ್ಲ, ಕತೆಯಿಲ್ಲ. ದುರುಗ ದಾರಿ ಹಿಡಕಂಡು ಮೆಲ್ಲಕ ಹೊಂಟಿದ್ದ. ಅವನೆಂದು ದಾರಿ ಹುಡುಕಿದ್ದಿಲ್ಲ. ಹುಡುಕಿದ ತುಂಗಮ್ಮನ ಮಧ್ಯ ದಮ್ಮು ಬಂದು ಇಳಿಸಿದ. ದಮ್ಮು ಆರಿಸಿಕೊಂಡು ಮತ್ತೆ ಹೊತಗೊಂಡು ಎದ್ದ. ಆ ದಂಡೆ ಬರಹೊತ್ತಿಗೆ ಮತ್ತೊಮ್ಮೆ ಇಳಿಸಿದ. ಶಾಂತಗೌಡುಗ ಎಂಗೆಂಗೋ ಅನಿಸಿತು. ಒಳ ಒಳಗ ಸಿಟ್ಟಿಗೆದ್ದ. ಬಿಳಿಜ್ವಾಳ ಕಣ ಮಾಡಿದ ಮ್ಯಾಲೆ ಹೊಸಮಳೆ ಬರತನ್ಕ ತುಂಗಮ್ಮನ ಇವುರು ದಾಟುತ್ತಿದ್ದರು. ಮಳೆ ಬಂದು ತುಂಗಮ್ಮ ಇಳಿತಿದ್ದಳು. ಟೊಂಕದ ಮಟ್ಟ, ಎದಿಮಟ್ಟ ನೀರಿದ್ದರೂ, ಇಂಥ ಕೊರಕಲಾಗ ದುರುಗ ದಾಟುತ್ತಿದ್ದವನು ಈಗ ಹೆಂಗಾದನಲ್ಲ ಅಂತ ಸಾಂತಗೌಡುಗ ಅನಿಸಿ 'ನಾಕೈದು ಸಲ ಜೀವುಕ್ಕ ಅಪಾಯ ಬಂದಿದ್ದಾಗ ಪಾರು ಮಾಡಿ ದಾಟಿದವುನು' ಅಂತ ದುರುಗನ ಮ್ಯಾಲೆ ಅಭಿಮಾನ ಉಕ್ಕಿತು.ಕಿಸರಾಗಿತ್ತು. ಕಟ್ಟೆಗೆ ಕುಂತವುರು ಶಾಂತಗೌಡಗ ಎದ್ದು ಕೈಮುಗುದರು. ದುರುಗ ಅಲ್ಲಿದ್ದ ಕೆಲಮಂದಿ ಜತಿಗೆ ತಟತಟಗು ಮಾತಾಡುತ್ತ ನಿಂತ. ಅಂಗಳದಾಗ ತನ್ನ ಗಿಡಗಳಿಂದ ಮಾಡಿದ ಬಂಡಿ ನಿಂತಿತ್ತು. ಇವತ್ತು ಯಾಕೋ ಅದರ ಮ್ಯಾಗ ಕೈಯಿಟ್ಟು ಸವರಿ 'ಇನ್ನ ಜುಂ ಅಂದಿಲ್ಲ' ಅಂದುಕೊಂಡ ಶಾಂತಗೌಡನ ಹಿಂದೆ. ರುದ್ರಮ್ಮನ ಹನ್ನೆರಡೆತ್ತಿನ ಅಂಕಣದ ಮನೆಯೊಳಗೆ ಸುತ್ತಲೂರಿನ ಹತ್ತಾರು ಮಂದಿ ಗಣ್ಯರು ಆಕೆಯ ಎಡುಬಲಕ್ಕೆ ಕುಂತಿದ್ದರು. ಶಾಂತಗೌಡ ಹೋಗಿ ಪಕ್ಕದಲ್ಲಿ ಕುಂತ. ಅಲ್ಲಿದ್ದವರ ಜತಿಗೆ ಕುಶಲ ನಡಿತು. ದುರುಗ ಅಂಕಣಕಟ್ಟೆಗೆ ಕುಂತ ರುದ್ರಮ್ಮ ತನ್ನನ್ನೇ ನೋಡಿದಂತೆ ಅನಿಸಿತು. ತಲೆ ಕೆಳಗ ಹಾಕಿದ. ದುರುಗ ರುದ್ರಮ್ಮನ್ನ ಎಳೇ ವಯಸ್ಸಿನಿಂದ ನೋಡಿದವನು. ಈ ಮನೆಗೆ ಬಂದಾಗಿನಿಂದಲೂ ನೋಡುತ್ತ ಬಂದವನು. ಕಣ್ಣು ಮುಚ್ಚಿ ಕಣ್ಣು ತೆರೆದ್ರಾಗ ರುದ್ರಮ್ಮಮ್ಮ ಬೆಳುದು ಬುಟ್ಟಳು ಅಂತ ಅನಕಂತಿದ್ದ. ಆಕೆ ಈ ಮನೆ ಸೇರಿದ ಮ್ಯಾಲೆ ಮ್ಯಾಲಿಂದ ಮ್ಯಾಲೆ ಆರೇಳು ವರ್ಷಕ್ಕೆ ನಾಲ್ಕು ಮಕ್ಕಳಾದುವು. ಎರಡು ಹೆಣ್ಣು, ಎರಡು ಗಂಡು. ಇಬ್ಬರು ಹೆಣ್ಣು ಮಕ್ಕಳ ಮದಿವಿ ಒಮ್ಮೆ ಆಯಿತು. ಮೂರು ವರ್ಷದ ಹಿಂದೆ ಒಬ್ಬ ಹುಡುಗನ ಮದಿವಿಯಾಗಿ ಆತ ಒಕ್ಕಲುತನ ಮಾಡಿಸುತ್ತಿದ್ದ. ಕೊನೆಯ ಮಗ ರಾಯಚೂರಲ್ಲಿ ಓದುತ್ತಿದ್ದ. ಈತನಿಗೆ ಶಾಂತಗೌಡನ ಮಗಳನ್ನು ತಂದುಕೊಳ್ಳಬೇಕಂತ ರುದ್ರಮ್ಮನ ಮನಸ್ಸಿತ್ತು. ಅದಕ್ಕಾಗಿ ಚಿಕ್ಕಂದಿನಿಂದ ತನ್ನ ಮಕ್ಕಳ ಜತೆ ಓದಲು ಇಟ್ಟುಕೊಂಡಿದ್ದಳು. ರುದ್ರಮ್ಮನ ಗಂಡ ಈಗ ಆರೇಳು ವರ್ಷದಿಂದೆ ಸತ್ತ. ಸತ್ತಮ್ಯಾಲೆ ದೊಡ್ಡ ವತನವನ್ನು ರುದ್ರಮ್ಮ ಕೈಯಿಗೆ ತಗಂಡು ನಡೆಸಲು ನಿಂತಳು. ಮೂರು ನಾಲ್ಕು ವರ್ಷ ತಿರುಗುವುದರಲ್ಲಿ ಹತ್ತಾರು ಹಳ್ಳಿಗೆ ಹೆಸರು ಚಾಚಿದಳು. ಅದೆಂಗೋ ಏನೋ ಇದ್ದುಬಿದ್ದ ಮಂದಿ ಬಂದು ಬಂದು ಬಗ್ಗಿದರು. ಜಗಳ ಲೂಟಿ, ಕೊಲೆ ಸುಲಿಗೆ ಗಂಡ-ಹೇಣ್ತಿ ಜಗಳ ಮೊದಲು ಮಾಡಿ ಇಲ್ಲಿ ಬಗೆಹರಿಯಬೇಕು. ಹೆಚ್ಚು ಕಮ್ಮಿ ಸುತ್ತಲೂರಿನವರ ವ್ಯವಹಾರವೆಲ್ಲ ಈಕೆಯನ್ನು ಕೇಳಿಯೇ ನಡೆಯುತ್ತಿದ್ದವು. ಈಗೀಗಂತೂ ಆಕೆ ಹೊರಗೆ ಕಾಲಿಡದಿದ್ದರೂ ಆಕೆ 'ಹಂ' ಅಂತ ಒಪ್ಪಿಗೆ ಕೊಡದಿದ್ದರೆ ಒಂದು ಮದುವೆ ನಡಿತಿದ್ದಿಲ್ಲ. ಆ ಸುತ್ತಿನ ಸರಹದ್ದಿನಲ್ಲಿ ಒಂದು ಗುಬ್ಬಿ ಚಿಂವ್ ಅಂತ ಅಂದರೆ ಹರಿವ ತುಂಗಮ್ಮ ನಿಲ್ಲಬೇಕು. ಇಂಥ ವರ್ಚಸ್ಸು ಆಕೆದೀಗ. ಶಾಂತಗೌಡ ಬಂದು ಕುಂತಮ್ಯಾಲೆ ರುದ್ರಮ್ಮ ಮಾತಾಡಲಿಲ್ಲ. ಮನೆಯೆಂಬೋ ಮನೆ 'ಗೌವ್' ಅಂತು. ಆಗ ಒಬ್ಬೊಬ್ಬರೆ ಎದ್ದು ಹೊರಗೆ ಬಂದರು. ದುರುಗನಿಗೆ ಅಂಜಿಕೆಯಾಯಿತು... ದುರುಗಪ್ಪ, ಅಂದಳು ಅಮ್ಮ.

'ಯಮ್ಮೊ..... ಯಮ್ಮಾ.....' ಅಂದು ಮಿಟ್ಟಿ ಬಿದ್ದು.

'ಬೇಸಿದ್ದೇನು? ಯಾಕ ಮೆತ್ತಗಾದಂಗ ಕಾಣ್ತದ?

'ಇಲ್ಲ ತಾಯಿ, ಬೇಸೀನಿ..... ನಿನ್ನ ನೆಳ್ಳಾಗ... ಅಂದ, ನಿಂತಲ್ಲೆ ಚಡಪಡಿಸಿ.

'ನೀನು ನಮ್ಮವನು. ತಣ್ಣಗಿರು. ಸಾಯತನ್ಕ ಬೇಸಿರು ಏನ...' ಅಂದು ಎದ್ದಳು. ಶಾಂತಗೌಡ ಎದ್ದ. ಆಕೆ ತಮ್ಮನನ್ನು ಮಾಳಿಗೆ ಮನೆಗೆ ಕರಕೊಂಡು ಬಂದಳು. ಅಲ್ಲಿ ರುದ್ರಮ್ಮನ ಹಿತೈಸಿ ನಾಗಮ್ಮ ಕುಂತಿದ್ದಳು. ಈ ಸುತ್ತಿಗೆಲ್ಲ ಆಕೆ. ಶರಣೆನಾಗಮ್ಮ ಎಂದೇ ಕರೆಸಿಕೊಂಡಿದ್ದಳು. ರುದ್ರಮ್ಮನ ವರ್ಚಸ್ಸು ಹೆಚ್ಚಿದ ಮ್ಯಾಲೆ ಆಕೆ ಇಲ್ಲಿ ಬಂದು ಸೇರಿದ್ದಳು. ರುದ್ರಮ್ಮ ಆಕೆಯ ಮಾತಿನಂತೆ ನಡಿತಿದ್ದಳು. ಶಾಂತಗೌಡ ಆಕೆಯ ಪಾದಕ್ಕೆ ಸಣಮಾಡಿದ. ' ಶಾಂತಪ್ಪ, ದುರುಗ ಬದಿಕ್ಕೊಂಡು ನಮ್ಮಲ್ಲಿರ್ಲಿ. ಅವುನಿಗೆ ತ್ರಾಸು ಮಾಡದು ಬ್ಯಾಡ. ಚೆನ್ನಗ ನಾನೇ ಹೇಳಿ ಕಳಿಸಿದ್ದೆ ' ನಮ್ಮ ತಂಟೆಗೆ ಬರಬ್ಯಾಡ. ಬೇಕಾದ್ರ ನೀನು ಬಯಸಿದ ಹೆಣ್ಣನ್ನ ತಂದು ನಾನೇ ಮಾಡ್ತೀನಿ. ಯಾಕಂದ್ರ ನೀನು ನಮ್ಮ ದುರುಗನ ಮಗ. ಅದ್ಕಂತ ಹೇಳ್ತೀನಿ' ಅಂತ ಅವುನು, 'ನೀವ್ಯಾರು ನನ್ನ ಮದಿವಿ ಮಾಡಲಿಕ್ಕೆ? ಬೇಕಾದ್ರೆ ಅಕ್ಕಮ್ಮ ನನ್ನ ಮಾಡ್ಕೆಂತೀನಿ ಅಂದಾಳಲ್ಲ. ನಿಂತು ಮಾಡ್ರಿ' ಅಂತ ಅಂದನಂತ. ಶಾಂತಪ್ಪ, ಸುದ್ದಿ ನಾಕಮಂದಿ ಬಾಯಿಗೆ ಹೋಗದು ಬ್ಯಾಡ! ಪಾಪ... ಅಕ್ಕಮ್ಮ ಏನೋ ಮನಸುಕೊಟ್ಟಾಳ! ಅದಕ್ಕೇನು ತಿಳಿತಾದ? ನಮ್ಮ ಮರ್ಯಾದಿ, ಮನೆತನದ ಗೌರವವನ್ನು ನಾವು ಕಾಪಾಡಿಕೊಳ್ಳಬೇಕು. ನೋಡು, ಇದನ್ನು ಬೆಳಸದು ನನಗಿಷ್ಟಯಿಲ್ಲ. ಈ ವಾರಾದಾಗ ಅವುನು ಊರಿಗೆ ಬರ್ತಾನ. ಕಾದುಕೊಂಡು ನೋಡಿ ನನ್ಗ ಬಂದು ಹೇಳು ಚೆನ್ನನನ್ನ ಕಡಿಸಿ, ಸಣ್ಣಾಗಿ ಕಡಿಸಿ ತುಂಗಮ್ಮನಲ್ಲಿ ಚೆಲಿಸಿ ಬಿಡ್ತೀನಿ! ಏನ? ಆ ಮ್ಯಾಲೆ ಜಲ್ದಿ ಅಕ್ಕಮ್ಮನ್ನ ಈ ಮನೆಗೆ ಸೊಸೆಯನ್ನಾಗಿ ಮಾಡ್ಕೋತೀನಿ. ನೀನು ಇವತ್ತು ಊರಿಗೆ ಹೋಗಿಬುಡು. ಚೆನ್ನ ಬಂದ್ರ ನನ್ಗ ಸುದ್ದಿ ತಿಳುಸು' ಅಂದ, ರುದ್ರಮ್ಮ ಎದ್ದಳು. ಶಾಂತಗೌಡ ಭಯಂಕರ ಭಯದಲ್ಲಿಯೂ ಹಿಗ್ಗಿದ! ಮೈ ತುಂಬಿ ಉಸುರಾಡಿದ!

ಇದಕೇಳಿ ನಾಗಮ್ಮ ಹೌಹಾರಿ, 'ರುದ್ರಮ್ಮ, ದುಡುಕದು ಬ್ಯಾಡವ್ವ!' ಅಂದಳು' ಅಮ್ಮ ನನ್ನ ಮಾರಿಗೆ ಮಸಿ ಬಳಿವ ಗಂಡಸು ಇರಬಾರದು! ನಾನು ಬದಿಕಿರುವ ತನಕ! ಚೆನ್ನ ಮಾದಿಗ. ಅಂದ್ರೂ ಅವುನು ಧೈರ್ಯವಂತನೇ ಸರಿ! ಅದ್ರೆ ನನ್ನ ಗತಿ? ಅಂತ ತಣ್ಣಗ ಅಂದಳು ಮತ್ತೆ ಯಾರಿಗೂ ಮಾತು ಏಳಲಿಲ್ಲ! ಸಲುಪೊತ್ತು ಬಿಟ್ಟು ರುದ್ರಮ್ಮ ' ಶಾಂತಪ್ಪ, ನೀನು ಊರಿಗೆ ಹೋಗು. ಹೋಗುವಾಗ ಅಕ್ಕಮನ್ನ ಮಾತಾಡಿಸಿ ಹೋಗು' ಅಂದಳು. ಶಾಂತಗೌಡ ಮಗಳು ಅಕ್ಕಮಹಾದೇವಿ ಮಲಗಿದ್ದ ಕೋಣೆಗೆ ಬಂದ.

'ಯಾವಾಗ ಬಂದೆಪ್ಪ' ಅಂತ ಹಿಗ್ಗಿ ಕೇಳಿದಳು. ಆಕೆಗೆ ತಂದೆನ್ನ ಕಂಡು ಖುಷಿಯಾಯಿತು. ಶಾಂತಗೌಡ ಕಣ್ಣು ತುಂಬ ನೋಡಿದ. ತೆಳ್ಳಗೆ, ಬೆಳ್ಳಗೆ, ಎತ್ತರದ ನಿಲುವಿನ ಮಗಳನ್ನು ನೋಡಿ ಹೆಣ್ತೀನ್ನ ನೆನೆಸಿಕೊಂಡು ' ಈಗ ಬಂದ್ನೆವ್ವ. ಬೇಸಿದ್ದೆಲ್ಲ...' ಅಂತ ತಲಿಮ್ಯಾಗ ಕೈಯಿಟ್ಟ. ' ಅಪ್ಪ, ನಾನು ನಿನ್ನಿಂದೆ ಊರಿಗೆ ಬರ್ತೀನಿ, ಕೂಡಿ ಹೋಗಮು' ಅಂದಳು ಗಟ್ಟಿ ದನಿಯಲ್ಲಿ.

'ಯಾವದಕ್ಕ ಕಮ್ಮಿ ಅದವ್ವ ಈ ಮನ್ಯಾಗ...? ನಾನೇ ಬಂದು ಬಂದು ಹೋಗ್ತಿನಲ್ಲೆ...

'ನನಗ ಸಾಕು ಈ ಮನೆ! ನಾನು ನಮ್ಮ ಮನ್ಯಾಗ ನಿನ್ನ ಜತಿಗೆ ಇರ್ತೀನಿ!'

ಶಾಂತಗೌಡಗ ಚಿಂತಿಯಾಯಿತು. ಅಕ್ಕನ ಮಗ, (ಅಕ್ಕಮ್ಮನನ್ನು ಮದುವೆಯಾಗುವವ) ಮೊಮ್ಮಕ್ಕಳು ಎಲ್ಲರೂ ಕೂಡಿ ರಾಯಚೂರಿನಲ್ಲಿ ಓದುತ್ತಿದ್ದರು. ರುದ್ರಮ್ಮನೇ ಅಕ್ಕಮಹಾದೇವಿಯನ್ನು ಕರೆಸಿ ಇಟ್ಟುಕೊಂಡು ಓದಿಸುತ್ತಿದ್ದಳು. ಹಂಪಮ್ಮ ಸತ್ತಮ್ಯಾಲಿಂದಲೂ ಮಗಳು ಇಲ್ಲಿಯೇ. ಉಳಿದುಕೊಂಡಿದ್ದಳು. ಅಕ್ಕಮಹಾದೇವಿ ಓದುವ ಕಾಲೇಜಿಗೆ ಚೆನ್ನ ಪಾಠಮಾಡಲು ಸೇರಿಕೊಂಡ ಮೇಲಿಂದ ಅವರಿಬ್ಬರ ನಡುವೆ ಮಾತುಕತೆ ನಡದು ಈಗ ಒಂದಾಗಲು ನಿಂತಿದ್ದರು. ಅಕ್ಕಮಹಾದೇವಿಗೆ ಚೆನ್ನ ದುರುಗನ ಮಗ ಅಂಬೋದು ಈಗೀಗ ಗೊತ್ತು. ರುದ್ರಮ್ಮನಿಗೆ ಇದು ಗೊತ್ತಾಗಿದ್ದೇ ತಡ, ಸೊಸೆಗೆ ಏನೂ ಅನ್ನದೆ ಒಳ ಒಳಗೆ ಬಂದೋಬಸ್ತು ಮಾಡಲು ಯೋಚಿಸಿದ್ದಳು. ಶಾಂತಗೌಡ ಮಾತ್ರ ಇದಕೇಳಿ ದಿನಾಲು ಉರಿಯತೊಡಗಿದ್ದ!

'ಅಪ್ಪ, ನಾನೂ ಬರ್ತೀನಿ ಅಂದೆ...! ನಿನ್ನ ಜತಿಗೆ ಮಾತಾಡುವದಿದೆ!' ಅಂದಳು.

'ಹೂಂನಮ್ಮ ಬರವಂತಿಗಿ. ಅದ್ರ ಇದ್ದಕ್ಕಿದ್ದಂಗ ತಯಾರಾಗಿ ಬಂದ್ರ ಅಕ್ಕ ಏನಂತಾಳೊ...! ಅದ್ರಾಗ ಮಳೆ ಬ್ಯಾರೆ ಸುರುವಾದಂಗ ಕಾಣಸ್ತಾದ. ನೀನು ಬಸ್ಸು ಹಿಡಕಂಡು ಬರವಂತೀಗಿ. ನಾನು ಇವತ್ತು ಹೋಗಿ ನಾಳೆ ನಾಡದು ಬರ್ತೀನಿ. ಕೂಡಿ ಹೋಗಮು' ಅಂತಂದ.

'ನಾನು ದಾರಿ ನೋಡ್ತೀನಿ. ಬರ್ಲಿಲ್ಲಂದ್ರ... ನಾನೇ ಬಂದು ಬುಡ್ತೀನಿ' ಅಂದಳು. ಶಾಂತಗೌಡ ಒಪ್ಪಿಗೊಂಡು 'ಬೇಸಿರವ್ವ' ಅಂದು, ಕಣ್ತುಂಬ ನೋಡಿ, 'ಬರ್ತಿನವ್ವ' ಅಂತಂದು ಹೊರಗೆ ಬಂದ.

ಪಡಸಾಲೆಯಲ್ಲಿದ್ದ ಅಕ್ಕ 'ನಾ ಹೇಳಿದಂಗ ಮಾಡು' ಅಂತ ನೆನಪಿಸಿದಳು.

'ಹಂ' ಅಂದು ಹೊರ ಅಂಗಳಕ್ಕೆ ಬಂದ. ಅದೇ ಯಥಾರೀತಿ ಮಾಡ ಮುಚ್ಚಿ ಮಬ್ಬು ಕವಿದಿತ್ತು. ಅಲ್ಲಿದ್ದ ನಾಕಾರು ಮಂದಿ ಎದ್ದುನಿಂತರು. ಒಬ್ಬ 'ಯಪ್ಪ, ಈಗ ಇಲ್ಲೇಯಿದ್ದ. ನಾಗಮ್ಮವ್ವ ಕರೆದಳು. ಮ್ಯಾಗ ಹೋದ' ಅಂದ

ಗಡಿಬಿಡಿಯಲ್ಲಿದ್ದ ಶಾಂತಗೌಡ, 'ನಾನು ಮೆಲ್ಲಕ ಹೋಗ್ತೀನಿ. ಅವುನಿಗೆ ಬಾ ಅಂತ ಹೇಳು. ತುಂಗಮ್ಮನ ದಂಡಿಗೆ' ಅಂತ ಹೇಳಿ ಕಾಲೆಳಕಂಡು ನಡೆದ.

ಶಾಂತಗೌಡ ಎಂಥದೋ ಗುಂಗಿನ್ಯಾಗ ಮುಳುಗಿ ತುಂಗಮ್ಮನ ದಂಡೆಗೆ ಬಂದು ನಿಂತ. ಇನ್ನ ಬರಲಿಲ್ಲ ಇವನು ಅನಕಂಡು ಸುತ್ತ ಮುತ್ತ ನೋಡಿದ. ಮುಗುಲು ಕರಿ ಮಾಡದಿಂದ ಮುಚ್ಚಿತ್ತು. ಪಡುವಣದಾಗ ಮುಗುಲ ನಿಚ್ಚಳ ಕಂಡಿತು. ಆದ್ರ ಸೂರಿಯ ಕಾಣಲಿಲ್ಲ. ಅಲ್ಲಿ ಬರೀ ಕೆಂಪು ತುಂಬತೊಡಗಿತ್ತು. ದುರುಗ ಯಾಕ ಬರಲಿಲ್ಲ... ಜಲ್ದಿ ಹೋಗಬೇಕಂದ್ರ..' ಅಂತ ಚಡಪಡಿಸಿದ. ಸಿಟ್ಟಿನಿಂದ ಉಸುರಾಡಿದ ದುರುಗ ಊರ ದಾರಿಯಿಂದ ಬುಡುಬುಡು ಓಡಿ ಬರ್ತಿದ್ದ. ಶಾಂತಗೌಡ ನೋಡುತ್ತಿದ್ದಂಗೆ ಬಗಲಾಕ ಬಂದ. ದುರುಗಗೆ ಉಸುರುಗಟ್ಟಿ ದಮ್ಮು ಹತ್ತಿದಂಗಾಗಿತ್ತು. ಆತನನ್ನು ನೋಡಲು ಭಯವಾಯ್ತು! ಬಂದವನೆ ಮಾತಿಲ್ಲ ಕತೆಯಿಲ್ಲ. ತುತುಗುಂಡೆಲೆ ಕುಂತ. ಅವನು. ಕುಂತ ಗತ್ತಿಗೆ, 'ಕುಂತ್ಕಷ್ಟೋ ಬಡಾನ ಅಂತ ಗದರಿಸಿದಂಗಿತ್ತು. ಶಾಂತಗೌಡ ಹೆಗಲಮ್ಯಾಲ ಕುಂತ. ದುರುಗ ಬಡಕ್ಕನೆ ಎದ್ದು ದಾಪುಗಾಲು ಹಾಕುತ್ತ ಅವಸರದಿಂದ ಬುಡುಬುಡು ಓಡಲು ನೋಡಿದ! ಸತುವ ಸಾಲದಾಯ್ತು! ಆದರೂ ಓಡಲುತೊಡಗಿದ. 'ಮೆಲ್ಲಕಲೇ, ದೆವ್ವ ಬಡ್ಕಂಡಂಗ

ಅವುನಿಗೆ ತುಂಗಮ್ಮ ಕೆಂಪಗ ಕಂಡಳು. ಅದು ಸಮುದ್ರ ಕಂಡಂಗಾಯ್ತು! ಸಮುದ್ರದಾಗ ಜ್ವಾಲಾಮುಖಿ ಸಿಡದಂಗ ಚಿತ್ರ ಕಂಡಿತು.

ಮಾಡಕತ್ತಿದ್ದೆಲ್ಲ' ಅಂತ ಗದರಿಸಿದ. ದುರುಗನ ತಲ್ಯಾಗ ಕಾವ ಬಂದಿತ್ತೋ ಅಂಬಂಗ ದುಡುದುಡು ತುಂಗಮ್ಮನಾಗ ಇಳಿದ. ಮಾತಿಲ್ಲ ಕತೆಯಿಲ್ಲ. ಮ್ಯಾಲೆ ಮಳೆ ಆಗ್ತಾಂಗಿದೆ... ನೀರು ಬಂದಾವೊ ಅಂತ ದುರುಗನಿಗೆ ಒಂದು ಕ್ಷಣ ಅನಿಸಿದ್ರೂ ಅವನ ಕ್ಯಾಲೀ ಅದರ ಕಡಾಗಿಲಿಲ್ಲ. 'ಮೆಲ್ಲ...

ಪುಟ 10ಕ್ಕೆ

ಅಕ್ಷರದ ಬೆನ್ನುಹತ್ತಿದ ಅಮೂಲ್ಯ ದಾಖಲೆ

ಮಣೆಗಾರ

ಕನ್ನಡ ಸಾಹಿತ್ಯ ಲೋಕದಲ್ಲಿ ನೊಂದವರ ನಿಟ್ಟುಸಿರಿನ ಆತ್ಮಕಥಾನಕಗಳು ತೀರಾ ಕಡಿಮೆ. ಮರಾಠಿಯಲ್ಲಿ ಬಂದ ನೊಂದವರ ಆತ್ಮಕಥಾನಕಗಳು ಸಾಹಿತ್ಯ ಲೋಕವನ್ನು ಒಂದಿಷ್ಟು ಅಲುಗಾಡಿಸಿದೆ. ಮಾತ್ರವಲ್ಲ, ಸಮಾಜದ ತಿರಸ್ಕಾರಕ್ಕೆ ಒಳಗಾದ ಜನಾಂಗಗಳ ನೋವಿನ ಪ್ರಪಂಚವನ್ನು ಎಳೆಎಳೆಯಾಗಿ ಬಿಡಿಸಿಟ್ಟಿತು. 'ಉಚಲ್ಯಾ', 'ಗವಾಳ', 'ಅಕ್ರಮಸಂತಾನ' ಇಂತಹ ಕೃತಿಗಳು. ಮರಾಠಿಯಿಂದ ಅನುವಾದಗೊಂಡು ದಲಿತ ಲೋಕದ ತಲ್ಲಣಗಳನ್ನು ಕನ್ನಡದ ಓದುಗರಿಗೂ ಪರಿಚಯಿಸಿದೆ.

ಈ ಪ್ರಭಾವವೋ ಏನೋ ಕನ್ನಡದಲ್ಲಿಯೂ ಇಂತಹ ಲೋಕದ ಬಗ್ಗೆ ಬೆಳಕು ಚೆಲ್ಲುವ, ಈ ನೋವನ್ನು ಹಿಡಿಯಲ್ಲಿ ಹಿಡಿದುಕೊಡುವ ಆತ್ಮಕಥೆಗಳು ಬರುತ್ತಿವೆ. ಅರವಿಂದ ಮಾಲಗತ್ತಿ ಅವರ 'ಗೌರ್ಮೆಂಟ್ ಬ್ರಾಹ್ಮಣ' ಸಿದ್ದಲಿಂಗಯ್ಯನವರ 'ಊರುಕೇರಿ' ಇದರಲ್ಲಿ ಪ್ರಮುಖವಾದದ್ದು. ಈ ಸಾಲಿಗೆ ಇತ್ತೀಚಿನ ಸೇರ್ಪಡೆ ತುಂಬಾಡಿ ರಾಮಯ್ಯ ಅವರ 'ಮಣೆಗಾರ'.

ಚಪ್ಪಲಿ ಹೊಲೆಯುವ ಕುಟುಂಬದಲ್ಲಿ ಹುಟ್ಟಿದ ತುಂಬಾಡಿ ರಾಮಯ್ಯ ಅಕ್ಷರದ ಬೆಳಕನ್ನು ಹಿಂಬಾಲಿಸಿ ಬೆಳೆದು ಈಗ ತಮ್ಮ ಇಡೀ ಜನಾಂಗದ ಬಗ್ಗೆ ಕಣ್ಣೋಟ ನೀಡಿದ್ದಾರೆ.

ತುಂಬಾಡಿ ರಾಮಯ್ಯ ತುಮಕೂರು ಜಿಲ್ಲೆ ಕೊರಟಗೆರೆಯ ತುಂಬಾಡಿಯವರು. ಗೆಳೆಯರ ಬಳಿ ತಮ್ಮ ನೋವಿನ ಅನುಭವಗಳನ್ನು ಹೇಳುತ್ತಿದ್ದಾಗ ಅವರ ಒತ್ತಾಯದಂತೆ ಈ ಅನುಭವಗಳನ್ನು ಅಕ್ಷರಕ್ಕಿಳಿಸಿದ್ದರ ಪರಿಣಾಮ 'ಮಣೆಗಾರ'.

ತುಂಬಾಡಿ ರಾಮಯ್ಯನವರ ಈ ಕೃತಿ ಆತ್ಮಕಥನಗಳ ಸಾಲಿನಲ್ಲಿ ಅತ್ಯಂತ ಭಿನ್ನವಾಗಿ ನಿಲ್ಲುವುದು ತನ್ನ ನಿರುದ್ವಿಗ್ನ ಶೈಲಿಯಿಂದ. ಇಲ್ಲಿ ತುಂಬಾಡಿ ರಾಮಯ್ಯ ಇತರ ಕಥಾನಕಗಳಂತೆ ತಮ್ಮ ಅನುಭವಗಳನ್ನು ಬಣ್ಣಿಸುವುದಿಲ್ಲ, ಬದಲಿಗೆ ಮುಂದಿಡುತ್ತಾರೆ. ಬಣ್ಣಿಸಲು ಹೋದಾಗ ಯಾವುದೇ ಅನುಭವಗಳು ಬಣ್ಣ ಪಡೆಯುತ್ತವೆ. ಇವು ಕೆಲವೊಮ್ಮೆ ಇದ್ದದ್ದನ್ನು ದುಪ್ಪಟ್ಟು ಮಾಡಿ ಹೇಳಿದರೆ, ಇನ್ನೂ ಕೆಲವೊಮ್ಮೆ ಬರೆದವನ್ನು ವಿಜೃಂಭಿಸುವ ಮಟ್ಟಕ್ಕೇ ಹೋಗುತ್ತದೆ. ಇಂತಹ ಕಥನಗಳನ್ನು ಓದುಗರೂ ಸಹ 'ಅತಿರಂಜಿತ' ಎಂಬ ಗುಮಾನಿಯಿಟ್ಟು ಕೊಂಡೇ ಓದುವ ಪರಿಸ್ಥಿತಿಯೂ ಆತ್ಮಕಥಾನಕಗಳ ಕೊರತೆ.

ಆದರೆ ತುಂಬಾಡಿ ರಾಮಯ್ಯ ಇಂತಹ ಕೊರತೆಗಳನ್ನು ಮೀರಿದ್ದಾರೆ. ಯಾವುದೇ ಅಬ್ಬರವಿಲ್ಲದೆ, ತಣ್ಣಗಿನ ದನಿಯಲ್ಲಿ ತಾವು ಕಂಡುಂಡದ್ದನ್ನು ಬಿಡಿಸಿಡುತ್ತಾ ಹೋಗಿದ್ದಾರೆ. ಇಷ್ಟೇ ಆಗಿದ್ದರೆ 'ಮಣೆಗಾರ' ಕೃತಿ ಯಶಸ್ವಿಯಾಗುತ್ತಿರಲಿಲ್ಲವೇನೋ ಆದರೆ ಈ ಕೃತಿ ತನ್ನ ತಣ್ಣಗಿನ ದನಿಯ ಮಧ್ಯೆಯೂ ಸಹಾ ಓದುಗರನ್ನು ಕಲಕಿ ಯೋಚನೆಗೆ ಹಚ್ಚುತ್ತದೆ. ಇದು ಮಣೆಗಾರದ ವಿಶೇಷತೆ.

ದಲಿತರ ನಡುವೆ ಇರುವ ಎಡ ಬಲ ಗುಂಪುಗಳಲ್ಲಿ ಮಾದಿಗರು ಎಡಗೈ ಗುಂಪಿಗೆ ಸೇರುತ್ತಾರೆ. ತುಂಬಾಡಿ ರಾಮಯ್ಯ ಅವರು ಈ ಮಾದಿಗ ಜನಾಂಗವನ್ನು ಮಣೆಗಾರ ಎಂದು ಸಂಬೋಧಿಸಿ ಈ ಹೆಸರಿನಲ್ಲಿಯೇ ಈ ಜನಾಂಗದ ಒಬ್ಬ ಕಟ್ಟಕಡೆಯ ವ್ಯಕ್ತಿಯ ಅನುಭವವನ್ನು ವಿವರಿಸಿದ್ದಾರೆ.

ಚಪ್ಪಲಿ ಹೊಲೆಯುವ ಕುಟುಂಬದಲ್ಲಿ ಹುಟ್ಟಿದ ತುಂಬಾಡಿ ರಾಮಯ್ಯ ಅಕ್ಷರದ ಬೆಳಕನ್ನು ಹಿಂಬಾಲಿಸಿ ಬೆಳೆದು ಈಗ ತಮ್ಮ ಇಡೀ ಜನಾಂಗದ ಬಗ್ಗೆ ಕಣ್ಣೋಟ ನೀಡಿದ್ದಾರೆ. ಸಿದ್ದಲಿಂಗಯ್ಯನವರು 'ಹೊಲೆ ಮಾದಿಗರ ಹಾಡು' ಕವನ ಸಂಕಲನದಲ್ಲಿ ಹೊಲೆ ಮಾದಿಗರ ಅನುಭವವನ್ನು ಮೊಗೆದು ಕೊಟ್ಟ ನಂತರ ಬಂದಿರುವ ಈ ಕೃತಿ ಮಾದಿಗ ಜನಾಂಗದ ನೋವುಗಳನ್ನು ಮುಂದಿರಿಸಿದೆ.

'ಅಕ್ಷರವೆಂದರೆ ಅಕ್ಷರವಲ್ಲ ಅರಿವಿನ ಗೂಡು....' ಎಂಬುದು ಈ ಪುಸ್ತಕ ಓದಿದಾಗ ಮೇಲಿಂದ ಮೇಲೆ ಅನುಭವಕ್ಕೆ ಬರುತ್ತದೆ. ಊಟ ಇಲ್ಲದೆ, ಓದುವ ದಿನಗಳಲ್ಲಿಯೇ ಚಪ್ಪಲಿ ಹೊಲೆಯುತ್ತಾ, ಶಾಲೆಯಲ್ಲಿ ಹುಳ ತುಂಬಿದ ಉಪ್ಪಿಟ್ಟನ್ನು ತಿನ್ನುತ್ತಾ, ತಿನ್ನಲಾಗದವರು ಕೊಟ್ಟಿದ್ದನ್ನು ಮನೆಗೆ ಕಟ್ಟಿಕೊಂಡು ಓಡೋಡಿ ಬರುತ್ತಿದ್ದ, ತಾನು ಅದುವರೆಗೂ ಕಂಡಿಲ್ಲದ ತಿಂಡಿಗಳಿಗಾಗಿ ಗೆಳೆಯರ ಹೋಂವರ್ಕ್‌ಗಳನ್ನು ಮಾಡಿಕೊಡುವ ಬಾಲಕ ಅರಿವಿನ ಬೆನ್ನು ಹತ್ತಿದ್ದರಿಂದಾಗಿ ಇಂದು 'ಮಣೆಗಾರ' ರ ದಿನನಿತ್ಯದ ನಿಟ್ಟುಸಿರ ಬದುಕಿನ ಬಗ್ಗೆ ಬೆಳಕ ಚೆಲ್ಲಲು ಸಾಧ್ಯವಾಗಿದೆ.

ಈ ಪುಸ್ತಕ ಅಸ್ಪೃಶ್ಯತೆಯ ಇಂದಿನ ಸ್ಥಿತಿಯನ್ನು ಹೇಳುತ್ತದೆ. ಎಲ್ಲಾ ಜಾತಿಗಳ ಬಡವರಿಗೂ ಇರಬಹುದಾದ ಸಮಾನ ನೋವನ್ನು ತಿಳಿಸುತ್ತಲೇ ಮಾದಿಗ ಜನಾಂಗಕ್ಕೇ ಭಿನ್ನವಾದ ಅನುಭವವನ್ನು ಮುಂದಿಡುತ್ತದೆ. ಶಾಲೆ ಕಾಲೇಜಿನ ಮೆಟ್ಟಿಲು ಹತ್ತಿದ್ದರ ಜೊತೆಯಲ್ಲಿಯೇ ಸಂಘಟನೆಗಳ ಸಂಪರ್ಕಕ್ಕೆ ಬಂದು ಸಂಘಟನಾಶಕ್ತಿಯ ಅರಿವಾದದ್ದು, ಸಂಘಟನೆಗಳ ಒಳಗಿನ ಶಕ್ತಿ ಹಾಗೂ ಒಡಕು ಎಲ್ಲವನ್ನೂ ತಿಳಿಸುತ್ತದೆ.

ಇದು ಜಾತಿ, ಗ್ರಾಮ, ವ್ಯಕ್ತಿಯ ಬಗೆಗಿನ ಕಣ್ಣೋಟ ನೀಡುವ ಒಂದು ಮುಖ್ಯ ಪುಸ್ತಕ.

- ತಿಂಥಿಣಿ ಮೋನಪ್ಪಯ್ಯ

ಹೊಸ ಓದು

ಮಣೆಗಾರ

ಲೇಖಕರು:
ತುಂಬಾಡಿ ರಾಮಯ್ಯ
981, ಎಚ್.ಎಂ.ಎಸ್. ಶಾಲೆ, TUDA
ಎಕ್ಸ್‌ಟೆನ್ಷನ್, ಸಿರಾಗೇಟ್,
ತುಮಕೂರು-572106

ಬೆಲೆ ರೂ. 65

ಪ್ರಕಾಶಕರು: ಬೋಧಿಶ್ರೀ ಪ್ರಕಾಶನ,
ವಾಟರ್‌ಟ್ಯಾಂಕ್ ಹಿಂಭಾಗ,
ವಿದ್ಯಾನಗರ, ತುಮಕೂರು-572103

ಬಾಬಯ್ಯನ ಜಾತ್ರೆ

'ಮಣೆಗಾರ' ಕೃತಿಯ ಆಯ್ದ ಭಾಗ

ನಮ್ಮೂರಿನಲ್ಲಿ ಮುಸ್ಲಿಮರು ಇಲ್ಲದಿದ್ದರೂ ಬಾಬಯ್ಯನ ಜಾತ್ರೆ ಮಾತ್ರ ಪ್ರತಿವರ್ಷ ನಡೆಯುತ್ತಿದ್ದುದು ಇನ್ನೊಂದು ವಿಶೇಷ. ಬಾಬಯ್ಯನ ಜಾತ್ರೆಯಲ್ಲಿ ಪೂಜೆ ಮಾಡುವುದಕ್ಕಾಗಿಯೇ ಅಕ್ಕಿರಾಂಪುರದಿಂದ ಒಂದು ಮುಸ್ಲಿಂ ಕುಟುಂಬ ಬಂದು ನಮ್ಮೂರಿನಲ್ಲಿ ಕೆಲದಿನಗಳವರೆಗೆ ತಾತ್ಕಾಲಿಕವಾಗಿ ನೆಲೆಸುತ್ತಿತ್ತು. ಊರಿನ ಜನ ಯಾವುದೇ ಬೇಧಭಾವಗಳಿರದೆ, ತಮ್ಮದೇ ಹಬ್ಬವೆನ್ನುವಂತೆ ಬಾಬಯ್ಯನ ಜಾತ್ರೆಯನ್ನು ಸಂತೋಷದಿಂದ ಏಳು ದಿನಗಳವರೆಗೆ ಆಚರಿಸುತ್ತಿದ್ದರು. ಊರಮಧ್ಯದಲ್ಲಿದ್ದ ಚಾವಡಿಯೇ ಬಾಬಯ್ಯನ ದೇವಸ್ಥಾನ. ಬೆಳ್ಳಿಯಿಂದ ಮಾಡಿದ ದೇವರುಗಳನ್ನು ಬಟ್ಟೆಯಲ್ಲಿ ಸುತ್ತಿ ಅವನ್ನೆಲ್ಲಾ ಒಂದು ಹಳೆ ಪೆಟ್ಟಿಗೆಯಲ್ಲಿಟ್ಟು, ಚಾವಡಿಯ ಮೂಲೆಯೊಂದರಲ್ಲಿ ಕಟ್ಟುತ್ತಿದ್ದರು. ಚಾವಡಿಗೆ ಬಾಗಿಲು, ಬೀಗ ಏನೂ ಇರುತ್ತಿರಲಿಲ್ಲ! ಆದರೂ ಬಾಬಯ್ಯನ ಬೆಳ್ಳಿ ದೇವರುಗಳನ್ನು ನಮ್ಮೂರಿನಲ್ಲಿ ಯಾರೂ ಕದಿಯುತ್ತಿರಲಿಲ್ಲ.

'ಅಲಾವಿ' ಗುಂಡಿಗೆ ಗುದ್ದಲಿಪೂಜೆ ಮಾಡುವುದರಿಂದ ಬಾಬಯ್ಯನ ಜಾತ್ರೆ ಆರಂಭವಾಗುತ್ತಿತ್ತು. ಬಾಬಯ್ಯನ ಜಾತ್ರೆ ಆರು ದಿನಗಳು ನಡೆದು, ಏಳನೇ ದಿವಸ 'ಸರಗತ್ತು' ಇರುತ್ತಿತ್ತು. ಒಂದು ಉದ್ದನೆ ಬಿದಿರು ಗಳಕ್ಕೆ ಬಿಳಿ ಬಟ್ಟೆಯನ್ನು ಸುತ್ತಿ, ತುದಿಯಲ್ಲಿ ಕುಚ್ಚನ್ನು ಬಿಟ್ಟು ಕೆಂಪು ಲಾಡಿದಾರದಿಂದ ಕಟ್ಟುತ್ತಿದ್ದರು. ಇದನ್ನು ಹುಸೇನಿ ದೇವರೆಂದು ಕರೆಯುತ್ತಿದ್ದರು. ಬಿದಿರಿನ ಕಡ್ಡಿಗಳಿಂದ ಮಂಟಪವನ್ನು ಕಟ್ಟಿ, ಅದರ ಮಧ್ಯ ಬೆಳ್ಳಿಯ ಹಸ್ತಗಳನ್ನು ಕಟ್ಟುತ್ತಿದ್ದರು. ಈ ದೇವರನ್ನು ಜಾತ್ರೆಯ ಕೊನೆಯದಿನದವರೆಗೂ (ಏಳನೇ ದಿನದವರೆಗೆ) 'ನೆಲೆದೇವರಂತೆ' ಪೂಜೆ ಮಾಡುತ್ತಿದ್ದರು. ಇದರ ಪಕ್ಕದಲ್ಲಿ ಮೂರು ಘೋರಿ ಬಾಬಯ್ಯಗಳನ್ನು ಕಟ್ಟುತ್ತಿದ್ದರು. ಬಾಬಯ್ಯನ ಜಲ್ಲಿಗೆ ಹಿಂದಿನ ರಾತ್ರಿ 'ಸರಗುತ್ತ' ನಡೆಯುತ್ತಿತ್ತು. ಅಲಾವಿ ಗುಂಡಿಯಲ್ಲಿ ಮರದ ದಿಮ್ಮಿಗಳನ್ನು ರಾಶಿಹಾಕಿ ಬೆಂಕಿಹಚ್ಚಿ ಇಡೀ ರಾತ್ರಿ ಅದರ ಸುತ್ತ ಕುಣಿಯುತ್ತಿದ್ದರು. ಇದಕ್ಕೆ ಎರಡು ದಿನ ಮುಂಚೆ ಹುಸೇನಿ ದೇವರನ್ನು ಹೊತ್ತು ತುಂಬಾಡಿ, ಪೆಮ್ಮದೇವರಹಳ್ಳಿ, ಪಕೀರಪ್ಪನ ಪಾಳ್ಯ, ಸುಣ್ಣಕಲ್ಲರ ಪಾಳ್ಯ ಮತ್ತು ಲಂಬಾಣಿ ತಾಂಡಗಳಿಗೆ ಹುಸೇನಿ ದೇವರ ತಮಟೆ ವಾಲಗದ ಸಮೇತ ಮೆರವಣಿಗೆ ಹೊರಡುತ್ತಿತ್ತು. ಹುಸೇನಿ ದೇವರಿಗೆ ಎಲ್ಲ ಮನೆಯವರೂ ಸಕ್ಕರೆ ಓದಿಸಿ ಪೂಜೆ ಮಾಡಿಸುತ್ತಿದ್ದರು. ತಮಟೆ ಮತ್ತು ವಾಲಗದವರು ಹಳ್ಳಿಯವರಿಂದ ರಾಗಿ, ಬತ್ತ ಮತ್ತು ಹಣವನ್ನು ಕಾಣಿಕೆಯನ್ನಾಗಿ ಪಡೆದರೆ, ಪೂಜಾರಪ್ಪನವರು ಅಕ್ಕಿ ಮತ್ತು ಬೇಳೆಯನ್ನು ಮಾತ್ರ ಕಾಣಿಕೆಯನ್ನಾಗಿ ಪಡೆಯುತ್ತಿದ್ದರು.

ಸರಗತ್ತಿನ ದಿನ ಇಡೀ ರಾತ್ರಿ ಎಲ್ಲರೂ ಸೇರಿ 'ಅಲಾವಿ' ಗುಂಡಿಯ ಸುತ್ತ ಕುಣಿಯುತ್ತಿದ್ದರು. ಕುಣಿಯುವುದು ಶುರುವಾಗುವುದಕ್ಕೆ ಮುಂಚೆ ಲಂಬಾಣಿ ತಾಂಡಗಳಿಂದ ಪಾನಕದ ಗಡಿಗೆಗಳು ಬರುತ್ತಿದ್ದವು. ಲಂಬಾಣಿ ಗಂಡಸರು ಬಣ್ಣದ ವೇಷಗಳನ್ನು ಹಾಕಿಕೊಂಡು ಕುಣಿಯುತ್ತಾ ಬರುತ್ತಿದ್ದರೆ, ಸದಾ ಬಣ್ಣದ ಬಟ್ಟೆಗಳನ್ನೇ ಹಾಕಿಕೊಂಡಿರುತ್ತಿದ್ದ ಲಂಬಾಣಿ ಹೆಂಗಸರು ಪಾನಕದ ಗಡಿಗೆಗಳನ್ನು ಹೊತ್ತು ಬರುತ್ತಿದ್ದರು. ಎಲ್ಲ ಕಡೆಯಿಂದಲೂ ಜನರು ಬಂದು 'ಅಲಾವಿ' ಗುಂಡಿಯ ಹತ್ತಿರ ಸೇರುವವರೆಗೂ ತಮಟೆಯನ್ನು ಚಿಕ್ಕ ಹುಡುಗರಾಗಿದ್ದ ನಾವು ಬಡಿಯುತ್ತಿದ್ದೆವು. ಲಂಬಾಣಿ ತಾಂಡಾಗಳಿಂದ ಪಾನಕದ ಗಡಿಗೆಗಳು ಬಂದ ನಂತರ ನಮ್ಮ ಹೆಗಲಲ್ಲಿರುತ್ತಿದ್ದ ತಮಟೆಗಳು ದೊಡ್ಡವರ ಹೆಗಲಿಗೆ ಹೋಗುತ್ತಿದ್ದವು. ಕುಣಿತದ ಗಸ್ತಿ ಹಾಕುವುದರಲ್ಲಿ ನನ್ನ ದೊಡ್ಡಪ್ಪ ನಾಗಣ್ಣ, ಮಾರಕ್ಕನ ಮಗ ಹನುಮಂತಯ್ಯ ಮತ್ತು ನನ್ನಣ್ಣ ಚಿಕ್ಕರಂಗ ನಿಸ್ಸೀಮರು. ಇವರೆಲ್ಲ ತಮಟೆ ಬಡಿಯುವುದರಲ್ಲಿ ನಮ್ಮ ಸುತ್ತಿಗೆಲ್ಲಾ ಹೆಸರುವಾಸಿಯಾಗಿದ್ದರು. ತಮಟೆ ಬಡಿಯುವುದನ್ನು ಇವರೆಲ್ಲಾ ತಪಸ್ಸಿನಂತೆ ಕಲಿತಿದ್ದರು. ಸರಗತ್ತಿನ ದಿನ ಇಡೀ ರಾತ್ರಿಯೆಲ್ಲಾ ತಮಟೆ ಬಡಿದು ಬಡಿದು ಇವರ ಕೈಬೆರಳುಗಳು ಸೀಳಿ ರಕ್ತದ ಕಲೆಗಳಿಂದ ತುಂಬಿಹೋಗಿರುತ್ತಿತ್ತು. ಇವರ ತಮಟೆ ಗಸ್ತಿಗೆ ಎಲ್ಲರೂ ಒಟ್ಟಾಗಿ 'ಹ್ಯಾಹುಸೇನ್, ಬಾ ಹುಸೇನ್ ದಯ್ಯಾ' ಎಂದು ಕೂಗುತ್ತಾ ಕುಣಿಯುತ್ತಿದ್ದರು. ಮಧ್ಯರಾತ್ರಿಯ ಹೊತ್ತಿಗೆ ಕುಣಿಯುತ್ತಿದ್ದವರು ಸುಸ್ತಾಗಿ ಕುಳಿತಮೇಲೆ, ಬಗೆ ಬಗೆಯ ವೇಷಗಳನ್ನು ಧರಿಸಿ ಬಂದವರು ಜನಗಳ ನಿದ್ದೆಯನ್ನು ಓಡಿಸಿ, ಅವರನ್ನು ರಂಜಿಸುತ್ತಿದ್ದರು. ಮಾರಮ್ಮನ ವೇಷ ಹಾಕಿ ಬರುತ್ತಿದ್ದ ಗೂರ ಹನುಮಂತರಾಯಪ್ಪ ಎಲ್ಲರನ್ನೂ ಹೊಟ್ಟೆ ಹುಣ್ಣಾಗುವಂತೆ ನಗಿಸುತ್ತಿದ್ದ. ಇದರ ಹಿಂದೆಯೇ ಹೊಲಗೇಯುವ ಆಟ ಬರುತ್ತಿತ್ತು. ಇಬ್ಬರು ಪ್ರಾಯದ ಹುಡುಗರನ್ನು ಎತ್ತುಗಳನ್ನಾಗಿ ಮಾಡಿಕೊಂಡು, ನೊಗಕ್ಕೆ ಕಟ್ಟಿ 'ಅಲಾವಿ' ಗುಂಡಿ ಸುತ್ತ ಹೊಲ ಗೇಯುವಂತೆ ನಟಿಸುತ್ತಿದ್ದರು. ಜನ ಇದೆಲ್ಲಾ ನೋಡುತ್ತಾ ಕುಳಿತಿರುತ್ತಿದ್ದರು.

ಇದೆಲ್ಲವನ್ನೂ ರೆಪ್ಪೆ ಮುಚ್ಚದಂತೆ ರಾತ್ರಿಯೆಲ್ಲಾ ನೋಡುತ್ತಾ ಕುಳಿತಿರುತ್ತಿದ್ದ ನಮಗೆ ಅದಾವ ಮಾಯದಲ್ಲೋ ನಿದ್ದೆ ಕವಿದುಕೊಳ್ಳುತ್ತಿತ್ತು. ಆದರೆ ಕುಣಿಯುತ್ತಿದ್ದವರ ಕೇಕೆ, ತಮಟೆ ಶಬ್ದ ಹಾಗೂ ಜನಗಳ ಕಿರುಚಾಟದಿಂದ ನಮಗೆ ಬೆಳಗಿನ ಜಾವಕ್ಕೇ ಎಚ್ಚರವಾಗುತ್ತಿತ್ತು. ಎಚ್ಚರವಾಗುತ್ತಿದ್ದ ಹಾಗೆಯೇ, ನಮ್ಮನ್ನು ನೋಡಿದವರು, ಇವರೆಲ್ಲಾ ರಾತ್ರಿಯಿಂದ ಒಂದೇ ಸಮನೆ ಕುಣಿಯುತ್ತಿದ್ದಾರೇನೋ ಎಂಬಂತೆ ನಾವೆಲ್ಲಾ ಬೆಳಗಿನ ಜಾವದ ಗಾಳಿಗೆ ತೂರಾಡುತ್ತಾ ಸುಸ್ತಾದವರಂತೆ ನಟಿಸುತ್ತಾ ಕುಣಿಯುತ್ತಿದ್ದೆವು. ಇವೆಲ್ಲವೂ ಮುಗಿಯುವ ಹೊತ್ತಿಗೆ ಹೊತ್ತು ಮೂಡುತ್ತಿತ್ತು. ಹೊತ್ತು ಮೂಡುತ್ತಿದ್ದಂತೆಯೆ ಕೆಂಡ ಹಾಯುವುದು ಶುರುವಾಗುತ್ತಿತ್ತು. ಕೆಂಡ ಹಾಯುವುದೆಂದರೆ ಅಲಾವಿಗುಂಡಿಯಲ್ಲಿ ರಾತ್ರಿಯೆಲ್ಲಾ ಉರಿದ ಮರದ ತುಂಡುಗಳು ಬೆಳಗ್ಗೆ ಹೊತ್ತಿಗೆ ಕೆಂಡವಾಗಿ, ಅಲಾವಿಗುಂಡಿ ಕೆಂಡದಿಂದಲೇ ತುಂಬಿ ಹೋಗಿರುತ್ತಿತ್ತು. ಬಾಬಯ್ಯನಿಗೆ ಹರಕೆ ಹೊತ್ತವರು ಈ ಕೆಂಡದ ಮೇಲೆ ಮೂರು ಸಲ ನಡೆದು ಹೋಗುತ್ತಿದ್ದರು. (ಓಡಿ ಹೋಗುತ್ತಿದ್ದರೆಂದು ತಿಳಿಯಬೇಕು). ಹರಕೆ ಹೊತ್ತವರೆಲ್ಲ ಕೆಂಡ ಹಾಯ್ದ ನಂತರ ಹೆಣ್ಣುಮಕ್ಕಳಿಗೆ ಕೆಂಡಹುಯ್ಯುವ ಕಾರ್ಯ ಶುರುವಾಗುತ್ತಿತ್ತು. ತಮ್ಮ ಕಷ್ಟಗಳೆಲ್ಲ ಹೂವಿನ ಸರ ಎತ್ತಿದಂತೆ ಪರಿಹಾರವಾದರೆ ಬಾಬಯ್ಯನ ಜಾತ್ರೆಯಲ್ಲಿ ಕೆಂಡ ಹುಯ್ಯಿ ಕೊಳ್ಳುತ್ತೇವೆಂದು ಹೆಣ್ಣುಮಕ್ಕಳು ಹರಕೆ ಕಟ್ಟಿಕೊಂಡಿರುತ್ತಿದ್ದರು. ಹೀಗೆ ಹರಕೆಹೊತ್ತ ಹೆಣ್ಣು ಮಕ್ಕಳು ಅಲಾವಿಗುಂಡಿ ಹತ್ತಿರ ಸಾಲಾಗಿ ಕುಳಿತುಕೊಳ್ಳುತ್ತಿದ್ದರು. ಬಿಳಿಸೀರೆಗಳನ್ನು ಬರುತ್ತಿದ್ದ ಇವರ ಮೇಲೆ ಒಂದು ಬಟ್ಟೆಯನ್ನು ಹಾಕಿ ನೀರು ಸುರಿಯುತ್ತಿದ್ದರು. ಅಲಾವಿಯಲ್ಲಿದ್ದ ಕೆಂಡವನ್ನು ಇವರ ಮೇಲೆ ಮೂರು ಸಲ ಸುರಿಯುತ್ತಿದ್ದರು. ಕೆಂಡ ಸುರಿದ ಕೂಡಲೆ ಹಸಿತೆಂಗಿನ ಗರಿಯಿಂದ ಕೆಂಡವನ್ನು ಗುಡಿಸಿ ಮತ್ತೆ ಅವರ ಮೇಲೆ ನೀರು ಸುರಿಯುತ್ತಿದ್ದರು.

ಬಾಬಯ್ಯನ ಜಾತ್ರೆ ನಡೆಯುತ್ತಿದ್ದ ಏಳು ದಿವಸಗಳಲ್ಲಿ ಊರಿನಲ್ಲಿ ಯಾರ ಮನೆಯಲ್ಲಿಯೂ ಹಂದಿ ಮಾಂಸವನ್ನು ಬೇಯಿಸುವಂತಿರಲಿಲ್ಲ ಹಾಗೂ ಊರಿನ ಒಳಕ್ಕೆ ಯಾವ ಹಂದಿಯೂ ಬರದಂತೆ ನೋಡಿಕೊಳ್ಳುತ್ತಿದ್ದರು. ಜಾತ್ರೆ

ಪುಟ 10 ಕ್ಕೆ

PRB DECR 319-79/79 AIKYARANGA WEEKLY
Reg. No. 17015/64 KRNM/BGS-405 MAG(2)

ಭಾರತ ಕಮ್ಯೂನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್.ನಾಗರಾಜ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India(Marxist), Karnataka State Committee...